ಮೈಸೂರು ಮಿತ್ರ

ಮೈಸೂರು–ಮಂಡ್ಯ–ಚಾಮರಾಜನಗರ–ಕೊಡಗು–ಹಾಸನ

ಬೆಳಗಿನ ಪ್ರಾದೇಶಿಕ ದಿನಪತ್ರಿಕೆ | ಏಪ್ರಿಲ್ 4 ಗುರುವಾರ 2024

ಮೈಸೂರು ಸುದ್ದಿ: ದೂರವಾಣಿ: 2496520/21/26/27/28 ಜಾಹೀರಾತು: 2496522/23
ನಗರ ಕಚೇರಿಗಳು: ಕೆ.ಆರ್. ಸರ್ಕಲ್, ವಿಶ್ವೇಶ್ವರಯ್ಯ ಕಟ್ಟಡ Ph: 2431774, ಡಿ.ದೇವರಾಜ ಅರಸು ರಸ್ತೆ, Ph: 2428695
ಸುದ್ದಿ ಜಾಹೀರಾತಿಗಾಗಿ–ಮಂಡ್ಯ: 8762960325, ಚಾಮರಾಜನಗರ: 9242265657, ಕೊಡಗು: 9731469871

ಸಂಪುಟ: 44 | ಸಂಚಿಕೆ: 346 | ಪುಟಗಳು: 12
ಸುದ್ದಿ, ಫೋಟೋಗೆ: news@mysurumithra.com
ಜಾಹೀರಾತು: ad@mysurumithra.com, website: www.mysurumithra.com

₹4

ಮೈಸೂರಲ್ಲಿ ಬಿಜೆಪಿಯ ಯದುವೀರ್, ಕಾಂಗ್ರೆಸ್‌ನ ಲಕ್ಷ್ಮಣ; ಚಾ.ನಗರದಲ್ಲಿ ಕಾಂಗ್ರೆಸ್‌ನ ಸುನೀಲ್ ಬೋಸ್, ಬಿಜೆಪಿಯ ಬಾಲರಾಜ್ ನಾಮಪತ್ರ ಸಲ್ಲಿಕೆ

ಮುಖ್ಯಮಂತ್ರಿ ಸಿದ್ದರಾಮಯ್ಯ, ಮಾಜಿ ಮುಖ್ಯಮಂತ್ರಿ ಕುಮಾರಸ್ವಾಮಿ ಸೇರಿ ಘಟಾನುಘಟಿ ನಾಯಕರ ಸಾಥ್

● ಅಭ್ಯರ್ಥಿಗಳ ಶಕ್ತಿ ಪ್ರದರ್ಶನ, ಭಾರೀ ಜನಸ್ತೋಮ ● ಮೆರವಣಿಗೆಗೆ ಜಾನಪದ ಕಲಾತಂಡಗಳ ಮೆರಗು ● ಎರಡನೇ ಬಾರಿ ಉಮೇದುವಾರಿಕೆ ಸಲ್ಲಿಸಿದ ಯದುವೀರ್

ಮೈಸೂರು, ಏ.3(ಬಿಎಲ್‌ಯು, ಎಂಟಿವೈ)– ಮೈಸೂರು–ಕೊಡಗು, ಚಾಮರಾಜನಗರ ಲೋಕಸಭಾ ಕ್ಷೇತ್ರಗಳ ಚುನಾವಣಾ ಕಣ ರಂಗೇರಿದ್ದು, ಮುಖ್ಯಮಂತ್ರಿ, ಮಾಜಿ ಮುಖ್ಯಮಂತ್ರಿ ಸೇರಿದಂತೆ ಘಟಾನುಘಟಿ ನಾಯಕರು ಚುನಾವಣಾ ಅಖಾಡಕ್ಕೆ ಇಳಿದಿದ್ದಾರೆ. ಮೈಸೂರು–ಕೊಡಗು ಲೋಕಸಭಾ ಕ್ಷೇತ್ರದಲ್ಲಿ ಬಿಜೆಪಿ ಅಭ್ಯರ್ಥಿ ಯದುವೀರ್ ಹಾಗೂ ಕಾಂಗ್ರೆಸ್ ಅಭ್ಯರ್ಥಿ ಎಂ.ಲಕ್ಷ್ಮಣ, ಅಂತೆಯೇ ಚಾಮರಾಜನಗರ ಲೋಕಸಭಾ ಕ್ಷೇತ್ರದಲ್ಲಿ ಕಾಂಗ್ರೆಸ್ ಅಭ್ಯರ್ಥಿ ಸುನೀಲ್ ಬೋಸ್ ಹಾಗೂ ಬಿಜೆಪಿ ಅಭ್ಯರ್ಥಿ ಬಾಲರಾಜ್ ಇಂದು ಪ್ರತ್ಯೇಕವಾಗಿ ನಾಮಪತ್ರ ಸಲ್ಲಿಸಿದರು. ಈ ವೇಳೆ ಸಾವಿರಾರು ಕಾರ್ಯಕರ್ತರ ಪಡೆಯೊಂದಿಗೆ ಎರಡೂ ಪಕ್ಷದ ಅಭ್ಯರ್ಥಿಗಳು ಶಕ್ತಿ ಪ್ರದರ್ಶಿಸಿದರು.

ಒಂದೆಡೆ ಬಿಸಿಲಿನ ಕಾವು ಹೆಚ್ಚಾಗಿದ್ದರೆ, ಮತ್ತೊಂದೆಡೆ ಚುನಾವಣಾ ರಣಕಣ ರಂಗೇರಿದೆ. ಬಿಸಿಲಿನ ಬೇಗೆ ಜನರು ಮನೆಯಿಂದ ಹೊರಗೆ ಬಾರದಷ್ಟು ಕಾಡಿದರೆ, ರಾಜಕಾರಣಿಗಳು, ಅವರ ಬೆಂಬಲಿಗರು, ಉಭಯ ಪಕ್ಷಗಳ ಕಾರ್ಯಕರ್ತರು ಚುನಾವಣೆಯಲ್ಲಿ ನಾವು ಗೆದ್ದೆ ಗೆಲ್ಲುತ್ತೇವೆ ಎಂದು ಧಗೆಯನ್ನೂ ಲೆಕ್ಕಿಸದೇ ಬೀದಿಗಿಳಿದಿದ್ದಾರೆ. ಮೈಸೂರು–ಕೊಡಗು ಲೋಕಸಭಾ ಕ್ಷೇತ್ರದ ಬಿಜೆಪಿ ಅಭ್ಯರ್ಥಿ ಯದುವೀರ್ ಕೃಷ್ಣದತ್ತ ಚಾಮರಾಜ ಒಡೆಯರ್ ಇಂದು ಸಿದ್ಧಾರ್ಥನಗರದ ನೂತನ ಜಿಲ್ಲಾಧಿಕಾರಿ ಕಚೇರಿಯಲ್ಲಿ ಜಿಲ್ಲಾ ಚುನಾವಣಾಧಿಕಾರಿಗಳೂ ಆದ ಜಿಲ್ಲಾಧಿಕಾರಿ ಡಾ.ಕೆ.ವಿ.ರಾಜೇಂದ್ರ ಅವರಿಗೆ ಉಮೇದುವಾರಿಕೆ ಸಲ್ಲಿಸಿದರು.

ಯದುವೀರ್ ನಾಮಪತ್ರ ಸಲ್ಲಿಸುವ ವೇಳೆ ಮಾಜಿ ಮುಖ್ಯಮಂತ್ರಿ ಹೆಚ್.ಡಿ. ಕುಮಾರಸ್ವಾಮಿ, ಬಿಜೆಪಿ ರಾಜ್ಯಾಧ್ಯಕ್ಷ ಬಿ.ವೈ.ವಿಜಯೇಂದ್ರ, ಸಂಸದ ಪ್ರತಾಪ್ ಸಿಂಹ, ಡಾ.ರವಿಪ್ರಕಾಶ್ ಹಾಜರಿದ್ದರು. ಕಳೆದ ಎರಡು ದಿನದ ಹಿಂದೆ ಯದುವೀರ್ ತಾಯಿ ಪ್ರಮೋದಾದೇವಿ ಒಡೆಯರ್ ಅವರ ಉಪಸ್ಥಿತಿಯಲ್ಲಿ ನಾಮಪತ್ರ ಸಲ್ಲಿಸಿದ್ದರು. ಈಗ ಮತ್ತೆ ಶಕ್ತಿ ಪ್ರದರ್ಶನದ ಮೂಲಕ ಉಮೇದುವಾರಿಕೆ ಸಲ್ಲಿಸಿದರು. ಜೊತೆಗೆ ಇಂದು ಜಿ.ಟಿ. ದೇವೇಗೌಡರೊಂದಿಗೂ ಮತ್ತೊಂದು ಸೆಟ್ ನಾಮಪತ್ರ ಸಲ್ಲಿಸಿದರು. ಇದಕ್ಕೂ ಮೊದಲು ಯದುವೀರ್ ಮೈಸೂರು ಅರಮನೆಯ ಆಂಜನೇಯಸ್ವಾಮಿ ದೇವಸ್ಥಾನದಲ್ಲಿ ಸಾಂಪ್ರದಾಯಿಕ ಪೂಜೆ ಸಲ್ಲಿಸಿದರು. ತರುವಾಯ ಬಿಜೆಪಿಯ ಪ್ರಚಾರ ರಥದಲ್ಲಿ ಮೆರವಣಿಗೆ ಹೊರಟರು. ರಥದಲ್ಲಿ ಮಾಜಿ ಸಿಎಂ ಕುಮಾರಸ್ವಾಮಿ, ಬಿಜೆಪಿ ರಾಜ್ಯಾಧ್ಯಕ್ಷ ವಿಜಯೇಂದ್ರ, ಸಂಸದ ಪ್ರತಾಪ್ ಸಿಂಹ, ಮಾಜಿ ಉಪ ಮುಖ್ಯಮಂತ್ರಿ ಡಾ.ಅಶ್ವಥ ನಾರಾಯಣ, ಶಾಸಕ ಟಿ.ಎಸ್.ಶ್ರೀವತ್ಸ, ಮಾಜಿ ಸಂಸದ ಸಿ.ಹೆಚ್.ವಿಜಯಶಂಕರ್, ಬಿಜೆಪಿ ನಗರಾಧ್ಯಕ್ಷರೂ ಆದ ಮಾಜಿ ಶಾಸಕ ಎಲ್.ನಾಗೇಂದ್ರ, ಮಾಜಿ ಮೇಯರ್ ಸಂದೇಶ್ ಸ್ವಾಮಿ, ಬಿಜೆಪಿ ಮುಖಂಡರೂ ಆದ ಹಿರಿಯ ವಕೀಲ ಅರುಣ್ ಕುಮಾರ್ ಜೊತೆಗಿದ್ದರು.

ಬಿಜೆಪಿ ಹಾಗೂ ಜೆಡಿಎಸ್ ನಡುವೆ ಮೈತ್ರಿ ಏರ್ಪಟ್ಟಿರುವುದರಿಂದ ಸಾವಿರಾರು ಸಂಖ್ಯೆಯಲ್ಲಿ ಎರಡೂ ಪಕ್ಷದ ಕಾರ್ಯಕರ್ತರು ಶಕ್ತಿ ಪ್ರದರ್ಶಿಸಿದರು. ಮಂಗಳ ವಾದ್ಯ, ಡೊಳ್ಳು ಕುಣಿತ, ಲಿಂಗಧೀರ ಕುಣಿತ, ಬೆದರು ಬೊಂಬೆ, ತಮಟೆ, ನಗಾರಿ ಸೇರಿದಂತೆ ಇತರೆ ಜಾನಪದ ಕಲಾ ತಂಡಗಳು ಮೆರವಣಿಗೆಗೆ ಮೆರಗು ನೀಡಿದವು. ಮೆರವಣಿಗೆಯು ಆಂಜನೇಯ ಸ್ವಾಮಿ ದೇವಸ್ಥಾನದಿಂದ ಹೊರಟು ಚಾಮರಾಜ ಒಡೆಯರ್ ವೃತ್ತ, ಆಲ್ಬರ್ಟ್ ವಿಕ್ಟರ್ ರಸ್ತೆ, ಹಾರ್ಡಿಂಗ್ ವೃತ್ತ ತಲುಪಿತು.

ನಾಮಪತ್ರ ಸಲ್ಲಿಸಲು ಮಧ್ಯಾಹ್ನ 12 ಗಂಟೆಗೆ ಸಮಯ ನಿಗದಿ ಮಾಡಿದ್ದರಿಂದ ಯದುವೀರ್, ಕುಮಾರಸ್ವಾಮಿ, ವಿಜಯೇಂದ್ರ, ಪ್ರತಾಪ್ ಸಿಂಹ ರಥದಿಂದ ಇಳಿದು ಕಾರಿನಲ್ಲಿ ಜಿಲ್ಲಾಧಿಕಾರಿ ಕಚೇರಿಯತ್ತ ಹೊರಟರು. ● 3ನೇ ಪುಟಕ್ಕೆ

ಮೈಸೂರು–ಕೊಡಗು ಲೋಕಸಭಾ ಕ್ಷೇತ್ರ



ಮೈಸೂರಿನ ಸಿದ್ಧಾರ್ಥ ನಗರದ ನೂತನ ಜಿಲ್ಲಾಧಿಕಾರಿ ಕಚೇರಿಯಲ್ಲಿ ಜಿಲ್ಲಾ ಚುನಾವಣಾಧಿಕಾರಿಗಳೂ ಆದ ಜಿಲ್ಲಾಧಿಕಾರಿ ಡಾ.ಕೆ.ವಿ.ರಾಜೇಂದ್ರ ಅವರಲ್ಲಿ ಬಿಜೆಪಿ ಅಭ್ಯರ್ಥಿ ಯದುವೀರ್ ನಾಮಪತ್ರ ಸಲ್ಲಿಸಿದರು. ಮಾಜಿ ಮುಖ್ಯಮಂತ್ರಿ ಹೆಚ್.ಡಿ.ಕುಮಾರಸ್ವಾಮಿ, ಬಿಜೆಪಿ ರಾಜ್ಯಾಧ್ಯಕ್ಷ ಬಿ.ವೈ.ವಿಜಯೇಂದ್ರ, ಸಂಸದ ಪ್ರತಾಪ್ ಸಿಂಹ, ಡಾ.ರವಿ ಪ್ರಕಾಶ್ ಅವರನ್ನು ಚಿತ್ರದಲ್ಲಿ ಕಾಣಬಹುದು.



ಕಾಂಗ್ರೆಸ್ ಅಭ್ಯರ್ಥಿ ಎನ್.ಲಕ್ಷ್ಮಣ ಅವರು ಜಿಲ್ಲಾ ಚುನಾವಣಾಧಿಕಾರಿಗಳೂ ಆದ ಜಿಲ್ಲಾಧಿಕಾರಿ ಡಾ.ಕೆ.ವಿ.ರಾಜೇಂದ್ರ ಅವರಿಗೆ ನಾಮಪತ್ರ ಸಲ್ಲಿಸಿದರು. ಈ ವೇಳೆ ಮುಖ್ಯಮಂತ್ರಿ ಸಿದ್ದರಾಮಯ್ಯ, ಉಪ ಮುಖ್ಯಮಂತ್ರಿ ಡಿ.ಕೆ.ಶಿವಕುಮಾರ್, ಸಚಿವ ಕೆ.ವೆಂಕಟೇಶ್, ಕೆಪಿಸಿಸಿ ಕಾರ್ಯಾಧ್ಯಕ್ಷರೂ ಆದ ಶಾಸಕ ತನ್ವೀರ್ ಸೇಠ್ ಉಪಸ್ಥಿತರಿದ್ದರು.

ಚಾಮರಾಜನಗರ ಲೋಕಸಭಾ ಕ್ಷೇತ್ರ



ಕಾಂಗ್ರೆಸ್ ಅಭ್ಯರ್ಥಿ ಸುನೀಲ್‌ಬೋಸ್ ಅವರು ಜಿಲ್ಲಾ ಚುನಾವಣಾಧಿಕಾರಿಯೂ ಆದ ಜಿಲ್ಲಾಧಿಕಾರಿ ಶಿಲ್ಪಾನಾಗ್ ಅವರಿಗೆ ನಾಮಪತ್ರ ಸಲ್ಲಿಸಿದರು. ಸಚಿವ ಕೆ.ವೆಂಕಟೇಶ್, ಕೆಪಿಸಿಸಿ ಉಪಾಧ್ಯಕ್ಷ ಜಿ.ಎನ್.ನಂಜುಂಡಸ್ವಾಮಿ, ಮಾಜಿ ಶಾಸಕ ಡಾ.ಯತೀಂದ್ರ ಸಿದ್ದರಾಮಯ್ಯ ಇನ್ನಿತರರಿದ್ದಾರೆ.



ಬಿಜೆಪಿ ಅಭ್ಯರ್ಥಿ ಎಸ್.ಬಾಲರಾಜು ಬುಧವಾರ ನಾಮಪತ್ರ ಸಲ್ಲಿಸಿದರು. ಪಕ್ಷದ ರಾಜ್ಯಾಧ್ಯಕ್ಷ ಬಿ.ವೈ.ವಿಜಯೇಂದ್ರ, ರಾಜ್ಯ ಉಪಾಧ್ಯಕ್ಷ ಎನ್.ಮಹೇಶ್, ಜೆಡಿಎಸ್ ಕೋರ್ ಕಮಿಟಿ ಅಧ್ಯಕ್ಷರೂ ಆದ ಶಾಸಕ ಜಿ.ಟಿ.ದೇವೇಗೌಡ, ಬಿಜೆಪಿ ಜಿಲ್ಲಾಧ್ಯಕ್ಷ ಸಿ.ಎಸ್.ನಿರಂಜನ್‌ಕುಮಾರ್ ಉಪಸ್ಥಿತರಿದ್ದರು.

ನಾಡಿಗೆ ಭಾರೀ ಕೊಡುಗೆ ಕೊಟ್ಟ ಯದುವಂಶ; ಯದುವೀರ್ ಅವಿರೋಧ ಆಯ್ಕೆಗೆ ಸಹಕರಿಸಿ

ಸಿಎಂ ಸಿದ್ದರಾಮಯ್ಯ, ಡಿಸಿಎಂ ಡಿ.ಕೆ.ಶಿವಕುಮಾರ್ ಸೇರಿ ಕಾಂಗ್ರೆಸ್ಸಿಗರಿಗೆ ಎಂಎಲ್‌ಸಿ ಎ.ಹೆಚ್.ವಿಶ್ವನಾಥ್ ಮನವಿ

ಮೈಸೂರು,ಏ.3(ಪಿಎಂ)– ಮೈಸೂರು–ಕೊಡಗು ಲೋಕಸಭಾ ಕ್ಷೇತ್ರದಲ್ಲಿ ಕಾಂಗ್ರೆಸ್ ಅಭ್ಯರ್ಥಿಯನ್ನು ಹಿಂತೆಗೆದುಕೊಂಡು ಮೈಸೂರು ಮಹಾರಾಜರ ವಂಶದ ಕುಡಿಯಾದ ಯದುವೀರ ಕೃಷ್ಣದತ್ತ ಚಾಮರಾಜ ಒಡೆಯರ್ ಅವರನ್ನು ಅವಿರೋಧವಾಗಿ ಆಯ್ಕೆ ಮಾಡಿ ಸಂಸತ್‌ಗೆ ಕಳುಹಿಸಲು ಸಹಕಾರ ನೀಡುವಂತೆ ಮುಖ್ಯಮಂತ್ರಿ ಸಿದ್ದರಾಮಯ್ಯ, ಉಪಮುಖ್ಯಮಂತ್ರಿ ಡಿ.ಕೆ.ಶಿವಕುಮಾರ್ ಸೇರಿದಂತೆ ಕಾಂಗ್ರೆಸ್ ನಾಯಕರಲ್ಲಿ ವಿಧಾನ ಪರಿಷತ್ ಸದಸ್ಯರಾದ ಎ.ಹೆಚ್.ವಿಶ್ವನಾಥ್ ಮನವಿ ಮಾಡಿದರು.

ಮೈಸೂರಿನ ದಟ್ಟಗಳ್ಳಿಯಲ್ಲಿರುವ ತಮ್ಮ ಪುತ್ರ, ಮೈಸೂರು ಜಿಪಂ ಮಾಜಿ ಸದಸ್ಯ ಅಮಿತ್ ದೇವರಹಟ್ಟಿ ನಿವಾಸದಲ್ಲಿ ಬುಧವಾರ ತಮ್ಮನ್ನು ಭೇಟಿಯಾದ ಬಿಜೆಪಿ ರಾಜ್ಯಾಧ್ಯಕ್ಷ ಬಿ.ವೈ. ವಿಜಯೇಂದ್ರ, ಮೈಸೂರು–ಕೊಡಗು ಲೋಕಸಭಾ ಕ್ಷೇತ್ರದ ಬಿಜೆಪಿ ಅಭ್ಯರ್ಥಿ ಯದುವೀರ್ ಅವರನ್ನು ಸನ್ಮಾನಿಸಿ, ಅವರು ಮಾತನಾಡಿದರು.



ಮೈಸೂರು ರಾಜವಂಶದ ಶ್ರೀಕಂಠದತ್ತ ನರಸಿಂಹರಾಜ ಒಡೆಯರ್ ಕೂಡ ಹಿಂದೆ ಇಲ್ಲಿ ಸಂಸದರಾಗಿ ಕೆಲಸ ಮಾಡಿದ್ದಾರೆ. ಯದುವಂಶದ ರಾಜರು ರಾಜಪ್ರಭುತ್ವದಲ್ಲೂ ಜನತಂತ್ರದ ವ್ಯವಸ್ಥೆಯನ್ನು ಅತ್ಯಂತ ಪರಿಣಾಮಕಾರಿಯಾಗಿ ತೋರಿಸಿದ್ದಾರೆ. ಅವರ ಕೊಡುಗೆ ಮೈಸೂರಿಗೆ ಅಪಾರವಾಗಿದೆ. ● 10ನೇ ಪುಟಕ್ಕೆ

ಇಬ್ಬರೂ ರಾಜೀನಾಮೆ ಕೊಟ್ಟು ಚಾಮುಂಡೇಶ್ವರಿಯಲ್ಲಿ ಸ್ಪರ್ಧಿಸೋಣ ಬನ್ನಿ...

ಮುಖ್ಯಮಂತ್ರಿ ಸಿದ್ದರಾಮಯ್ಯಗೆ ಶಾಸಕ ಜಿ.ಟಿ.ದೇವೇಗೌಡರ ನೇರ ಸವಾಲು

● ಅಭಿವೃದ್ಧಿ ಮಾಡದೇ ಅಧಿಕಾರ ಹಿಡಿದ ಏಕೈಕ ರಾಜಕಾರಣಿ ಸಿದ್ದರಾಮಯ್ಯ ● ಇಬ್ಬರು ಶ್ವೇತ ಪತ್ರ ಹೊರಡಿಸೋಣ, ಇದಕ್ಕೆ ನೀವು ಸಿದ್ಧರಿದ್ದೀರಾ...! ● ನನ್ನ ಕಾಯಲು ದೇವರಿಲ್ಲವೆ, ಧರ್ಮವಿಲ್ಲವೆ



ಮೈಸೂರು, ಏ.3(ಬಿಎಲ್‌ಯು)– ವರುಣ ಕ್ಷೇತ್ರದಲ್ಲಿ ನೀವು ರಾಜೀನಾಮೆ ಕೊಡಿ, ನಾನು ಚಾಮುಂಡೇಶ್ವರಿ ಕ್ಷೇತ್ರದಲ್ಲಿ ರಾಜೀನಾಮೆ ನೀಡುವೆ. ಚಾಮುಂಡೇಶ್ವರಿ ಕ್ಷೇತ್ರದಲ್ಲಿ ಮತ್ತೆ ಚುನಾವಣೆ ನಡೆಯಲಿ ಇಬ್ಬರೂ ಸ್ಪರ್ಧಿಸೋಣ. ಹೀಗೆಂದು ಮುಖ್ಯಮಂತ್ರಿ ಸಿದ್ದರಾಮಯ್ಯಗೆ ನೇರ ಸವಾಲು ಹಾಕಿದವರು ಹಾಲಿ ಮೈಸೂರು ಚಾಮುಂಡೇಶ್ವರಿ ಕ್ಷೇತ್ರದ ಶಾಸಕ ಜಿ.ಟಿ. ದೇವೇಗೌಡರು. ನಗರದ ರ್‍ಯಾಡಿಸನ್ ಬ್ಲ್ಯೂ ಹೋಟೆಲ್‌ನಲ್ಲಿ ಇಂದು ಪತ್ರಕರ್ತರ ಜೊತೆ ಮಾತನಾಡಿದ ಅವರು, ಚಾಮುಂಡೇಶ್ವರಿ ಕ್ಷೇತ್ರದಲ್ಲಿ ಜಿ.ಟಿ.ದೇವೇಗೌಡ ಏನು ಕಡಿದು ಕಟ್ಟೆ ಹಾಕಿದ್ದಾರಾ ಎಂಬ ಸಿದ್ದರಾಮಯ್ಯ ಹೇಳಿಕೆಗೆ ಜಿ.ಟಿ.ದೇವೇಗೌಡರು ಹೀಗೆ ಬಹಿರಂಗವಾಗಿ ಸವಾಲು ಹಾಕಿದರು.

ಇಬ್ಬರೂ ಚಾಮುಂಡೇಶ್ವರಿ ಕ್ಷೇತ್ರದಲ್ಲಿ ಸ್ಪರ್ಧೆ ಮಾಡೋಣ. ಯಾರು ಗೆಲ್ಲುತ್ತಾರೋ ನೋಡೋಣ. ಅಭಿವೃದ್ಧಿ ಅಂದರೆ ಸಿದ್ದರಾಮಯ್ಯಗೆ ಏನು ಗೊತ್ತಿಲ್ಲ. ಯಾವುದೇ ಅಭಿವೃದ್ಧಿ ಮಾಡದೆ ರಾಜಕೀಯದಲ್ಲಿ ಬೆಳೆದ ಏಕೈಕ ವ್ಯಕ್ತಿ ಸಿದ್ದರಾಮಯ್ಯ. ಇವರು ನಾನು ಮಾಡಿರುವ ● 10ನೇ ಪುಟಕ್ಕೆ

ಚಾಮುಂಡೇಶ್ವರಿಯಲ್ಲಿ ಯತೀಂದ್ರನ ಕಮಿಷನ್ ದಂಧೆ

ನೀವು ಸೋತಾಗಲೂ ಇಲ್ಲಿವರೆಗೆ ಅಗೌರವದಿಂದ ನಾನು ಮಾತನಾಡಿಲ್ಲ; ಸಿಎಂಗೆ ಜಿಟಿಡಿ ಕಿವಿಮಾತು

ಇದು 60 ಪರ್ಸೆಂಟ್ ಸರ್ಕಾರ. ನಿಮ್ಮ ಪುತ್ರ ಯತೀಂದ್ರ ಚಾಮುಂಡೇಶ್ವರಿ ಕ್ಷೇತ್ರದಲ್ಲಿ ಕಮಿಷನ್ ದಂಧೆ ಮಾಡುತ್ತಿದ್ದಾರೆ ಎಂದು ಶಾಸಕ ಜಿ.ಟಿ.ದೇವೇಗೌಡರು ಸಿದ್ದರಾಮಯ್ಯ ವಿರುದ್ಧ ಆಕ್ರೋಶ ವ್ಯಕ್ತಪಡಿಸಿದರು. ಚಾಮುಂಡೇಶ್ವರಿ ಕ್ಷೇತ್ರದ ಬಿಇಓ, ತಹಶೀಲ್ದಾರ್ ಎಲ್ಲಾ ನಿಮ್ಮ ಬಂಧುಗಳೇ ಆಗಿದ್ದಾರೆ. ಹೆಸರಿಗೆ ನಾನು ಶಾಸಕ, ಆದರೆ ಚಾಮುಂಡೇಶ್ವರಿ ಕ್ಷೇತ್ರದಲ್ಲಿ ಎಲ್ಲಾ ನಿಮ್ಮ ಅಧಿಕಾರವೇ ನಡೆಯುತ್ತಿದೆ. ಗುತ್ತಿಗೆದಾರರು ನಿಮ್ಮ ಪುತ್ರನಿಗೆ ಕಮಿಷನ್ ಕೊಡಬೇಕಿದೆ. ಇನ್ನು ಎಷ್ಟು ದಿನ ಸಿಎಂ ಆಗಿರುತ್ತೀರಾ ನೋಡೋಣ... ಇನ್ನು ಎಷ್ಟು ದಿನ ಅಧಿಕಾರದಲ್ಲಿರುತ್ತೀರಾ ನೋಡೋಣ ಎಂದರು. ಪದೇ ಪದೇ ನನಗೆ ನೋವು ಕೊಡುತ್ತಾ ಇದ್ದೀರಾ, ಚುಚ್ಚಿ ಚುಚ್ಚಿ ಮಾತನಾಡುತ್ತಿದ್ದೀರಾ. ● 10ನೇ ಪುಟಕ್ಕೆ

ಮಂಡ್ಯದ 'ಸ್ವಾಭಿಮಾನಿ ಸಂಸದೆ' ಸುಮಲತಾ ಬಿಜೆಪಿ ಸೇರ್ಪಡೆ ನಿರ್ಧಾರ

● ಈ ಬಾರಿ ಮಾತ್ರ ಲೋಕಸಭಾ ಚುನಾವಣೆಯಲ್ಲಿ ಸ್ಪರ್ಧಿಸದಿರಲು ತೀರ್ಮಾನ ● ಮಂಡ್ಯದಿಂದ ನಿರ್ಗಮಿಸಲ್ಲ ● ಬೆಂಬಲಿಗರ ಸಭೆಯಲ್ಲಿ ಅಧಿಕೃತ ಘೋಷಣೆ

ಮಂಡ್ಯ, ಏ.3–ಮಂಡ್ಯದ ಸ್ವಾಭಿಮಾನಿ ಹಾಗೂ ಪಕ್ಷೇತರ ಸಂಸದೆ ಸುಮಲತಾ ಅಂಬರೀಶ್ ಅವರು ಬಿಜೆಪಿ ಸೇರ್ಪಡೆಯಾಗುವುದಾಗಿ ಇಂದು ಘೋಷಿಸಿದ್ದಾರೆ. ಅಲ್ಲದೇ ಈ ಚುನಾವಣೆಯಲ್ಲಿ ಮಾತ್ರ ಸ್ಪರ್ಧಿಸುವುದಿಲ್ಲ. ಯಾವುದೇ ಕಾರಣಕ್ಕೂ ಮಂಡ್ಯದಿಂದ ನಿರ್ಗಮಿಸುವುದಿಲ್ಲ ಎಂದು ಹೇಳಿದ್ದಾರೆ.

ಲೋಕಸಭಾ ಚುನಾವಣೆಯಲ್ಲಿ ಸ್ಪರ್ಧಿಸಲು ಬಿಜೆಪಿ ಟಿಕೆಟ್ ಬಯಸಿದ್ದ ಅವರು, ಬಿಜೆಪಿ–ಜೆಡಿಎಸ್ ಮೈತ್ರಿ ಹಿನ್ನೆಲೆಯಲ್ಲಿ ಮಂಡ್ಯ ಕ್ಷೇತ್ರವು ಜೆಡಿಎಸ್ ಪಾಲಾದ ನಂತರ ತಮ್ಮ ರಾಜಕೀಯ ನಿರ್ಧಾರ ಪ್ರಕಟಿಸುವ ಸಲುವಾಗಿ ಬುಧವಾರ ಮಂಡ್ಯದ ಕಾಳಿಕಾಂಬ ದೇವಾಲಯದ ಆವರಣದಲ್ಲಿ ಬೆಂಬಲಿಗರ ಸಭೆ ಕರೆದಿದ್ದರು. ಈ ಸಭೆಯಲ್ಲಿ ಕಾಂಗ್ರೆಸ್ ಸೇರುವಂತೆ ಕೆಲವರು ಹೇಳಿದಾಗ, 'ಕಾಂಗ್ರೆಸ್‌ನ ದೊಡ್ಡ ನಾಯಕರೊಬ್ಬರು ನನ್ನ ಅವಶ್ಯಕತೆ ಇಲ್ಲ ಎಂದು ಹೇಳಿದ್ದಾರೆ. ಹೀಗಿರುವಾಗ ಸ್ವಾಭಿಮಾನಕ್ಕೆ ಮತ್ತೊಂದು ಹೆಸರೇ ಅಂಬರೀಶ್. ಅವರ ಪತ್ನಿಯಾಗಿರುವ ನಾನು ಗೌರವ ಇಲ್ಲದ ಕಡೆ ಯಾಕೆ ಹೋಗಬೇಕು. ದಯವಿಟ್ಟು ಕಾಂಗ್ರೆಸ್‌ಗೆ ಹೋಗಿ ಎಂದು ನನ್ನನ್ನು ಯಾರೂ ಬಲವಂತಪಡಿಸಬೇಡಿ ಎಂದು ಮನವಿ ಮಾಡಿದರು.

ಮಂಡ್ಯದ ಸೊಸೆಯಾಗಿ ಉಳಿಯುತ್ತೇನೆ: ಸಂಸದೆ ಸ್ಥಾನ ಶಾಶ್ವತವಲ್ಲ. ಇಂದು ನಾನು, ನಾಳೆ ಮತ್ತೊಬ್ಬರು ಸಂಸದರಾಗಿ ಬರಬಹುದು. ಆದರೆ ಮಂಡ್ಯದ ಸೊಸೆಯಾಗಿ ಕೊನೆಯವರೆಗೂ ಉಳಿಯುತ್ತೇನೆ. ಸ್ವತಂತ್ರವಾಗಿ ಚುನಾವಣೆಯಲ್ಲಿ ಸ್ಪರ್ಧಿಸಬೇಕು ಎಂಬ ಹಠ ನನಗೆ ಇಲ್ಲ. ಬದಲಾದ ಪರಿಸ್ಥಿತಿಯನ್ನು ಹಾಗೂ ಸನ್ನಿವೇಶವನ್ನು ಅರ್ಥ ಮಾಡಿಕೊಳ್ಳಬೇಕು. ನಾನು ಸ್ವತಂತ್ರವಾಗಿ ಸ್ಪರ್ಧಿಸಿದರೆ ಯಾರಿಗೆ ಲಾಭ ಎಂಬುದನ್ನೂ ಯೋಚಿಸಬೇಕು. ನಾನು ನನ್ನ ಸ್ವಾರ್ಥಕ್ಕಾಗಿ ಯೋಚಿಸಿದ್ದರೆ ಬಿಜೆಪಿ ಗೆಲ್ಲುವ ಸಾಧ್ಯತೆ ಇದ್ದ ಕ್ಷೇತ್ರಗಳಲ್ಲಿ ಯಾವುದಾದರೂ ಒಂದನ್ನು ಆಯ್ಕೆ ಮಾಡಿ ಕೊಳ್ಳಬಹುದಾಗಿತ್ತು. ಬಿಜೆಪಿ ನಾಯಕರು ಅಂತಹ ಆಫರ್ ಕೂಡ ಕೊಟ್ಟಿದ್ದರು. ಆದರೆ ಮಂಡ್ಯಕ್ಕಾಗಿ ಬಂದಂತಹ ಆಫರ್‌ಗಳನ್ನು ಬಿಟ್ಟಿದ್ದೇನೆ. ರಾಜಕೀಯ ಮಾಡಿದರೆ ಮಂಡ್ಯದಲ್ಲಿ ಮಾತ್ರ ಎಂದರು.



ಮಂಡ್ಯದಲ್ಲಿ ಬುಧವಾರ ನಡೆದ ಅಭಿಮಾನಿಗಳ ಸಭೆಯಲ್ಲಿ ಸಂಸದೆ ಸುಮಲತಾ ಮಾತನಾಡಿದರು. ಚಿತ್ರದಲ್ಲಿ ಅವರ ಪುತ್ರ ಅಭಿಷೇಕ್, ನಟ ದರ್ಶನ್, ಅಭಿಮಾನಿಗಳ ಸಂಘದ ಬೇಲೂರು ಸೋಮಶೇಖರ್ ಇನ್ನಿತರರಿದ್ದಾರೆ.

> “ಸುಮಲತಾ ಅಮ್ಮ ಅವರು ಏನು ಹೇಳುತ್ತಾರೋ ಅದನ್ನು ಮಗನಾಗಿ ಪಾಲಿಸುತ್ತೇನೆ. ಅವರು ಯಾವ ನಿರ್ಧಾರ ಕೈಗೊಂಡರೂ ಸದಾ ಕಾಲ ನನ್ನ ಬೆಂಬಲ ಇರುತ್ತದೆ. ಕಳೆದ 5 ವರ್ಷದ ಹಿಂದೆ ಸುಮಲತಾ ಪರವಾಗಿ ನಾನು ಪ್ರಚಾರ ನಡೆಸಿದಾಗ ನನ್ನ ಮಾತಿಗೆ ಗೌರವ ಕೊಟ್ಟು ಮತ ನೀಡಿದ ನನ್ನೆಲ್ಲಾ ಅಭಿಮಾನಿಗಳಿಗೆ ಕೃತಜ್ಞತೆಗಳು. ಅಂಬರೀಶ್ ಅವರ ಕುಟುಂಬಕ್ಕೂ, ನನಗೂ ಅನ್ಯೋನ್ಯ ಸಂಬಂಧವಿದೆ. ಆ ಸಂಬಂಧ ಮುಂದುವರೆಯುತ್ತದೆ. ಮಂಡ್ಯದ ಜನತೆ ಅಂಬರೀಶ್ ಕುಟುಂಬಕ್ಕೆ ಸದಾ ಕಾಲ ಬೆಂಬಲವಾಗಿರಬೇಕೆಂದು ಮನವಿ ಮಾಡುತ್ತೇನೆ. – ನಟ ದರ್ಶನ್

ಅಸಂಖ್ಯಾತ ಅಂಬರೀಶ್ ಅಭಿಮಾನಿಗಳನ್ನು ಬಿಟ್ಟು ಹೋದರೆ ನಾನು ಮಂಡ್ಯದ ಸೊಸೆ ಎನ್ನಿಸಿಕೊಳ್ಳಲು ಸಾಧ್ಯವೇ ಇಲ್ಲ. ಹೀಗಾಗಿ ಈ ಚುನಾವಣೆಯಲ್ಲಿ ಸ್ಪರ್ಧಿಸದೇ ಬಿಟ್ಟುಕೊಟ್ಟಿದ್ದೇನೆ ಎಂದರು.

ಚುನಾವಣೆಗಳಲ್ಲಿ ಸೋತು ಕ್ಷೇತ್ರ ಕಳೆದುಕೊಂಡವರೂ ಕೂಡ ಆ ಕ್ಷೇತ್ರವನ್ನು ಬಿಟ್ಟುಕೊಡಲು ಒಪ್ಪುವುದಿಲ್ಲ. ಆದರೆ ನಾನು ಹಾಲಿ ಸಂಸದೆಯಾಗಿದ್ದುಕೊಂಡು ಬಿಜೆಪಿ ಬೇರೆ ಪಕ್ಷಕ್ಕೆ ಕ್ಷೇತ್ರವನ್ನು ಕೊಟ್ಟಾಗ ನಾನೂ ಕೂಡ ಬಿಟ್ಟುಕೊಟ್ಟಿದ್ದೇನೆ. 2019ರಲ್ಲಿ ಪಕ್ಷೇತರ ಅಭ್ಯರ್ಥಿಯಾಗಿ ಸ್ಪರ್ಧಿಸಿ ಇಡೀ ಸರ್ಕಾರವನ್ನು ಎದುರು ಹಾಕಿಕೊಂಡು ನಾನು ನಿಂತಾಗ ಮಂಡ್ಯದ ಜನತೆ ನನಗೆ 7 ಲಕ್ಷ ಮತ ನೀಡಿದ್ದೀರಿ. ಪ್ರಬಲ ಅಭ್ಯರ್ಥಿ ವಿರುದ್ಧ ಒಂದೂವರೆ ಲಕ್ಷ ಮತಗಳ ಅಂತರದಿಂದ ಗೆಲ್ಲಿಸಿದ್ದೀರಿ. ಕಳೆದ 52 ವರ್ಷದಲ್ಲಿ ಇಡೀ ಕರ್ನಾಟಕದಲ್ಲಿ ● 10ನೇ ಪುಟಕ್ಕೆ

ನಾಳೆ ಡಾ.ಬಾಬು ಜಗಜೀವನ್‌ರಾಂ 117ನೇ ಜನ್ಮ ದಿನಾಚರಣೆ



ಮೈಸೂರು, ಏ.3–ರಾಷ್ಟ್ರ ನಾಯಕರಾದ ಡಾ.ಬಾಬು ಜಗಜೀವನ್‌ರಾಂ ಅವರ 117ನೇ ಜನ್ಮ ದಿನಾಚರಣೆಯನ್ನು ಜಿಲ್ಲಾಡಳಿತದ ವತಿಯಿಂದ ಏ.5ರಂದು ಬೆಳಗ್ಗೆ 9.30ಕ್ಕೆ ನಗರದ ರೈಲ್ವೇ ನಿಲ್ದಾಣದ ವೃತ್ತದಲ್ಲಿರುವ ಡಾ. ಬಾಬು ಜಗಜೀವನ್‌ರಾಂರವರ ಪುತ್ಥಳಿಗೆ ಪುಷ್ಪಾರ್ಚನೆ ಕಾರ್ಯಕ್ರಮವನ್ನು ಹಮ್ಮಿಕೊಳ್ಳಲಾಗಿದೆ. ಸದರಿ ಕಾರ್ಯಕ್ರಮಕ್ಕೆ ಮೈಸೂರು ನಗರ ವ್ಯಾಪ್ತಿಯ ಎಲ್ಲಾ ಜಿಲ್ಲಾ ಮಟ್ಟದ ಅಧಿಕಾರಿಗಳು, ಸಿಬ್ಬಂದಿ ಹಾಗೂ ಸಾರ್ವಜನಿಕರು ಹಾಜರಾಗುವಂತೆ ಸೂಚಿಸಲಾಗಿದೆ ಎಂದು ಜಿಲ್ಲಾಧಿಕಾರಿ ಹಾಗೂ ರಾಷ್ಟ್ರೀಯ ಹಬ್ಬಗಳ ಆಚರಣಾ ಸಮಿತಿಯ ಅಧ್ಯಕ್ಷ ಡಾ.ಕೆ.ವಿ.ರಾಜೇಂದ್ರ ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

ಒಕ್ಕಲಿಗ ಸಮುದಾಯದಿಂದ ಕಾಂಗ್ರೆಸ್‌ಗೆ ಭಾರಿ ಬೆಂಬಲ

ಚಾಮರಾಜ ಕ್ಷೇತ್ರದಲ್ಲಿ ಮುಖ್ಯಮಂತ್ರಿ ಸಿದ್ದರಾಮಯ್ಯ ಪ್ರಚಾರ



ಮೈಸೂರು,ಏ.3–ಚಾಮರಾಜ ಕ್ಷೇತ್ರದಲ್ಲಿ ಸುಮಾರು ಒಂದು ಲಕ್ಷಕ್ಕೂ ಅಧಿಕ ಒಕ್ಕಲಿಗ ಮತದಾರರಿದ್ದು, ಕಾಂಗ್ರೆಸ್ ಪಕ್ಷಕ್ಕೆ ಭಾರಿ ಬೆಂಬಲ ವ್ಯಕ್ತವಾಗುತ್ತಿದೆ. ಇದಕ್ಕೆ ಇಂದಿನ ಸಭೆಯೇ ಸಾಕ್ಷಿ ಎಂದು ಮೈಸೂರು ನಗರ ಕಾಂಗ್ರೆಸ್ ಅಧ್ಯಕ್ಷ ಮಂಚೇಗೌಡನಕೊಪ್ಪಲು ರವಿ ಹೇಳಿದರು.

ಮುಖ್ಯಮಂತ್ರಿ ಸಿದ್ದರಾಮಯ್ಯ, ಚಾಮರಾಜ ಕ್ಷೇತ್ರದಲ್ಲಿ ನಡೆಸಿದ ಭರ್ಜರಿ ಚುನಾವಣಾ ಪ್ರಚಾರದ ಬಳಿಕ ಅವರು ಮಾಧ್ಯಮದವರೊಂದಿಗೆ ಮಾತನಾಡಿ, ಕಾಂಗ್ರೆಸ್ ಪಕ್ಷದ ಐದು ಗ್ಯಾರಂಟಿಗಳು ಯಶಸ್ವಿಯಾಗಿ ಜಾರಿಯಾಗಿ ಮತದಾರರ ಮೆಚ್ಚುಗೆ ಗಳಿಸಿವೆ. ಬೆಲೆ ಏರಿಕೆ, ನಿರುದ್ಯೋಗ, ಬಡತನದಿಂದ ತತ್ತರಿಸಿರುವಾಗ ಗ್ಯಾರಂಟಿ ಯೋಜನೆಗಳು ಜನರ ಕೈ ಹಿಡಿದು ಅವರ ಆರ್ಥಿಕ ಪರಿಸ್ಥಿತಿ ಸುಧಾರಿಸಿದೆ. ವಿಶೇಷವಾಗಿ ಮಹಿಳೆಯರು ಗ್ಯಾರಂಟಿ ಯೋಜನೆ ಗಮನದಲ್ಲಿಟ್ಟುಕೊಂಡು ತಮ್ಮ ಮತ ಹಾಕಲಿದ್ದು, ಶಾಸಕ ಹರೀಶ್‌ಗೌಡರ ನೇತೃತ್ವದಲ್ಲಿ ಚಾಮರಾಜ ಕ್ಷೇತ್ರದಲ್ಲಿ ಕಾಂಗ್ರೆಸ್ ಅಭ್ಯರ್ಥಿ ಎಂ.ಲಕ್ಷ್ಮಣ್ ಅವರಿಗೆ ಹೆಚ್ಚು ಬಹುಮತ ಸಿಗಲಿದೆ ಎಂದರು. ಇದೇ ವೇಳೆ ಶಾಸಕರಾದ ಹರೀಶ್‌ಗೌಡ, ರವಿಶಂಕರ್ ಸೇರಿದಂತೆ ಇನ್ನಿತರ ಮುಖಂಡರು ಹಾಜರಿದ್ದರು.

ರಂಜಾನ್ ಪ್ರಯುಕ್ತ ಶೂ ವರ್ಲ್ಡ್‌ನಲ್ಲಿ ಭಾರಿ ರಿಯಾಯಿತಿ ಮಾರಾಟ



ಮೈಸೂರು, ಏ. 3–ಮೈಸೂರಿನ ಶೂ ವರ್ಲ್ಡ್‌ನಲ್ಲಿ ರಂಜಾನ್ ಪ್ರಯುಕ್ತ ಶೂ ಭಾರೀ ರಿಯಾಯಿತಿ ಮಾರಾಟ ಮೇಳ ಆಯೋಜಿಸಲಾಗಿದೆ. ಸ್ತ್ರೀ ಮತ್ತು ಪುರುಷರ ಗುಣಮಟ್ಟದ, ಉತ್ತಮ ದರ್ಜೆಯ ಚಪ್ಪಲಿ, ಶೂ ಮತ್ತು ಇತರೆ ಎಲ್ಲಾ ಇನ್‌ಹೌಸ್ ಬ್ರಾಂಡ್‌ನ ಪಾದರಕ್ಷೆಗಳ ಖರೀದಿಯ ಮೇಲೆ 2 ಖರೀದಿಸಿದರೆ 1 ಉಚಿತ ಏ.21ರವರೆಗೆ ನೀಡಲಾಗುತ್ತಿದೆ. ರಂಜಾನ್ ಹಬ್ಬದ ಪ್ರಯುಕ್ತ ರಾಮಸ್ವಾಮಿ ವೃತ್ತದ ಪ್ರೆಸ್ಟೀಜ್ ಶಾಪಿಂಗ್ ಕಾಂಪ್ಲೆಕ್ಸ್‌ನಲ್ಲಿರುವ ಮಳಿಗೆಯಲ್ಲಿ ಭಾರಿ ರಿಯಾಯಿತಿ ಮಾರಾಟ ಆಯೋಜಿಸಿದೆ. ಇಲ್ಲಿ ಮಹಿಳೆಯರು, ಪುರುಷರು ಹಾಗೂ ಮಕ್ಕಳ ಗುಣಮಟ್ಟದ ಪಾದರಕ್ಷೆಗಳನ್ನು ರಿಯಾಯಿತಿ ಬೆಲೆಯಲ್ಲಿ ಮಾರಾಟ ಮಾಡಲಾಗುವುದು.

ಬೈಕಿಗೆ ಕಾಂಕ್ರಿಟ್ ಮಿಕ್ಸರ್ ವಾಹನ ಡಿಕ್ಕಿ: ಇಂಜಿನಿಯರಿಂಗ್ ವಿದ್ಯಾರ್ಥಿ ಸಾವು


ಮಯಾಂಕ್ ಪೂವಯ್ಯ

ಮೈಸೂರು,ಏ.3(ಆರ್‌ಕೆ)– ಬೈಕಿಗೆ ಕಾಂಕ್ರಿಟ್ ಮಿಕ್ಸರ್ ವಾಹನ ಡಿಕ್ಕಿ ಹೊಡೆದ ಪರಿಣಾಮ ಇಂಜಿನಿಯರಿಂಗ್ ವಿದ್ಯಾರ್ಥಿ ಸಾವನ್ನಪ್ಪಿರುವ ಘಟನೆ ಮೈಸೂರಿನ ಹೂಟಗಳ್ಳಿ ಬಳಿ ಹುಣಸೂರು ರಸ್ತೆಯಲ್ಲಿ ಕಳೆದ ರಾತ್ರಿ ಸಂಭವಿಸಿದೆ.

ಮೂಲತ ಕೊಡಗಿನವರಾದ ಮೈಸೂರಿನ ಹೂಟಗಳ್ಳಿ ಬಳಿಯ ಚಾಮುಂಡೇಶ್ವರಿ ಬಡಾವಣೆ ನಿವಾಸಿ ಮುಂಡ್ಕೋಟಿರ ಮಯಾಂಕ್ ಪೂವಯ್ಯ (22) ಸಾವನ್ನಪ್ಪಿದ ವಿದ್ಯಾರ್ಥಿ. ಕೂರ್ಗಳ್ಳಿ ಬಳಿಯ ಎನ್‌ಐಇ ಕಾಲೇಜಿನಲ್ಲಿ ಅಂತಿಮ ಸೆಮಿಸ್ಟರ್ ಬಿಇ ವ್ಯಾಸಂಗ ಮಾಡುತ್ತಿದ್ದ ಮಯಾಂಕ್, ತನ್ನ ಹೀರೋ ಪಲ್ಸ್ (ಕೆಎ09, ಜೆಸಿ 2834) ಬೈಕಿನಲ್ಲಿ ಮೈಸೂರಿನಿಂದ ಹೂಟಗಳ್ಳಿ ಕಡೆಗೆ ಹೋಗುತ್ತಿದ್ದಾಗ ಹಿಂದಿನಿಂದ ವೇಗವಾಗಿ ಬಂದ ಕಾಂಕ್ರಿಟ್ ಮಿಕ್ಸರ್ ವಾಹನ (ಕೆಎ 09, ಸಿ9741) ಹೂಟಗಳ್ಳಿಯ ಮಾರ್ಸ್ ಫರ್ನಿಚರ್ಸ್ ಎದುರು ಮಂಗಳವಾರ ರಾತ್ರಿ 10.30 ಗಂಟೆ ಯಲ್ಲಿ ಡಿಕ್ಕಿ ಹೊಡೆದಿದೆ.

ಪರಿಣಾಮ ಬೈಕ್ ಸವಾರ ಮಯಾಂಕ್ ಪೂವಯ್ಯ ತಲೆಗೆ ತೀವ್ರ ಗಾಯಗಳಾಗಿ ಸ್ಥಳದಲ್ಲೇ ಮೃತಪಟ್ಟರು. ಬೈಕಿಗೆ ಡಿಕ್ಕಿ ಹೊಡೆದ ಕಾಂಕ್ರಿಟ್ ಮಿಕ್ಸರ್ ಚಾಲಕ ಸುಮಾರು ಅರ್ಧ ಕಿಮಿ ಮುಂದೆ ಹೋಗಿ ವಾಹನ ಬಿಟ್ಟು ಪರಾರಿಯಾಗಿದ್ದಾನೆ.

ವಿಷಯ ತಿಳಿದ ತಕ್ಷಣ ಸ್ಥಳಕ್ಕೆ ಧಾವಿಸಿದ ವಿವಿ ಪುರಂ ಸಂಚಾರ ಠಾಣೆ ಪೊಲೀಸರು ಮಹಜರು ನಡೆಸಿ, ಮೃತ ದೇಹವನ್ನು ಮೈಸೂರು ಮೆಡಿಕಲ್ ಕಾಲೇಜು ಮತ್ತು ಸಂಶೋಧನಾ ಸಂಸ್ಥೆ ಶವಾಗಾರಕ್ಕೆ ಸ್ಥಳಾಂತರಿಸಿದರು.

ಇಂದು ಮರಣೋತ್ತರ ಪರೀಕ್ಷೆ ನಡೆಸಿದ ಬಳಿಕ ವಾರಸುದಾರರಿಗೆ ದೇಹ ಒಪ್ಪಿಸಿದರು. ಎರಡೂ ವಾಹನಗಳನ್ನು ವಶಕ್ಕ ಪಡೆದಿರುವ ಪೊಲೀಸರು ತಲೆಮರೆಸಿಕೊಂಡಿರುವ ಚಾಲಕನಿಗಾಗಿ ಶೋಧ ನಡೆಸುತ್ತಿದ್ದಾರೆ.

ನಿಧನ

ಎಂ.ಎಲ್. ಸುರೇಶ್



ಮೈಸೂರು,ಏ.3–ಮೈಸೂರಿನ ನಿವೇದಿತಾನಗರ ನಿವಾಸಿ ಹಾಗೂ ಖಾಸಗಿ ಕಂಪನಿ ನೌಕರ ಎಂ.ಎಲ್. ಸುರೇಶ (55) ಬುಧವಾರ ಮೈಸೂರಿನ ಖಾಸಗಿ ಆಸ್ಪತ್ರೆಯಲ್ಲಿ ನಿಧನರಾದರು. ಮೃತರು ಪತ್ನಿ, ಇಬ್ಬರು ಮಕ್ಕಳು, ಪತ್ರಕರ್ತ ಸೋಮಯ್ಯ ಮಲೆಯೂರು ಸೇರಿದಂತೆ ಸಹೋದರರು ಹಾಗೂ ಅಪಾರ ಬಂಧು ಮಿತ್ರರನ್ನು ಅಗಲಿದ್ದಾರೆ. ಮೃತರ ಅಂತ್ಯಕ್ರಿಯೆ ಚಾಮರಾಜನಗರ ಜಿಲ್ಲೆಯ ಮಲೆಯೂರಿನಲ್ಲಿ ನಾಳೆ (ಏ.4) ನೆರವೇರಲಿದೆ ಎಂದು ಕುಟುಂಬದ ಮೂಲಗಳು ತಿಳಿಸಿವೆ.

ಜೆ.ವಿ.ಡಿ. ಕುಮಾರ್



ಮೈಸೂರಿನ ಐಡಿಯಲ್ ಜಾವಾ ಫ್ಯಾಕ್ಟರಿ ನಿವೃತ್ತ ನೌಕರ ಹಾಗೂ ಗಾಯತ್ರಿಪುರಂ 2ನೇ ಹಂತ, ವಿಶ್ವಕರ್ಮ ಕಾಲೋನಿ ನಿವಾಸಿ ಜೆ.ವಿ.ಡಿ. ಕುಮಾರ್ (78) ನಿನ್ನೆ (ಮಂಗಳವಾರ) ನಿಧನರಾದರು. ಮೃತರು ಪತ್ನಿ, ನಾಲ್ವರು ಪುತ್ರಿಯರು, ಅಳಿಯಂದಿರು, ಮೊಮ್ಮಕ್ಕಳು ಸೇರಿದಂತೆ ಅಪಾರ ಬಂಧು ಮಿತ್ರರನ್ನು ಅಗಲಿದ್ದಾರೆ. ಅಂತ್ಯಕ್ರಿಯೆ ಗಾಂಧಿನಗರದ ಮಹದೇವಪುರ ರಸ್ತೆಯಲ್ಲಿರುವ ಸಿಎಸ್‌ಐ ಸಿಮೆಟ್ರಿಯಲ್ಲಿ ಬುಧವಾರ ನೆರವೇರಿತು ಎಂದು ಕುಟುಂಬದ ಮೂಲಗಳು ತಿಳಿಸಿವೆ.

ಉದಿಯಂಡ ಎಂ. ಕರುಂಬಯ್ಯ



ಕೆನರಾ ಬ್ಯಾಂಕ್‌ನ ನಿವೃತ್ತ ಮುಖ್ಯ ವ್ಯವಸ್ಥಾಪಕರು ಮತ್ತು ಮೈಸೂರಿನ ಲಕ್ಷ್ಮೀಪುರಂನ ಹಾರ್ಡ್ವಿಕ್ ಶಾಲೆ ಹಿಂಭಾಗ, ಡಿ. ಸುಬ್ಬಯ್ಯ ರಸ್ತೆಯಲ್ಲಿರುವ ಸಂಕಲ್ಪ ಪ್ರಭು ಅಪಾರ್ಟ್‌ಮೆಂಟ್ ನಿವಾಸಿ ಉದಿಯಂಡ ಎಂ. ಕರುಂಬಯ್ಯ (ರಾಜ) ನಿನ್ನೆ ಮಂಗಳವಾರ ಬೆಂಗಳೂರಿನಲ್ಲಿ ನಿಧನರಾದರು. ಅವರಿಗೆ 81 ವರ್ಷ ವಯಸ್ಸಾಗಿತ್ತು. ಮೂಲತಃ ಕೊಡಗು ಜಿಲ್ಲೆ ಮಡಿಕೇರಿ ತಾಲೂಕಿನ ಕಟಕೇರಿ ಗ್ರಾಮದವರಾದ ಇವರು ಪತ್ನಿ ಲಲಿತಾ (ತಾತಂಡ), ಓರ್ವ ಪುತ್ರಿ, ಓರ್ವ ಪುತ್ರ ಸೇರಿದಂತೆ ಅಪಾರ ಬಂಧು ಮಿತ್ರರನ್ನು ಅಗಲಿದ್ದಾರೆ. ಪಾರ್ಥಿವ ಶರೀರವನ್ನು ನಾಳೆ (ಏ.4) ಬೆಳಗ್ಗೆ 6 ಗಂಟೆಗೆ ಮೈಸೂರಿಗೆ ತರಲಿದ್ದು, ಅಂತ್ಯಕ್ರಿಯೆ ಬೆಳಗ್ಗೆ 11.30ಕ್ಕೆ ಚಾಮುಂಡಿಬೆಟ್ಟದ ತಪ್ಪಲಿನ ರುದ್ರಭೂಮಿಯಲ್ಲಿ ನೆರವೇರಿಸಲಾಗುವುದು ಎಂದು ಕುಟುಂಬದ ಮೂಲಗಳು ತಿಳಿಸಿವೆ.

ಬರಗಾಲದಲ್ಲಿ ಚುನಾವಣೆ–ರೈತರ ದಿಕ್ಸೂಚಿ ಚಿಂತನ ಮಂಥನ

ಕೇಂದ್ರ, ರಾಜ್ಯ ಸರ್ಕಾರ ರೈತರ ಪಾಲಿಗೆ ಮರಳುಗಾಡು ಇದ್ದಂತೆ

ದುರ್ಬಲವಾಗುತ್ತಿರುವ ಕೃಷಿ ಕ್ಷೇತ್ರ, ರೈತರ ಬಗ್ಗೆ ಪ್ರಣಾಳಿಕೆಯಲ್ಲಿ ಒತ್ತು ನೀಡಿ


ಮೈಸೂರು ಎಂಜಿ ರಸ್ತೆಯಲ್ಲಿರುವ ರಾಜೇಂದ್ರ ಭವನದಲ್ಲಿ ರಾಜ್ಯ ರೈತ ಸಂಘಟನೆಗಳ ಒಕ್ಕೂಟ ಹಾಗೂ ರಾಜ್ಯ ಕಬ್ಬು ಬೆಳೆಗಾರರ ಸಂಘದ ವತಿಯಿಂದ ಬುಧವಾರ 'ಬರಗಾಲದಲ್ಲಿ ಚುನಾವಣೆ–ರೈತರ ದಿಕ್ಸೂಚಿ' ಚಿಂತನ ಮಂಥನ ಸಭೆ ನಡೆಸಲಾಯಿತು.

ಮೈಸೂರು, ಏ.3(ಜಿಎ)–ಚುನಾವಣಾ ಪ್ರಣಾಳಿಕೆಯಲ್ಲಿ ರಾಜಕೀಯ ಪಕ್ಷಗಳು ಬರ ನಿರ್ವಹಣೆ, ಕೃಷಿ ಕ್ಷೇತ್ರದ ರಕ್ಷಣೆ, ಕೆರೆಕಟ್ಟೆ, ನದಿ ರಕ್ಷಣೆ ಮತ್ತು ಅರಣ್ಯ ಬೆಳೆಸುವ ಹಾಗೂ ಸಂರಕ್ಷಿಸುವ ಯೋಜನೆಗಳಿಗೆ ಒತ್ತು ನೀಡಲಿ ಎಂದು ರಾಜ್ಯ ಕಬ್ಬು ಬೆಳೆಗಾರರ ಸಂಘ ರಾಜ್ಯಾಧ್ಯಕ್ಷ ಕುರುಬೂರು ಶಾಂತಕುಮಾರ್ ಸಲಹೆ ನೀಡಿದರು.

ಮೈಸೂರು ಎಂಜಿ ರಸ್ತೆಯಲ್ಲಿರುವ ರಾಜೇಂದ್ರ ಭವನದಲ್ಲಿ ರಾಜ್ಯ ರೈತ ಸಂಘಟನೆಗಳ ಒಕ್ಕೂಟ ಹಾಗೂ ರಾಜ್ಯ ಕಬ್ಬು ಬೆಳೆಗಾರರ ಸಂಘ ಆಯೋಜಿಸಿದ್ದ 'ಬರಗಾಲದಲ್ಲಿ ಚುನಾವಣೆ–ರೈತರ ದಿಕ್ಸೂಚಿ' ಚಿಂತನ ಮಂಥನದಲ್ಲಿ ರಾಜ್ಯಾಧ್ಯಕ್ಷ ಕುರುಬೂರು ಶಾಂತಕುಮಾರ್ ಉದ್ಘಾಟಿಸಿ, ಅವರು ಮಾತನಾಡಿದರು.

ಪ್ರಾಕೃತಿಕ ಬದಲಾವಣೆಯಿಂದ ಕೃಷಿ ಕ್ಷೇತ್ರ ದುರ್ಬಲವಾಗುತ್ತಿದೆ. ಬರಗಾಲದ ನೀರಿನ ಸಮಸ್ಯೆಯಿಂದ ರೈತರ ಬೆಳೆಗಳು ಒಣಗುತ್ತಿವೆ. ಕೊಳವೆ ಬಾವಿಗಳು ಹಿಂಗುತ್ತಿವೆ. ರೈತರು ಈಗಲಾದರೂ ಹಳ್ಳಿಗಳಲ್ಲಿ ಗುಡಿಗೋಪುರ ಕಟ್ಟುವ ಚಿಂತನೆ ಕಡಿಮೆ ಮಾಡಿ ಕೆರೆ, ಕಟ್ಟೆಗಳ ಹೂಳೆತ್ತುವ ಮೂಲಕ ಪುನರ್ಜೀವನ ಹಾಗೂ ಹೊಸದಾಗಿ ನಿರ್ಮಿಸುವ ಕೆಲಸದಲ್ಲಿ ರೈತರು ಶ್ರಮ ವಹಿಸಿದ್ದರೆ ಮುಂದಿನ ವರ್ಷಗಳಲ್ಲಿ ಕೊಳವೆ ಬಾವಿಗಳು ಕೃಷಿ ಕ್ಷೇತ್ರ ಸಮೃದ್ಧಿಯಾಗಲು ಸಹಕಾರಿಯಾಗುತ್ತದೆ ಎಂದರು.

ಇಂದಿನ ರಾಜಕಾರಣಿಗಳಿಗೆ ಇದೆಲ್ಲ ಕಾಣುವುದಿಲ್ಲ. ಅವರಿಗೆ ಇದು ಬೇಕಿಲ್ಲ. ಕೇಂದ್ರ ಮತ್ತು ರಾಜ್ಯ ಸರ್ಕಾರಗಳು ರೈತರ ಪಾಲಿಗೆ ಮರಳುಗಾಡು ಇದ್ದಂತೆ ಎಂಬುದನ್ನು ಅರಿತುಕೊಳ್ಳಬೇಕು. ಬರಗಾಲದ ಬವಣೆಯಿಂದ ರೈತರಿಗೆ ಕುಡಿಯುವ ನೀರು ದನಕರುಗಳಿಗೆ ಮೇವು ಸಿಗುತ್ತಿಲ್ಲ. ಕೊಳವೆ ಬಾವಿಗಳಲ್ಲಿ ನೀರು ಹಿಂಗಿ ಹೋಗಿ ಕಬ್ಬಿನ ಬೆಳೆ, ತೆಂಗಿನ ಮರ ಒಣಗುತ್ತಿದೆ. ಸರ್ಕಾರ ಇಂತಹ ರೈತರನ್ನು ಸಂಕಷ್ಟದಿಂದ ಪಾರು ಮಾಡಬೇಕು. ಅಧಿಕಾರಿಗಳು ಚುನಾವಣಾ ಗುಂಗಿನಲ್ಲಿ ತಲ್ಲೀನರಾಗಿದ್ದಾರೆ. ರೈತರ ಸಂಕಷ್ಟ ಅರಿತುಕೊಳ್ಳಲಿ ಎಂದು ಬರಗಾಲದ ಚುನಾವಣೆ ರೈತರ ದಿಕ್ಸೂಚಿ ಕಾರ್ಯಕ್ರಮ ಹಮ್ಮಿಕೊಂಡಿದ್ದೇವೆ ಎಂದು ಕುರುಬೂರು ತಿಳಿಸಿದರು.

ಅತ್ತಳ್ಳಿ ದೇವರಾಜ್ ಮಾತನಾಡಿ, ರಾಜ್ಯ ಸರ್ಕಾರ ಅಧಿಕಾರಕ್ಕೆ ಬರುವ ಮೊದಲು ಮೇಕೆದಾಟು ನಿರ್ಮಾಣ ಯೋಜನೆಗಾಗಿ ಪಾದಯಾತ್ರೆ ಮಾಡಿ ಹುಸಿಗೊಳಿಸಿದ್ದಾರೆ. ಕಾವೇರಿ ನೀರು ತಮಿಳುನಾಡಿಗೆ ಹರಿಸಿ ಕಾವೇರಿ ಅಚ್ಚುಕಟ್ಟು ರೈತರನ್ನು ಬಲಿ ಕೊಟ್ಟಿದ್ದಾರೆ. ಬರಗಾಲದಿಂದ ನರಳುತ್ತಿರುವ ರೈತರಿಗೆ ಭಿಕ್ಷಾ ರೂಪದ ಪರಿಹಾರ ನೀಡಿದ್ದಾರೆ. ಭೂ ಸುಧಾರಣೆ ತಿದ್ದುಪಡಿ ಕಾಯ್ದೆ, ಎಪಿಎಂಸಿ ತಿದ್ದುಪಡಿ ಕಾಯ್ದೆ ರದ್ದು ಮಾಡುತ್ತೇವೆ ಎಂದು ಅಧಿಕಾರಕ್ಕೆ ಬಂದು ವರ್ಷವಾದರೂ ಜಾರಿಯಾಗಲಿಲ್ಲ. ಈಗಾದರೆ ರೈತರ ಗತಿ ಏನು ಎನ್ನುವ ಪ್ರಶ್ನೆ ಕಾಡುತ್ತಿದೆ ಎಂದರು.

ರೈತ ಸಂಘದ ರಾಜ್ಯಾಧ್ಯಕ್ಷ ನಾರಾಯಣ ರೆಡ್ಡಿ ಮಾತನಾಡಿ, ಕೇಂದ್ರ ಸರ್ಕಾರ ಸ್ವಾಮಿನಾಥನ್ ವರದಿ ಜಾರಿಗೆ ತರುವ ಮತ್ತು ರೈತರ ಆದಾಯ ದ್ವಿಗುಣ ಮಾಡುವ ಭರವಸೆ ನೀಡಿ ಹುಸಿಗೊಳಿಸಿದೆ. ಬಂಡವಾಳಶಾಹಿಗಳ 14 ಲಕ್ಷ ಕೋಟಿ ಸಾಲ ಮನ್ನಾ ಮಾಡಿ. ಸಂಕಷ್ಟದಲ್ಲಿರುವ ದೇಶದ ರೈತರ ಸಾಲ ಮನ್ನಾ ಮಾಡದೆ ನಿರ್ಲಕ್ಷ್ಯ ತೋರುತ್ತಿದೆ. ಪ್ರವಾಹ ಹಾನಿ, ಅತಿವೃಷ್ಟಿ, ಮಳೆಹಾನಿ, ಬರಗಾಲ ನಷ್ಟ ಪರಿಹಾರದ ಬಗ್ಗೆ ಯಾವುದರ ಬಗ್ಗೆಯೂ ಗಂಭೀರವಾಗಿ ಗಮನಹರಿಸುತ್ತಿಲ್ಲ. ಈ ರೀತಿಯಲ್ಲಿ ಸರ್ಕಾರಗಳು ರೈತರನ್ನು ಶೋಷಣೆ ಮಾಡುತ್ತಿವೆ ಎಂದರು.

ಸಭೆಯಲ್ಲಿ ಅರಿಶಿನ ಬೆಳೆಗಾರರ ಸಂಘದ ನಾಗಾರ್ಜುನ, ಪಿ.ಸೋಮಶೇಖರ್, ಎನ್.ಹೆಚ್.ದೇವಕುಮಾರ್, ಧರ್ಮರಾಜ್ ಕಮಲಮ್ಮ, ರೇವಣ್ಣ, ಶಿವಮೂರ್ತಿ, ಕುರುಬೂರು ಸಿದ್ದೇಶ್, ವೆಂಕಟೇಶ್, ಪರಶಿವಮೂರ್ತಿ, ರಾಜೇಶ, ರಾಜು, ಕೆಂಡಗಣ್ಣಸ್ವಾಮಿ ಕಿರಗಸೂರು ಶಂಕರ್, ಬರಡನಪುರ ನಾಗರಾಜ್ ಸೇರಿದಂತೆ ಇನ್ನಿತರರು ಉಪಸ್ಥಿತರಿದ್ದರು.



ಮೈಸೂರಿನ ಕಾಂಗ್ರೆಸ್ ಕಚೇರಿಯಲ್ಲಿ ಮಂಗಳವಾರ ಸಂಸದ ವಿ.ಶ್ರೀನಿವಾಸ್ ಪ್ರಸಾದ್ ಅವರ ಆಪ್ತ ಹಾಗೂ ಚಾಮರಾಜನಗರ ಜಿಪಂ ಮಾಜಿ ಉಪಾಧ್ಯಕ್ಷ ಅಯ್ಯನಪುರ ಶಿವಕುಮಾರ್, ರಮೇಶ್ ಮುಖ್ಯಮಂತ್ರಿ ಸಿದ್ದರಾಮಯ್ಯ ನೇತೃತ್ವದಲ್ಲಿ ಕಾಂಗ್ರೆಸ್‌ಗೆ ಸೇರ್ಪಡೆಯಾದರು.

ವಿದ್ಯಾರ್ಥಿವೇತನಕ್ಕೆ ಅರ್ಜಿ ಆಹ್ವಾನ

ಮೈಸೂರು, ಏ.3– 2023–24ನೇ ಸಾಲಿಗೆ ಪೋಷಕರ ವಾರ್ಷಿಕ ವರಮಾನ 2.5 ಲಕ್ಷದೊಳಗಿರುವ ಮೈಸೂರು ತಾಲೂಕಿನ ಮೆಟ್ರಿಕ್ ನಂತರದ ಪರಿಶಿಷ್ಟ ಜಾತಿ ವಿದ್ಯಾರ್ಥಿಗಳು ವಿದ್ಯಾರ್ಥಿವೇತನಕ್ಕಾಗಿ ರಾಜ್ಯ ವಿದ್ಯಾರ್ಥಿವೇತನ ತಂತ್ರಾಂಶದ www. ssp.post matric. karnataka.gov.inನಲ್ಲಿ ಅರ್ಜಿ ಸಲ್ಲಿಸಲು ಏ.15 ಅಂತಿಮ ದಿನ. ಅರ್ಹ ಪರಿಶಿಷ್ಟ ಜಾತಿ ವಿದ್ಯಾರ್ಥಿಗಳು ಬ್ಯಾಂಕಿಗೆ ಭೇಟಿ ನೀಡಿ, ಅವರ ಆಧಾರ್ ಸಂಖ್ಯೆಯನ್ನು NPCI (ನ್ಯಾಷನಲ್ ಪೇಮೆಂಟ್ ಕಾರ್ಪೊರೇಷನ್ ಆಫ್ ಇಂಡಿಯಾ)ರಲ್ಲಿ ಕಡ್ಡಾಯವಾಗಿ ಬ್ಯಾಂಕ್ ಖಾತೆಗೆ ಆಧಾರ್ ಸೀಡಿಂಗ್ ಮಾಡಿಸಬೇಕು. ಮಾಹಿತಿಗಾಗಿ ಮೈಸೂರು ತಾಲೂಕಿನ ಸಮಾಜ ಕಲ್ಯಾಣ ಇಲಾಖೆ ಸಹಾಯಕ ನಿರ್ದೇಶಕರು ಗ್ರೇಡ್–1 ಅವರ ದೂ.ಸಂ. 0821–2520910 ಅನ್ನು ಸಂಪರ್ಕಿಸಬಹುದು.


ಮೈಸೂರಿನ ಬಿಎಂಶ್ರೀ ನಗರದ ಬಂಗಾರಮ್ಮ, ರೇಣುಕಾ ಎಲ್ಲಮ್ಮ, ಚಾಮುಂಡೇಶ್ವರಿ ಹಬ್ಬದ ಪ್ರಯುಕ್ತ ಸಮಾಜ ಸೇವಕ ಎಸ್.ಶ್ರೀಕಾಂತ್ ದೇವಾಲಯಕ್ಕೆ ಭೇಟಿ ನೀಡಿ, ವಿಶೇಷ ಪೂಜೆ ಸಲ್ಲಿಸಿದರು. ಇದೇ ವೇಳೆ ಗ್ರಾಮಸ್ಥರು ಶ್ರೀಕಾಂತ್ ಅವರನ್ನು ಆತ್ಮೀಯವಾಗಿ ಅಭಿನಂದಿಸಿದರು.

ಇಂದು ವಿದ್ಯುತ್ ವ್ಯತ್ಯಯ

ಮೈಸೂರು,ಏ.3–ಹೂಟಗಳ್ಳಿ ಉಪ ವಿಭಾಗ ವ್ಯಾಪಿಯ ಬೋಗಾದಿ ವಿದ್ಯುತ್ ವಿತರಣಾ ಕೇಂದ್ರದಲ್ಲಿ ತುರ್ತು ನಿರ್ವಹಣಾ ಕೆಲಸದ ನಿಮಿತ್ತ ಏ.4ರಂದು ಬೆಳಗ್ಗೆ 10 ಗಂಟೆಯಿಂದ ಸಂಜೆ 5ರವರೆಗೆ ಜ್ಞಾನಗಂಗಾ ಲೇಔಟ್, ಬಾಪೂಜಿ ಲೇಔಟ್, ಬ್ಯಾಂಕ್ ಕಾಲೋನಿ, ರೈಲ್ವೇ ಲೇಔಟ್, ಎಂಎಂಜಿ ಗ್ರೀನ್ ಸಿಟಿ ಹಾಗೂ ಸುತ್ತಮುತ್ತಲಿನ ಪ್ರದೇಶಗಳಲ್ಲಿ ವಿದ್ಯುತ್ ಸರಬರಾಜಿನಲ್ಲಿ ವ್ಯತ್ಯಯವಾಗಲಿದೆ.

ಜವಾಹರ್ ನವೋದಯ ವಿದ್ಯಾಲಯದ ಫಲಿತಾಂಶ ಪ್ರಕಟ

ಮೈಸೂರು,ಏ.3–ಜವಾಹರ್ ನವೋದಯ ವಿದ್ಯಾಲಯದ 2024–25ನೇ ಸಾಲಿನ ತರಗತಿಗೆ ಆಯ್ಕೆ ಬಯಸಿ ಪರೀಕ್ಷೆ ಬರೆದಿರುವ ಅಭ್ಯರ್ಥಿಗಳ ಫಲಿತಾಂಶವು ಪ್ರಕಟವಾಗಿದ್ದು, ಫಲಿತಾಂಶವನ್ನು www.navodaya.gov.inನಲ್ಲಿ ರೋಲ್ ನಂಬರ್ ಮತ್ತು ಜನ್ಮ ದಿನಾಂಕವನ್ನು ಬಳಸಿ ವೀಕ್ಷಿಸಬಹುದಾಗಿದೆ. ಮಾಹಿತಿಗಾಗಿ ಜವಾಹರ್ ನವೋದಯ ವಿದ್ಯಾಲಯದ ಪ್ರಾಂಶುಪಾಲರ ದೂ.ಸಂ: 0821–2970040 ಅನ್ನು ಸಂಪರ್ಕಿಸಬಹುದು.

ಶ್ರೀಧರ್ಮಸ್ಥಳ ಮಂಜುನಾಥೇಶ್ವರ ಮಹಿಳಾ ಮಹಾ ವಿದ್ಯಾಲಯದಿಂದ

ನಾಳೆಯಿಂದ 'ಪ್ರಭಿಗ್ಯಾನ್–24' ಪ್ರತಿಭಾ ಸ್ಪರ್ಧೆ

ಮೈಸೂರು, ಏ.3(ಜಿಎ)– ಮೈಸೂರು ವಿವಿ ವ್ಯಾಪ್ತಿಯ ಪದವಿ ಕಾಲೇಜುಗಳ ವಿದ್ಯಾರ್ಥಿಗಳಿಗಾಗಿ ಪ್ರತಿ ವರ್ಷದಂತೆ ಈ ಬಾರಿಯೂ ಶ್ರೀಧರ್ಮಸ್ಥಳ ಮಂಜುನಾಥೇಶ್ವರ ಮಹಿಳಾ ಮಹಾವಿದ್ಯಾಲಯದಲ್ಲಿ 'ಪ್ರಭಿಗ್ಯಾನ್' ಎಂಬ ಪ್ರತಿಭಾ ಸ್ಪರ್ಧೆ ಆಯೋಜಿಸಲಾಗಿದೆ ಎಂದು ಪ್ರಾಚಾರ್ಯರಾದ ಪ್ರೊ.ಸಾಯಿನಾಥ ಮಲ್ಲಿಗೆಮಾಡು ತಿಳಿಸಿದರು.

ಮೈಸೂರು ಜಿಲ್ಲಾ ಪತ್ರಕರ್ತರ ಭವನದಲ್ಲಿ ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಅವರು, ಏ.5, 6ರಂದು ಕಾರ್ಯಕ್ರಮ ನಡೆಯಲಿದ್ದು, ಏ.5ರಂದು ಬೆಳಗ್ಗೆ 9.30ಕ್ಕೆ ಧರ್ಮಸ್ಥಳ ಧರ್ಮಾಧಿಕಾರಿ ಡಾ.ವೀರೇಂದ್ರ ಹೆಗ್ಗಡೆ ಅವರು ಸ್ಪರ್ಧೆಗೆ ಚಾಲನೆ ನೀಡುವರು. ಮರುದಿನ ಸಂಜೆ 4.30ಕ್ಕೆ ಸಮಾರೋಪ ಸಮಾರಂಭ ನಡೆಯಲಿದೆ. ವಿಜ್ಞಾನ ವಿಭಾಗದಲ್ಲಿ ಸೈಕ್ಲೋನ್ ಚಾಲೆಂಜ್, ಕೋಡ್ ಕ್ಲಾಷ್ ಮೊದಲಾದವು, ಸಾಹಿತ್ಯ ವಿಭಾಗದಲ್ಲಿ ದೃಶ್ಯ ಕಥಾ, ವಾಕ್ ಸ್ಪರ್ಧೆ, ವಿಪ್ಲವಂ ಎಂಬಿತ್ಯಾದಿ ಸ್ಪರ್ಧೆಗಳು ನಡೆಯಲಿವೆ. ಇದು ಸಂಪೂರ್ಣವಾಗಿ ಇತರೆ ಕಾಲೇಜು ವಿದ್ಯಾರ್ಥಿಗಳಿಗಾಗಿ ನಡೆಯುವ ಸ್ಪರ್ಧೆಯಾಗಿದ್ದು, ನಮ್ಮ ಕಾಲೇಜಿನ ವಿದ್ಯಾರ್ಥಿಗಳು ಪಾಲ್ಗೊಳ್ಳುತ್ತಿಲ್ಲ. ಕೇವಲ ಸಾಂಸ್ಕೃತಿಕ ಕಾರ್ಯಕ್ರಮ ನಡೆಸಿಕೊಡಲಿದ್ದಾರೆ ಎಂದರು. ಸುದ್ದಿಗೋಷ್ಠಿಯಲ್ಲಿ ವಿದ್ಯಾರ್ಥಿ ಸಂಘದ ಅಧ್ಯಕ್ಷರಾದ ರಿಯಾ, ಬೋಧಕ ಸಿಬ್ಬಂದಿಗಳಾದ ಜ್ಯೋತಿಲಕ್ಷ್ಮಿ ಕಾವಾ, ಶಿವಬೀರಪ್ಪ, ಮಾರುತಿ ಬಸಣ್ಣ ಉಪಸ್ಥಿತರಿದ್ದರು.

ಡಿಆರ್‌ಡಿಓ ಪಿಆರ್‌ಓ ಜಯಪ್ರಕಾಶ್ ರಾವ್ ವಿಶೇಷ ಉಪನ್ಯಾಸಕ್ಕೆ ಆಹ್ವಾನ



ಮೈಸೂರು, ಏ.3– ರಕ್ಷಣಾ ಸಂಶೋಧನೆ ಮತ್ತು ಅಭಿವೃದ್ಧಿ ಸಂಸ್ಥೆ(ಡಿಆರ್‌ಡಿಓ) ನಿವೃತ್ತ ವಿಜ್ಞಾನಿ ಹಾಗೂ ಪಿಆರ್‌ಓ ಕೆ.ಜಯಪ್ರಕಾಶ್ ರಾವ್ ಅವರನ್ನು ಕೊಲ್ಕತ್ತಾದ ಪ್ರತಿಷ್ಠಿತ ಏಮಿಟಿ(AMITY) ವಿಶ್ವವಿದ್ಯಾನಿಲಯದ ವಿಶೇಷ ಉಪನ್ಯಾಸಕ್ಕಾಗಿ ಆಹ್ವಾನಿಸಿದೆ. ಮೈಸೂರಿನವರಾದ ಜಯಪ್ರಕಾಶ್ ಅವರು, 'ಡಾ.ಕಲಾಂ ಅವರ ಜೀವನ ಧ್ಯೇಯ ಮತ್ತು ಗುರಿ–2020' ಕುರಿತು ಏ.4ರಂದು ಉಪನ್ಯಾಸ ನೀಡಲಿದ್ದಾರೆ. ಇವರು ಮಾಜಿ ರಾಷ್ಟ್ರಪತಿ ದಿವಂಗತ ಅಬ್ದುಲ್ ಕಲಾಂ ಅವರೊಂದಿಗೆ ಸಮನ್ವಯ ಅಧಿಕಾರಿಯಾಗಿ ಕಾರ್ಯ ನಿರ್ವಹಿಸಿದ್ದರು. ಸ್ವದೇಶಿ ನಿರ್ಮಿತ ತೇಜಸ್ ಯುದ್ಧ ವಿಮಾನ(LCA)ದ ವಿನ್ಯಾಸ ಹಾಗೂ ಅಭಿವೃದ್ಧಿ ಕೇಂದ್ರದ ಪ್ರಧಾನ ಸಾರ್ವಜನಿಕ ಸಂಪರ್ಕಾಧಿಕಾರಿ ಹಾಗೂ ಡಿಆರ್‌ಡಿಓ ಪ್ರಾದೇಶಿಕ ಸಾರ್ವಜನಿಕ ಸಂಪರ್ಕಾಧಿಕಾರಿಯಾಗಿದ್ದರು. ಸಾಹಿತ್ಯದಲ್ಲೂ ಅತೀವ ಆಸಕ್ತಿ ಹೊಂದಿದ್ದು, ಕನ್ನಡದಲ್ಲಿ ಹಲವು ಲೇಖನಗಳು ಹಾಗೂ ಏಳು ಪುಸ್ತಕಗಳನ್ನು ಬರೆದಿದ್ದಾರೆ.

ಮೈಸೂರು ಹಾಗೂ ಸುತ್ತಮುತ್ತ ಇಂದು...



ಇಂದಿನ ಪಂಚಾಂಗ

4.04.2024 ಗುರುವಾರ, ಮಳೆ ನಕ್ಷತ್ರ: ರೇವತಿ 31.03.2024ರಿಂದ 12.04.2024
ಶ್ರೀ ಶುಭಕೃತ ನಾಮ ಸಂವತ್ಸರ, ಉತ್ತರಾಯಣ, ಶಿಶಿರ ಋತು, ಫಾಲ್ಗುಣ ಮಾಸ, ಕೃಷ್ಣ ಪಕ್ಷ, ತಿಥಿ: ದಶಮಿ, ನಕ್ಷತ್ರ: ಶ್ರವಣ, ರಾಹುಕಾಲ: ಮಧ್ಯಾಹ್ನ 1.30 ರಿಂದ 3 ಗಂಟೆಯವರೆಗೆ

■ **ಜೆಎಸ್‌ಎಸ್ ಆಯುರ್ವೇದ ಆಸ್ಪತ್ರೆ :** ಚರ್ಮದಲ್ಲಿ ಕಾಣಿಸಿಕೊಳ್ಳುವ ವಿವಿಧ ರೀತಿಯ ಗಂಟುಗಳು ಮತ್ತು ಅಪಘಾತದಿಂದ ಉಂಟಾಗುವ ಚಿಕ್ಕ ಗಾಯಗಳು ಕುರಿತು ಶಿಬಿರ, ಸ್ಥಳ: ಜೆಎಸ್‌ಎಸ್ ಆಯುರ್ವೇದ ಆಸ್ಪತ್ರೆ, ಲಲಿತಾದ್ರಿಪುರ ರಸ್ತೆ, ಬೆಳಗ್ಗೆ 9 ರಿಂದ.

■ **ರಾಮ್‌ಸನ್ಸ್ ಬೊಂಬೆ ಮನೆ:** ದಸರೆ ಬೊಂಬೆ ಪ್ರದರ್ಶನ, ಸ್ಥಳ: ರಾಮ್‌ಸನ್ಸ್ ಬೊಂಬೆ ಮನೆ, ನಜರ್‌ಬಾದ್ ಮುಖ್ಯ ರಸ್ತೆ, ಬೆಳಗ್ಗೆ 10 ರಿಂದ ಸಂಜೆ 7 ರವರೆಗೆ

■ **ಜೆಎಸ್‌ಎಸ್ ಮಹಿಳಾ ಪಾಲಿಟೆಕ್ನಿಕ್:** ವಿದ್ಯಾರ್ಥಿ ಸಂಘದ ವಾರ್ಷಿಕೋತ್ಸವ, ಅಂತರರಾಷ್ಟ್ರೀಯ ಮಹಿಳಾ ದಿನಾಚರಣೆ, ಸಾನ್ನಿಧ್ಯ : ಸುತ್ತೂರು ಶ್ರೀ ಶಿವರಾತ್ರಿ ದೇಶಿಕೇಂದ್ರ ಸ್ವಾಮೀಜಿ, ಮುಖ್ಯ ಅತಿಥಿಗಳು: ಐಸಿಎಐ, ಮೈಸೂರು ಶಾಖೆ ಅಧ್ಯಕ್ಷ ಸಿ.ಎ. ಉತ್ತಮ್ ಪಡಿವಾಳ್ ಎಂ., ಅತಿಥಿಗಳು: ಎಜುಕೇರ್ ಐಟಿಇಎಸ್ ವ್ಯವಸ್ಥಾಪಕ ನಿರ್ದೇಶಕರಾದ ಶ್ರೀಮತಿ ರಚನಾ ಮಹೇಶ್, ಅಧ್ಯಕ್ಷತೆ: ಜೆಎಸ್‌ಎಸ್ ಮಹಿಳಾ ಪಾಲಿಟೆಕ್ನಿಕ್ ಪ್ರಾಂಶುಪಾಲ ವಿ.ಬಿ.ಲೋಕೇಶ, ಸ್ಥಳ: ಕಲಾಮಂದಿರ, ಬೆಳಗ್ಗೆ 10.30ಕ್ಕೆ.

■ **ಕಾಲೇಜು ಶಿಕ್ಷಣ ಕಲಾ ಕಾಲೇಜು, ಸಾಂಸ್ಕೃತಿಕ ವೇದಿಕೆ, ಅಸ್ತಿತ್ವ ಸಾಂಸ್ಕೃತಿಕ ವೇದಿಕೆ :** ಅಂತರರಾಷ್ಟ್ರೀಯ ಮಹಿಳಾ ದಿನಾಚರಣೆ ಅಂಗವಾಗಿ ಡಾ.ಎನ್.ಕೆ. ಲೋಲಾಕ್ಷಿ ಅವರ ದೃಶ್ಯಕಾವ್ಯ ಲೋಕಾರ್ಪಣೆ, ಉದ್ಘಾಟನೆ : ಸಂಸ್ಕೃತಿ ಚಿಂತಕ ಶಂಕರ್ ದೇವನೂರು, ಅಧ್ಯಕ್ಷತೆ: ಮಹಾರಾಣಿ ಮಹಿಳಾ ಕಲಾ ಕಾಲೇಜು ಪ್ರಾಂಶುಪಾಲ ಡಾ.ಬಿ.ವಿ.ವಸಂತಕುಮಾರ್, ದೃಶ್ಯಕಾವ್ಯ ಲೋಕಾರ್ಪಣೆ: ಶ್ರೀಮತಿ ಅಖಿಲಾ ತಾಂಡೂರು, ವಿಶೇಷ ಉಪನ್ಯಾಸ: ಡಾ.ಎನ್.ಕೆ.ಲೋಲಾಕ್ಷಿ, ಸನ್ಮಾನ: ಪೊಲೀಸ್ ಅಧೀಕ್ಷಕಿ ಡಾ.ಬಿ.ಟಿ.ಕವಿತಾ, ಉಪಸ್ಥಿತರು : ಸಾಂಸ್ಕೃತಿಕ ವೇದಿಕೆ ಅಧ್ಯಾಪಕ ಕಾರ್ಯದರ್ಶಿ ಎಂ. ನಂಜುಂಡಯ್ಯ, ಶ್ರೀಮತಿ ಅಶ್ವಿನಿ, ಕು. ರಕ್ಷಿತಾ, ಕು.ಜಿ.ಎಸ್.ಜೇನುಶ್ರೀ, ಜನಪದ ಗಾಯಕ ಅಮ್ಮ ರಾಮಚಂದ್ರ ಅವರಿಂದ ಗಾಯನ ನಮನ, ಸ್ಥಳ: ಶ್ರೀ ನಾಲ್ವಡಿ ಕೃಷ್ಣರಾಜ ಒಡೆಯರ್ ವೇದಿಕೆ, ಮಹಾರಾಣಿ ಮಹಿಳಾ ಕಲಾ ಕಾಲೇಜು, ಬೆಳಗ್ಗೆ 10.30ಕ್ಕೆ.

■ **ಮೈಸೂರು ಜಿಲ್ಲಾ ಪ್ರಾಕೃತಿಕ ಚಿಕಿತ್ಸಾ ಪರಿಷತ್:** ಬಿ.ಪಿ, ಶುಗರ್, ಬೊಜ್ಜು ನಿವಾರಣೆ, ಗ್ಯಾಸ್ಟ್ರಿಕ್, ಅಸಿಡಿಟಿ, ಅಸ್ತಮಾ, ಅಜೀರ್ಣತೆ, ಅಲರ್ಜಿ, ಹಸಿರು ನರ (ವೆರಿಕೋಸ್ ವೈನ್), ಬೆನ್ನು ನೋವು, ಸಯಾಟಿಕ್, ಸಂಧಿವಾತ, ಥೈರಾಯಿಡ್, ಮೊಣಕಾಲು ನೋವು ಇನ್ನಿತರ ಆರೋಗ್ಯ ಸಮಸ್ಯೆಗಳಿಗೆ ಚಿಕಿತ್ಸಾ ಶಿಬಿರ, ಸ್ಥಳ: ಶ್ರೀ ಸತ್ಯನಾರಾಯಣ ಸನ್ನಿಧಿ, ಶ್ರೀ ಅಮೃತೇಶ್ವರ ದೇವಸ್ಥಾನ, ದೇವರಾಜ ಮೊಹಲ್ಲಾ, ಬೆಳಗ್ಗೆ 10.30ರಿಂದ

■ **ಶ್ರೀ ಶ್ರೀ ಜಗದ್ಗುರು ಶಂಕರಾಚಾರ್ಯ ಮಹಾಸಂಸ್ಥಾನ, ದಕ್ಷಿಣಾಮ್ನಾಯಿ ಶಾರದಾ ಪೀಠ, ಶೃಂಗೇರಿ:** ಮೈಸೂರು ಅಭಿನವ ಶಂಕರಾಲಯದ ಶತಮಾನೋತ್ಸವ, ಬೆಳಗ್ಗೆ 8.30ಕ್ಕೆ ಶ್ರೀ ಮಹಾಗಣಪತಿ, ಶ್ರೀ ಸತ್ಯನಾರಾಯಣ ಸ್ವಾಮಿ, ಶ್ರೀ ಶಂಕರಾಚಾರ್ಯರ ಸನ್ನಿಧಿಗಳಲ್ಲಿ ಕುಂಭಾಭಿಷೇಕ ನವಗ್ರಹ ಮೂರ್ತಿಗಳ ಪುನಃಪ್ರತಿಷ್ಠಾಪನೆ, ಬೆಳಗ್ಗೆ 10.30ಕ್ಕೆ ಸಾರ್ವಜನಿಕ ದರ್ಶನ ಪಾದಪೂಜೆ ಮತ್ತು ಭಿಕ್ಷಾವಂದನೆ, ಸಂಜೆ 4.30ಕ್ಕೆ ವಿವಿಧ ದೇವಾಲಯಗಳು ಹಾಗೂ ಸಂಘ ಸಂಸ್ಥೆಗಳಿಗೆ ಭೇಟಿ, ಸಂಜೆ 6.30ಕ್ಕೆ ಅಭಿನವ ಶಂಕರ ಕರುಣಾ ವಿಲಾಸ–ಜಗದ್ಗುರು ಶ್ರೀ ಸಚ್ಚಿದಾನಂದ ಶಿವಾಭಿನವ ನೃಸಿಂಹ ಭಾರತೀ ಮಹಾಸ್ವಾಮಿಗಳವರಿಂದ ಆಶೀರ್ವದಿಸಲ್ಪಟ್ಟ ಸಂಸ್ಥೆಗಳ ಪ್ರತಿನಿಧಿಗಳು ಮತ್ತು ಶಿಷ್ಯರ ವಂಶಸ್ಥರಿಗೆ ಆಶೀರ್ವಚನ, ರಾತ್ರಿ 8.30ರಿಂದ ಚಂದ್ರಮೌಳೀಶ್ವರ ಪೂಜೆ, ರಾತ್ರಿ 7ರಿಂದ ವಿದ್ವಾನ್ ಪೃಥ್ವಿ ಭಾಸ್ಕರ್ ಅವರಿಂದ ಗಾಯನ, ವಿದ್ವಾನ್ ಅಮೋಘ್ ನದಾದೂರ್–ವಯೋಲಿನ್, ವಿದ್ವಾನ್ ನಂದನ್ ಕಶ್ಯಪ್–ಮೃದಂಗ, ವಿದ್ವಾನ್ ಮೈಸೂರು ಜಿ.ಸುಬ್ರಮಣ್ಯ ಕುಮಾರ್–ಘಟಂ, ಸ್ಥಳ:ಶ್ರೀ ವಿದ್ಯಾಶಂಕರ ನಿಲಯ ಕಲ್ಯಾಣ ಮಂಟಪದ ಆವರಣ.


■ **ಶ್ರೀರಾಮಕೃಷ್ಣ ಆಶ್ರಮ :** ಸ್ವಾಮಿ ಜ್ಞಾನಯೋಗಾನಂದ ಅವರಿಂದ ಶ್ರೀಮದ್ಭಗವದ್ಗೀತಾ ಕುರಿತು ಉಪನ್ಯಾಸ, ಸ್ಥಳ: ಆಶ್ರಮದ ಸಭಾಂಗಣ, ಯಾದವಗಿರಿ, ಸಂಜೆ 6ಕ್ಕೆ.

■ **ಮೈಸೂರು ವಿಶ್ವವಿದ್ಯಾನಿಲಯ, ಡಾ.ಬಿ.ಆರ್.ಅಂಬೇಡ್ಕರ್ ಸಂಶೋಧನೆ ಹಾಗೂ ವಿಸ್ತರಣಾ ಕೇಂದ್ರ:** ಸಮಾಜ ವಿಜ್ಞಾನ ಸಂಶೋಧನಾ ವಿಧಾನಗಳು: ಪ್ರಸ್ತುತ ಪ್ರವೃತ್ತಿಗಳು ಮತ್ತು ಮುಂದಿನ ದಾರಿ ಕುರಿತು ಆರು ದಿನಗಳ ಕಾರ್ಯಾಗಾರ, ಬೆಳಗ್ಗೆ 10ಕ್ಕೆ ಗೋಷ್ಠಿ–12 ವಿಷಯ: ಸಮಾಜ ವಿಜ್ಞಾನ ಸಂಶೋಧನೆಯಲ್ಲಿ ಪರಿಮಾಣಾತ್ಮಕ ವಿಧಾನಗಳು, ಉಪಸ್ಥಿತರು: ಗೌರವ ಪ್ರಾಧ್ಯಾಪಕ ಡಾ.ಡಿ.ನಾರಾಯಣ, ಬೆಳಗ್ಗೆ 11.45ಕ್ಕೆ ಗೋಷ್ಠಿ–13, ವಿಷಯ: ಸಮಾಜ ವಿಜ್ಞಾನ ಸಂಶೋಧನೆಯಲ್ಲಿ ಗುಣಾತ್ಮಕ ವಿಧಾನಗಳು, ಉಪಸ್ಥಿತರು: ಡಾ.ಆರ್.ನಿರಂಜನ್, ಮಧ್ಯಾಹ್ನ 2ಕ್ಕೆ ಗೋಷ್ಠಿ–14, ವಿಷಯ: ಸಮಾಜ ವಿಜ್ಞಾನ ಸಂಶೋಧನೆಯಲ್ಲಿ ಸಂಖ್ಯಾಶಾಸ್ತ್ರೀಯ ವಿಧಾನಗಳು, ಉಪಸ್ಥಿತರು: ಪ್ರೊ.ಬಿ.ಎಸ್.ಬಿರಾದರ್, ಮಧ್ಯಾಹ್ನ 3.45ಕ್ಕೆ ಗೋಷ್ಠಿ–15, ವಿಷಯ: ಸಂಶೋಧನೆಯ ಬರವಣಿಗೆ, ಉಪಸ್ಥಿತರು: ಸಂದರ್ಶಕ ಪ್ರಾಧ್ಯಾಪಕರಾದ ಪ್ರೊ.ಆರ್. ಇಂದಿರಾ, ಸ್ಥಳ: ಡಾ.ಬಿ.ಆರ್.ಅಂಬೇಡ್ಕರ್ ಸಂಶೋಧನೆ ಹಾಗೂ ವಿಸ್ತರಣಾ ಕೇಂದ್ರ, ಮಾನಸಗಂಗೋತ್ರಿ.

■ **ಶ್ರೀ ರಾಘವೇಂದ್ರಸ್ವಾಮಿ ಸೇವಾ ಸಮಿತಿ:** ಪ್ರವಚನಕಾರರಾದ ಪಂಡಿತ್ ಶ್ರೀ ಸತ್ಯಬೋಧಾಚಾರ್ಯ ರಟ್ಟಿಹಳ್ಳಿ ಅವರಿಂದ ಭಗವದ್ಗೀತೆ ಪ್ರವಚನ–ಅಧ್ಯಾಯ–18, ಸ್ಥಳ: ಶ್ರೀರಾಘವೇಂದ್ರ ಮಠ, ಜಯಲಕ್ಷ್ಮಿಪುರಂ, ಸಂಜೆ 5ರಿಂದ.


■ **ಶ್ರೀ ಉತ್ತರಾದಿ ಮಠ, ರೋಗಮೋಚನ ಶ್ರೀ ಧನ್ವಂತರಿ ಸನ್ನಿಧಾನ:** ಶ್ರೀ ಭಗವದ್ಗೀತಾ ಅಭಿಯಾನ, ಪ್ರವಚನಕಾರರಾದ ಪಂಡಿತ್ ಶ್ರೀ ಸತ್ಯಬೋಧಾಚಾರ್ಯ ರಟ್ಟಿಹಳ್ಳಿ ಅವರಿಂದ ಭಗವದ್ಗೀತೆ ಪ್ರವಚನ–ಅಧ್ಯಾಯ–18, ಸ್ಥಳ: ರೋಗಮೋಚನ ಶ್ರೀ ಧನ್ವಂತರಿ ಸನ್ನಿಧಾನ, ಶ್ರೀ ಉತ್ತರಾದಿ ಮಠ, ಅಗ್ರಹಾರ, ಸಂಜೆ 6.30 ರಿಂದ.

ಮೈಸೂರು ಆಕಾಶವಾಣಿ



ಬೆಳಗ್ಗೆ: 6.10 ಚಿಂತನ, 6.15 ಗೀತಾರಾಧನ, 6.35 ಮತ್ತು ಸಂಜೆ 6.10ಕ್ಕೆ ಮೊಬೈಲ್ ಬಳಸೋಣ ಬನ್ನಿ–ಪ್ರಪಂಚಕ್ಕೆ ಬೆಳಕಿನ ಕಿಂಡಿಯಾದ ಸಾಧನದ ಸದುಪಯೋಗ ಕುರಿತ ಬಾನುಲಿ ಸರಣಿ. ಪ್ರಸ್ತುತಿ– ಮೈಸೂರಿನ ಎನ್. ರವಿಶಂಕರ್, 6.40 ಪದ ಸಂಸ್ಕೃತಿ, ಪ್ರಸ್ತುತಿ–ಡಾ.ಕೆ.ಎಲ್. ಪ್ರಸನ್ನಾಕ್ಷಿ, 7.15 ಭಾವಗೀತೆಗಳು–ನಾಗಚಂದ್ರಿಕಾ ಭಟ್, 10.00 ಹೈದರಾಬಾದ್ ಸಹೋದರಿಯರು–ಹಾಡುಗಾರಿಕೆ, 11.00 ಮಿಶ್ರ ಮಾಧುರ್ಯ

ಮಧ್ಯಾಹ್ನ : 12.30 ದೇವರನಾಮ–ಆರ್. ಗಿರೀಶ್, 1.00 ಮತ ಹಾಕೋಣ ಬನ್ನಿ–ಮತದಾನ ಜಾಗೃತಿ ಕಾರ್ಯಕ್ರಮ, 1.20 ಭಾವಗೀತೆ –ಅಜಯ್ ಜಿ. ಪ್ರಸಾದ್, 4.30 ಸಂಧ್ಯಾರಾಗ– ಮಗನೊಂದಿಗೆ ಸ್ಕೂಟರ್‌ನಲ್ಲಿ ದೇಶದ ತೀರ್ಥ ಕ್ಷೇತ್ರಗಳನ್ನು ದರ್ಶಿಸಿದ ಚೂಡಾರತ್ನಮ್ಮ ಅವರೊಂದಿಗೆ ಮಾತುಕತೆ, 6.50 ಕೃಷಿರಂಗ–ಸಾವಯವ ಉತ್ಪನ್ನಗಳ ನೇರ ಮಾರಾಟ ಕುರಿತು ಸಂವಾದದಲ್ಲಿ ಭಾಗವಹಿಸುತ್ತಾರೆ ಎ.ಎನ್.ಮೂರ್ತಿ ಹಾಗೂ ಎನ್.ಪಿ.ಶಂಕರಯ್ಯ, ಪ್ರಸ್ತುತಿ– ಎನ್.ಕೇಶವಮೂರ್ತಿ, 8.00 ಯುವವಾಣಿ, 9.30 ಲೋಕ್ ಪ್ರಸಾರಕ್ ಕೆ ಸಾಥ್, 10.00ನಾಟಕ 'ನಿರುತ್ತರ ಕುಮಾರ' ಮೂಲ– ಶ್ರೀರಂಗ, ಬಾನುಲಿ ರೂಪ– ಡಾ.ಬಿ.ಎಸ್., ಪ್ರಣತಾರ್ಥಿಹರನ್, ನಿರ್ದೇಶನ– ಶ್ರೀನಿವಾಸ ಪ್ರಸಾದ್, ನಿರ್ಮಾಣ– ಸುನಂದಾಮೂರ್ತಿ, 10.30 ಸವಿನೆನಪು





ಮೈಸೂರು-ಕೊಡಗು ಲೋಕಸಭಾ ಕ್ಷೇತ್ರದ ಬಿಜೆಪಿ ಅಭ್ಯರ್ಥಿ ಯದುವೀರ್, ಅರಮನೆ ಮುಂದಿನ ಆಂಜನೇಯಸ್ವಾಮಿ ದೇವಸ್ಥಾನದಲ್ಲಿ ಬುಧವಾರ ಪೂಜೆ ಸಲ್ಲಿಸಿದ ನಂತರ ಬಿಜೆಪಿ-ಜೆಡಿಎಸ್ ಅಪಾರ ಕಾರ್ಯಕರ್ತರೊಂದಿಗೆ ನಾಮಪತ್ರ ಸಲ್ಲಿಸಲು ಬಿಜೆಪಿ ರಥದಲ್ಲಿ ತೆರಳಿದರು.

ಮೈಸೂರು-ಕೊಡಗು, ಚಾಮರಾಜನಗರ ಲೋಕಸಭಾ ಕ್ಷೇತ್ರದಲ್ಲಿ ಬಿಜೆಪಿ, ಕಾಂಗ್ರೆಸ್ ಅಭ್ಯರ್ಥಿಗಳಿಂದ ನಾಮಪತ್ರ ಸಲ್ಲಿಕೆ

ಮೂರನೇ ಪುಟದಿಂದ

ಆದರೆ ಉಳಿದವರು ರಥದಲ್ಲಿ ಸಾಗಿದರು. ನಜರ್‌ಬಾದ್ ಮೂಲಕ ಜಿಲ್ಲಾಧಿಕಾರಿ ಕಚೇರಿ ಬಳಿ ಮೆರವಣಿಗೆ ತಲುಪಿತು. ಬೇಸಿಗೆ ಬಿಸಿಲಲ್ಲಿ ಬಳಲಿದ್ದರೂ ಜೆಡಿಎಸ್ ಹಾಗೂ ಬಿಜೆಪಿ ಕಾರ್ಯಕರ್ತರು ಉತ್ಸಾಹದಿಂದ ಮೆರವಣಿಗೆಯಲ್ಲಿ ಸಾಗಿದರು. ಈ ಮೂಲಕ ಪಕ್ಷದ ಬಗ್ಗೆ ತಮಗಿರುವ ಬದ್ಧತೆ ಪ್ರದರ್ಶಿಸಿದರು.

ಬಿಜೆಪಿ ಹಾಗೂ ಕಾಂಗ್ರೆಸ್ ಪಕ್ಷದ ಅಭ್ಯರ್ಥಿಗಳು ನಾಮಪತ್ರ ಸಲ್ಲಿಸುವ ವೇಳೆ ಸಾವಿರ ಸಾವಿರ ಸಂಖ್ಯೆಯಲ್ಲಿ ಜನರು ಆಗಮಿಸುವ ಹಿನ್ನೆಲೆಯಲ್ಲಿ ಜಿಲ್ಲಾಧಿಕಾರಿ ಕಚೇರಿಯ ಮುಂದಿನ ರಸ್ತೆಯಲ್ಲಿ ವಾಹನ ಸಂಚಾರ ನಿರ್ಬಂಧಿಸಲಾಗಿತ್ತು. ನಾಮಪತ್ರ ಸಲ್ಲಿಸುವವರು ಹಾಗೂ ನಿಗದಿಪಡಿಸಿರುವ ನಾಯಕರನ್ನು ಹೊರತುಪಡಿಸಿ ಯಾರಿಗೂ ಜಿಲ್ಲಾಧಿಕಾರಿ ಕಚೇರಿ ಸಮೀಪ ಹೋಗಲು ಅವಕಾಶ ನೀಡದೆ ಪೊಲೀಸರು ಬಿಗಿ ಬಂದೋಬಸ್ತ್ ಮಾಡಿದ್ದರು.

ಕಾಂಗ್ರೆಸ್ ಲಕ್ಷ್ಮಣ: ಮೈಸೂರು-ಕೊಡಗು ಲೋಕಸಭಾ ಕ್ಷೇತ್ರದ ಕಾಂಗ್ರೆಸ್ ಅಭ್ಯರ್ಥಿ ಎಂ.ಲಕ್ಷ್ಮಣ ಬುಧವಾರ ಮುಖ್ಯಮಂತ್ರಿ ಸಿದ್ದರಾಮಯ್ಯ, ಉಪಮುಖ್ಯಮಂತ್ರಿ ಡಿ.ಕೆ.ಶಿವಕುಮಾರ್ ಸೇರಿದಂತೆ ಸಚಿವರು, ಶಾಸಕರು ಹಾಗೂ ಎರಡು ಜಿಲ್ಲೆಗಳ ಮುಖಂಡರೊಂದಿಗೆ ಮೈಸೂರಿನ ಸಿದ್ಧಾರ್ಥನಗರದಲ್ಲಿರುವ ಜಿಲ್ಲಾಧಿಕಾರಿಗಳ ಕಚೇರಿಯಲ್ಲಿ ಚುನಾವಣಾಧಿಕಾರಿ ಡಾ.ಕೆ.ವಿ.ರಾಜೇಂದ್ರ ಅವರಿಗೆ ನಾಮಪತ್ರ ಸಲ್ಲಿಸಿದರು. ರಾಜ್ಯದ ಪ್ರತಿಷ್ಠಿತ ಕ್ಷೇತ್ರಗಳಲ್ಲಿ ಮೈಸೂರು-ಕೊಡಗು ಲೋಕಸಭಾ ಕ್ಷೇತ್ರವೂ ಒಂದಾಗಿದ್ದು, ಏ.26ರಂದು ಮೊದಲ ಹಂತದಲ್ಲಿ ಮತದಾನ ನಡೆಯಲಿದೆ. ಈ ಹಿನ್ನೆಲೆಯಲ್ಲಿ ಚುನಾವಣಾ ಕಣ ರಂಗೇರುತ್ತಿದ್ದು, ಇಂದು ಕಾಂಗ್ರೆಸ್ ಹುರಿಯಾಳು ಎಂ. ಲಕ್ಷ್ಮಣ ಘಟಾನುಘಟಿಗಳ ಸಮ್ಮುಖದಲ್ಲಿ ನಾಲ್ಕು ಸೆಟ್ ನಾಮಪತ್ರವನ್ನು ಚುನಾವಣಾಧಿಕಾರಿ ಡಾ.ಕೆ.ವಿ. ರಾಜೇಂದ್ರ ಅವರಿಗೆ ಸಲ್ಲಿಸಿದರು.

ಶಕ್ತಿ ಪ್ರದರ್ಶನ: ಲಕ್ಷ್ಮಣ ನಾಮಪತ್ರ ಸಲ್ಲಿಸುವ ವೇಳೆ ಸಿಎಂ, ಡಿಸಿಎಂ ಅಲ್ಲದೆ ಸಚಿವ ಕೆ.ವೆಂಕಟೇಶ್, ಶಾಸಕ ತನ್ವೀರ್ ಸೇಠ್ ಅವರೊಂದಿಗೆ ಒಂದು ಸೆಟ್ ನಾಮಪತ್ರ ಸಲ್ಲಿಸಿದರೆ, ಶಾಸಕ ಕೆ.ಹರೀಶ್ ಗೌಡ, ಮಾಜಿ ಶಾಸಕ ಎಂ.ಕೆ.ಸೋಮಶೇಖರ್, ನಗರ ಕಾಂಗ್ರೆಸ್ ಅಧ್ಯಕ್ಷ ಆರ್.ಮೂರ್ತಿ, ಗ್ರಾಮಾಂತರ ಕಾಂಗ್ರೆಸ್ ಅಧ್ಯಕ್ಷ ಡಾ.ಬಿ.ಜೆ.ವಿಜಯಕುಮಾರ್ ಅವರೊಂದಿಗೆ ಎರಡನೇ ಸೆಟ್, ಶಾಸಕ ಮಂಥರ್‌ಗೌಡ, ವಿಧಾನಪರಿಷತ್ ಸದಸ್ಯ ಡಾ.ಡಿ.ತಿಮ್ಮಯ್ಯ, ಮಾಜಿ ಶಾಸಕ ಹೆಚ್.ಪಿ. ಮಂಜುನಾಥ್ ಹಾಗೂ ಕೊಡಗು ಕಾಂಗ್ರೆಸ್ ಮುಖಂಡ ಧರ್ಮಜ ಉತ್ತಪ್ಪ ಅವರೊಂದಿಗೆ ಮೂರನೇ ನಾಮಪತ್ರ ಸಲ್ಲಿಸಿದರು. ಅಲ್ಲದೆ ಜಿ.ಪಂ. ಮಾಜಿ ಅಧ್ಯಕ್ಷ ಬಿ.ಎಂ.ರಾಮು, ಹಿರಿಯ ವಕೀಲ ಚಂದ್ರಮೌಳಿ, ಮುಖಂಡರಾದ ಶಿವಣ್ಣ, ಎನ್.ಆರ್.ಕ್ಷೇತ್ರದ ಮಂಜುನಾಥ್ ಅವರೊಂದಿಗೆ ನಾಲ್ಕನೆ ಸೆಟ್ ಸಲ್ಲಿಸಿದರು.

ನಾಮಪತ್ರ ಸಲ್ಲಿಸಿದ ಬಳಿಕ ಜಿಲ್ಲಾಧಿಕಾರಿ ಕಚೇರಿ ಹೊರಗೆ ಮುಖ್ಯಮಂತ್ರಿ, ಉಪಮುಖ್ಯಮಂತ್ರಿ, ಸಚಿವರು, ಮೈಸೂರು ಹಾಗೂ ಕೊಡಗು ಜಿಲ್ಲೆಗಳ ಶಾಸಕರು, ಮಾಜಿ ಶಾಸಕರು ಹಾಗೂ ಪಕ್ಷದ ಮುಂಚೂಣಿ ಘಟಕದ ಮುಖಂಡರೊಂದಿಗೆ ಅಭ್ಯರ್ಥಿ ಎಂ.ಲಕ್ಷ್ಮಣ ಕಾರ್ಯಕರ್ತರತ್ತ ಕೈ ಬೀಸಿದರು.

ಸಮಯ ಪರಿಪಾಲನೆಗಾಗಿ ಮೆರವಣಿಗೆ ರದ್ದು: ಮೈಸೂರಿನ ಟೆರೆಷಿಯನ್ ಕಾಲೇಜು ಸಮೀಪದಿಂದ ಮುಖ್ಯಮಂತ್ರಿ ಸಿದ್ದರಾಮಯ್ಯ, ಉಪಮುಖ್ಯಮಂತ್ರಿ ಡಿ.ಕೆ.ಶಿವಕುಮಾರ್ ಸೇರಿದಂತೆ ಸಚಿವರು, ಶಾಸಕರು ಹಾಗೂ ಪ್ರಮುಖರೊಂದಿಗೆ ಕಾಂಗ್ರೆಸ್ ಅಭ್ಯರ್ಥಿ ಎಂ.ಲಕ್ಷ್ಮಣ ತೆರೆದ ವಾಹನದಲ್ಲಿ ನೂತನ ಜಿಲ್ಲಾಧಿಕಾರಿಗಳ ಕಚೇರಿವರೆಗೆ ಮೆರವಣಿಗೆಯಲ್ಲಿ ಸಾಗಲು ನಿರ್ಧರಿಸಲಾಗಿತ್ತು. ಅದಕ್ಕಾಗಿ ವಾಹನ ಹಾಗೂ ವೇದಿಕೆಯನ್ನು ಸಿದ್ಧಪಡಿಸಲಾಗಿತ್ತು. ಆದರೆ, ಚಾಮರಾಜನಗರಕ್ಕೆ ತೆರಳಿದ್ದ ಸಿಎಂ ಹಾಗೂ ಡಿಸಿಎಂ ಅವರ ಆಗಮನ ತಡವಾದ ಹಿನ್ನೆಲೆಯಲ್ಲಿ ಮೆರವಣಿಗೆಯನ್ನು ರದ್ದುಗೊಳಿಸಿ, ನೇರವಾಗಿ ಜಿಲ್ಲಾಧಿಕಾರಿ ಕಚೇರಿಗೆ ತೆರಳಿ ನಾಮಪತ್ರ ಸಲ್ಲಿಸಲಾಯಿತು. ಇದರಿಂದ ಮೆರವಣಿಗೆಯಲ್ಲಿ ಸಾಗಲು ಕಾತರದಿಂದ ಕಾದಿದ್ದ ಕಾರ್ಯಕರ್ತರು ನಿರಾಸೆಯಿಂದ ಕಾಯುವಂತಾಯಿತು. ನಾಮಪತ್ರ ಸಲ್ಲಿಸಿದ ನಂತರ ಸಿಎಂ ಟೆರೆಷಿಯನ್ ಕಾಲೇಜು ಬಳಿ ತೆರೆದ ವಾಹನದಲ್ಲಿಯೇ ಕಾರ್ಯಕರ್ತರನ್ನುದ್ದೇಶಿಸಿ ಮಾತನಾಡಿದರು.

ಚಾಮರಾಜನಗರ ವರದಿ: ಚಾಮರಾಜನಗರ ಮೀಸಲು ಲೋಕಸಭಾ ಕ್ಷೇತ್ರದಿಂದ ಬುಧವಾರ ಕಾಂಗ್ರೆಸ್ ಅಭ್ಯರ್ಥಿ ಸುನೀಲ್ ಬೋಸ್ ಹಾಗೂ ಬಿಜೆಪಿ ಅಭ್ಯರ್ಥಿ ಎಸ್.ಬಾಲರಾಜು ನಾಮಪತ್ರ ಸಲ್ಲಿಸಿದರು. ನಗರದ ಜಿಲ್ಲಾಡಳಿತ ಭವನದ ಜಿಲ್ಲಾಧಿಕಾರಿ ಕಚೇರಿಯಲ್ಲಿ ಜಿಲ್ಲಾ ಚುನಾವಣಾಧಿಕಾರಿ ಸಿ.ಟಿ.ಶಿಲ್ಪ ನಾಗ್ ಅವರಿಗೆ ಉಭಯ ಪಕ್ಷಗಳ ನಾಯಕರು ತಮ್ಮ ಪಕ್ಷದ ವರಿಷ್ಠರು, ಬೆಂಬಲಿಗರು ಹಾಗೂ ಮುಖಂಡರೊಂದಿಗೆ ಉಮೇದುವಾರಿಕೆ ಸಲ್ಲಿಸಿದರು.

ಕಾಂಗ್ರೆಸ್ ಅಭ್ಯರ್ಥಿಯಿಂದ 4 ನಾಮಪತ್ರ ಸಲ್ಲಿಕೆ: ಕಾಂಗ್ರೆಸ್ ಅಭ್ಯರ್ಥಿ ಸುನೀಲ್ ಬೋಸ್ ಬೆಳಗ್ಗೆ 10.30ರ ಸುಮಾರಿಗೆ ಗೃಹ ಸಚಿವ ಡಾ.ಜಿ.ಪರಮೇಶ್ವರ್, ಜಿಲ್ಲಾ ಉಸ್ತುವಾರಿ ಸಚಿವ ಕೆ.ವೆಂಕಟೇಶ್, ಶಾಸಕ ಸಿ.ಪುಟ್ಟರಂಗಶೆಟ್ಟಿ, ಮಾಜಿ ಶಾಸಕ ಯತೀಂದ್ರ ಸಿದ್ದರಾಮಯ್ಯ ಅವರೊಂದಿಗೆ ಜಿಲ್ಲಾ ಚುನಾವಣಾಧಿಕಾರಿ ಕಚೇರಿಗೆ ಬಂದು ನಾಮಪತ್ರ ಸಲ್ಲಿಸಿದರು.

ನಂತರ ಕಾಂಗ್ರೆಸ್ ಕಾರ್ಯಕರ್ತರ ಬೃಹತ್ ಮೆರವಣಿಗೆಯಲ್ಲಿ ಮಧ್ಯಾಹ್ನ 12.15ಕ್ಕೆ ಜಿಲ್ಲಾ ಚುನಾವಣಾಧಿಕಾರಿ ಕಚೇರಿಗೆ ಬಂದು ಸಚಿವರಾದ ಸತೀಶ್ ಜಾರಕಿಹೊಳಿ, ಡಾ.ಎಚ್.ಸಿ.ಮಹದೇವಪ್ಪ, ಶಾಸಕರಾದ ಎ.ಆರ್.ಕೃಷ್ಣಮೂರ್ತಿ, ದರ್ಶನ್ ಧ್ರುವನಾರಾಯಣ್, ಎಚ್.ಎಂ.ಗಣೇಶಪ್ರಸಾದ್, ಮಾಜಿ ಶಾಸಕ ಆರ್.ನರೇಂದ್ರ, ಕಾಡಾ ಅಧ್ಯಕ್ಷ ಪಿ.ಮರಿಸ್ವಾಮಿ, ಕೆಪಿಸಿಸಿ ಉಪಾಧ್ಯಕ್ಷ ಜಿ.ಎನ್.ನಂಜುಂಡಸ್ವಾಮಿ ಅವರೊಂದಿಗೆ ಮೂರು ನಾಮಪತ್ರ ಸಲ್ಲಿಸಿದರು. ಈ ಮೂಲಕ ಸುನೀಲ್ ಬೋಸ್ ಒಟ್ಟು ನಾಲ್ಕು ನಾಮಪತ್ರ ಸಲ್ಲಿಕೆ ಮಾಡಿದರು.

ಬಿಜೆಪಿ ಅಭ್ಯರ್ಥಿ ಎಸ್.ಬಾಲರಾಜು ಬೆಳಗ್ಗೆ 11 ಗಂಟೆಗೆ ಕ್ಷೇತ್ರದ ಬಿಜೆಪಿ ಚುನಾವಣಾ ಪ್ರಭಾರಿ ಎನ್.ವಿ.ಫಣೀಶ್, ಸಂಚಾಲಕ ಪ್ರೊ.ಕೆ.ಆರ್.ಮಲ್ಲಿಕಾರ್ಜುನಪ್ಪ, ಮುಖಂಡ ನೂರೊಂದುಶೆಟ್ಟಿ ಹಾಗೂ ಇತರೆ ಮುಖಂಡರೊಂದಿಗೆ ಬಂದು ನಾಮಪತ್ರ ಸಲ್ಲಿಸಿದರು.

ನಂತರ ಬಿಜೆಪಿ ಕಾರ್ಯಕರ್ತರ ಬೃಹತ್ ಮೆರವಣಿಗೆಯಲ್ಲಿ ಮಧ್ಯಾಹ್ನ 2.30ಕ್ಕೆ ಜಿಲ್ಲಾ ಚುನಾವಣಾಧಿಕಾರಿ ಕಚೇರಿಗೆ ಬಂದು ಬಿಜೆಪಿ ರಾಜ್ಯಾಧ್ಯಕ್ಷ ಬಿ.ವೈ.ವಿಜಯೇಂದ್ರ, ಉಪಾಧ್ಯಕ್ಷ ಎನ್.ಮಹೇಶ್, ಜೆಡಿಎಸ್ ಶಾಸಕರಾದ ಜಿ.ಟಿ.ದೇವೇಗೌಡ, ಎಂ.ಆರ್.ಮಂಜುನಾಥ್, ಮಾಜಿ ಶಾಸಕ ಹರ್ಷವರ್ಧನ್, ಬಿಜೆಪಿ ಜಿಲ್ಲಾಧ್ಯಕ್ಷ ಸಿ.ಎಸ್.ನಿರಂಜನ್ ಕುಮಾರ್, ಬರ ಪರಿಹಾರ ಸಮಿತಿ ಮಾಜಿ ಅಧ್ಯಕ್ಷ ಎಂ.ರಾಮಚಂದ್ರ, ಮುಖಂಡ ಮಹದೇವಸ್ವಾಮಿ, ಹಿರಿಯ ವಕೀಲ ಅರುಣ್‌ಕುಮಾರ್, ಪಕ್ಷದ ಹಿರಿಯ ಮುಖಂಡರೊಂದಿಗೆ ಎರಡು ನಾಮಪತ್ರ ಸಲ್ಲಿಸಿದರು. ಈ ಮೂಲಕ ಎಸ್.ಬಾಲರಾಜು ಒಟ್ಟು ಮೂರು ನಾಮಪತ್ರ ಸಲ್ಲಿಸಿದರು.

ಮೈಸೂರು-ಕೊಡಗು ಕ್ಷೇತ್ರದಲ್ಲಿ ಲಕ್ಷ್ಮಣ ಗೆದ್ದರೆ ನಾನೇ ಗೆದ್ದಂಗೆ: ಸಿಎಂ

- ಈ ಗೆಲುವು ಕಾರ್ಯಕರ್ತರ ಗೆಲುವೂ ಹೌದು
- ನನ್ನ ಮರ್ಯಾದೆ ಉಳಿಸಬೇಕಾದರೆ ಎಲ್ಲಾ ಕಡೆ ಲೀಡ್ ಕೊಡಬೇಕು

ಮೈಸೂರು,ಏ.3(ಎಂಟಿವೈ)- ಮೈಸೂರು-ಕೊಡಗು ಲೋಕಸಭಾ ಕ್ಷೇತ್ರದಲ್ಲಿ ಕಾಂಗ್ರೆಸ್ ಅಭ್ಯರ್ಥಿ ಎಂ.ಲಕ್ಷ್ಮಣ ಗೆದ್ದರೆ, ಸಿದ್ದರಾಮಯ್ಯ, ಡಿ.ಕೆ.ಶಿವಕುಮಾರ್ ಹಾಗೂ ಪಕ್ಷದ ಕಾರ್ಯಕರ್ತರು ಗೆದ್ದಂತೆ. ಮನೆ ಮನೆಗೆ ತೆರಳಿ ಮತ ಹಾಕಿಸುವಂತೆ ಮುಖ್ಯಮಂತ್ರಿ ಸಿದ್ದರಾಮಯ್ಯ ಸಲಹೆ ನೀಡಿದ್ದಾರೆ.

ಕಾಂಗ್ರೆಸ್ ಅಭ್ಯರ್ಥಿ ಎಂ.ಲಕ್ಷ್ಮಣ ಅವರು ನಾಮಪತ್ರ ಸಲ್ಲಿಸಿದ ಬಳಿಕ ಟೆರೆಷಿಯನ್ ಕಾಲೇಜು ಬಳಿ ಆಯೋಜಿಸಿದ್ದ ಕಾರ್ಯಕರ್ತರ ಸಭೆಯನ್ನುದ್ದೇಶಿಸಿ ಮಾತನಾಡಿದ ಅವರು, ಮೈಸೂರು-ಕೊಡಗು ಲೋಕಸಭಾ ಕ್ಷೇತ್ರದ ಕಾಂಗ್ರೆಸ್ ಅಧಿಕೃತ ಅಭ್ಯರ್ಥಿಯಾಗಿ ಎಂ.ಲಕ್ಷ್ಮಣ ಅವರನ್ನು ಕಣಕ್ಕಿಳಿಸಲಾಗಿದೆ. ಲಕ್ಷ್ಮಣ್ ಅವರನ್ನು ಎಐಸಿಸಿ ಅಧ್ಯಕ್ಷ ಮಲ್ಲಿಕಾರ್ಜುನ ಖರ್ಗೆ, ಸೋನಿಯಾಗಾಂಧಿ, ರಾಹುಲ್ ಗಾಂಧಿ, ಸಿದ್ದರಾಮಯ್ಯ, ಡಿ.ಕೆ.ಶಿವಕುಮಾರ್ ಹಾಗೂ ಸ್ಥಳೀಯ ಶಾಸಕರು, ಮುಖಂಡರ ಒಪ್ಪಿಗೆ ಮೇರೆಗೆ ಅಭ್ಯರ್ಥಿಯಾಗಿಸಲಾಗಿದೆ. ಕೊಡಗು ಜಿಲ್ಲೆಯಲ್ಲಿ ಎರಡು ಕ್ಷೇತ್ರಗಳಲ್ಲಿ ನಮ್ಮ ಶಾಸಕರಿದ್ದಾರೆ. ಕಳೆದ ಬಾರಿ 86 ಸಾವಿರ ಮತ ಹೋಗಿತ್ತು. ಈ ಬಾರಿ ವಿರಾಜಪೇಟೆ, ಮಡಿಕೇರಿ ಕ್ಷೇತ್ರದಲ್ಲಿ ನಮ್ಮವರು, ಪಿರಿಯಾಪಟ್ಟಣ, ಚಾಮರಾಜ, ನರಸಿಂಹರಾಜ ಕ್ಷೇತ್ರದಲ್ಲಿ ಕಾಂಗ್ರೆಸ್ ಶಾಸಕರಿದ್ದಾರೆ. ಚಾಮುಂಡೇಶ್ವರಿ, ಹುಣಸೂರು, ಕೆ.ಆರ್.ಕ್ಷೇತ್ರದಲ್ಲಿ ನಮ್ಮ ಶಾಸಕರು ಇಲ್ಲದಿದ್ದರೂ ಕಾರ್ಯಕರ್ತರು, ಮುಖಂಡರಿದ್ದಾರೆ. ನನ್ನ ಮರ್ಯಾದೆ ಉಳಿಸಬೇಕಾದರೆ ಲೀಡ್ ಕೊಡಬೇಕು ಎಂದಿದ್ದೇನೆ. ನೀವು ಅರ್ಥ ಮಾಡಿಕೊಳ್ಳಬೇಕು. ಲಕ್ಷ್ಮಣ ಕೇವಲ ಅಭ್ಯರ್ಥಿ ಮಾತ್ರ ಆದರೆ ನಿಜವಾಗಿ ಅಭ್ಯರ್ಥಿಗಳು ಕಾರ್ಯಕರ್ತರೆ. ನಮ್ಮ ಪಕ್ಷ ನಮ್ಮ ಅಭ್ಯರ್ಥಿ ನಾನೇ ಎಂದು ತಿಳಿದುಕೊಂಡು ಕಾಂಗ್ರೆಸ್‌ಗೆ ಮತ ಹಾಕಿಸಿ ಗೆಲ್ಲಿಸಿ. ಲಕ್ಷ್ಮಣ ಗೆದ್ದರೆ ನಾನೇ ಗೆದ್ದಂಗೆ, ಡಿ.ಕೆ.ಶಿವಕುಮಾರ್, ಕೆ.ವೆಂಕಟೇಶ್, ಡಾ.ಹೆಚ್.ಸಿ.ಮಹದೇವಪ್ಪ, ತನ್ವೀರ್ ಸೇಠ್ ಹಾಗೂ ಕಾರ್ಯಕರ್ತರು ಗೆದ್ದಂತೆ. ಈ ಹಿನ್ನೆಲೆಯಲ್ಲಿ ಮನೆ ಮನೆಗೆ ಹೋಗಿ ಕಾಂಗ್ರೆಸ್‌ಗೆ ಮತ ಹಾಕಿಸಬೇಕು ಎಂದು ಮನವಿ ಮಾಡಿದರು.



ಮೈಸೂರು-ಕೊಡಗು ಲೋಕಸಭಾ ಕ್ಷೇತ್ರದ ಕಾಂಗ್ರೆಸ್ ಅಭ್ಯರ್ಥಿ ಎಂ. ಲಕ್ಷ್ಮಣ ನಾಮಪತ್ರ ಸಲ್ಲಿಸಿದ ನಂತರ ಮೈಸೂರಿನ ಟೆರಿಷಿಯನ್ ಕಾಲೇಜು ಬಳಿ ಮುಖ್ಯಮಂತ್ರಿ ಸಿದ್ದರಾಮಯ್ಯ ಪ್ರಚಾರ ಸಭೆ ಉದ್ದೇಶಿಸಿ ಮಾತನಾಡಿದರು.

ಜಾತಿ ವ್ಯವಸ್ಥೆ: ಜಾತಿ ವ್ಯವಸ್ಥೆ ಇರುವುದರಿಂದ ಯಾವುದೋ ಜಾತಿಯಲ್ಲಿ ಹುಟ್ಟಿದ್ದೇವೆ. ಇಂತಹುದೇ ಜಾತಿಯಲ್ಲಿ ಹುಟ್ಟಬೇಕು ಎಂದು ಯಾರೂ ಅರ್ಜಿ ಹಾಕಿಕೊಂಡು ಹುಟ್ಟಿಲ್ಲ. ಲಕ್ಷ್ಮಣ್ ಅರ್ಜಿ ಹಾಕಿ ಒಕ್ಕಲಿಗ ಜಾತಿಯಲ್ಲಿ ಹುಟ್ಟಿಲ್ಲ. ನಾನು ಕುರುಬರ ಜಾತಿಯಲ್ಲಿ ಹುಟ್ಟಲು ಅರ್ಜಿ ಹಾಕಿಲ್ಲ. ಜಾತಿ ವ್ಯವಸ್ಥೆ ಇದೆ. ಹಾಗಾಗಿ ನಾವು ಆಯಾಯ ಜಾತಿಯಲ್ಲಿ ಹುಟ್ಟಿದ್ದೇವೆ. ಆದರೆ, ಜಾತಿ ಜಾತಿಗಳ ನಡುವೆ ವಿಂಗಡಣೆ, ಧರ್ಮ ಧರ್ಮಗಳ ನಡುವೆ ವಿಂಗಡಣೆ ಮಾಡುವ ಕೆಲಸ ಕಾಂಗ್ರೆಸ್ ಪಕ್ಷ ಎಂದಿಗೂ ಮಾಡಲ್ಲ. ನಾವೆಲ್ಲಾ ಮನುಷ್ಯರು. ಯಾವುದೇ ಜಾತಿ, ಧರ್ಮದಲ್ಲಿ ಹುಟ್ಟಿದ್ದರೂ ಮನುಷ್ಯರಾಗಿ ಬದುಕಬೇಕು. ಅದನ್ನು ಕುವೆಂಪು ಅವರು ಹೇಳಿದ್ದರು. ವಿಶ್ವಮಾನವ ಸಂದೇಶ ಸಾರಿದ್ದರು ಎಂದರು.

ಬಡವರ ಕಷ್ಟದ ಬಗ್ಗೆ ಮಾತಾಡಲ್ಲ: ಪ್ರಧಾನಿ ನರೇಂದ್ರ ಮೋದಿ 10 ವರ್ಷದಲ್ಲಿ ಬಡವರ ಕಷ್ಟ, ರೈತ, ಕಾರ್ಮಿಕರು, ದಲಿತರು, ಅಲ್ಪಸಂಖ್ಯಾತ, ಹಿಂದುಳಿದವರ ಕಷ್ಟದ ಬಗ್ಗೆ ಮಾತಾಡಿಲ್ಲ. ದೇಶದಲ್ಲಿ ಯಾಕೆ ಬಡತನವಿದೆ. ದೇಶದಲ್ಲಿ ಯಾಕೆ ಬಟ್ಟೆಯಿಲ್ಲ. ಜನರಿಗೆ ಊಟವಿಲ್ಲ ಎನ್ನುವುದರ ಬಗ್ಗೆ ಮೋದಿ ಅವರು ಮಾತನಾಡದೇ, ಕೇವಲ ಭಾವನಾತ್ಮಕತೆ ಬಗ್ಗೆ ಮಾತಾಡುತ್ತಾರೆ. ಹಿಂದುತ್ವ, ದೇವಾಲಯಗಳ ಬಗ್ಗೆ ಮಾತಾಡುತ್ತಾರೆ. ಅಯೋಧ್ಯೆ ರಾಮಮಂದಿರ, ಪುಲ್ವಾಮಾ, ಆರ್ಟಿಕಲ್ 370 ಬಗ್ಗೆ ಮಾತಾಡುತ್ತಾರೆ. ಇವುಗಳ ಬಗ್ಗೆ ಮಾತಾಡಬೇಡಿ ಎನ್ನಲ್ಲ. ಆದರೆ, ಬಡತನ, ನಿರುದ್ಯೋಗ, ಬೆಲೆ ಏರಿಕೆ, ರೈತರ ಕಷ್ಟಗಳ ಬಗ್ಗೆಯೂ ಮಾತಾಡಬೇಕು ಎಂದು ಕಿಡಿಕಾರಿದರು.

ಈಗ ಎರಡನೇ ಬಾರಿಗೆ ಮುಖ್ಯಮಂತ್ರಿಯಾಗಿದ್ದೇನೆ. ಈ ಅವಧಿಯಲ್ಲಿ ನಾವು ಹೇಳಿದಂತೆ ನಡೆದುಕೊಳ್ಳಬೇಕು. ನಿಮ್ಮ ಸಮಸ್ಯೆ ಬಗೆಹರಿಸುತ್ತೇವೆ ಎಂದು ಭರವಸೆ ನೀಡಿ ಅಧಿಕಾರಕ್ಕೆ ಬಂದಿದ್ದೇವೆ. ಅದರಂತೆ ಮೊದಲ ಅವಧಿಯಲ್ಲಿ ಅನ್ನಭಾಗ್ಯ, ಕ್ಷೀರಭಾಗ್ಯ, ಶೂ ಭಾಗ್ಯ, ಮನಸ್ವಿನಿ, ಸಾಲಮನ್ನಾ, ಇಂದಿರಾ ಕ್ಯಾಂಟೀನ್ ಸೇರಿದಂತೆ ಇನ್ನಿತರ ಜನಪ್ರಿಯ ಯೋಜನೆಗಳನ್ನು ಜಾರಿಗೊಳಿಸಿದ್ದೇವೆ. ಎರಡನೇ ಅವಧಿಯಲ್ಲಿ 5 ಗ್ಯಾರಂಟಿ ಯೋಜನೆಗಳನ್ನು ಅನುಷ್ಠಾನಗೊಳಿಸಿ ನುಡಿದಂತೆ ನಡೆದಿದ್ದೇವೆ. ಆದರೆ, ಬಿಜೆಪಿಯವರು ಎಂದೂ ನುಡಿದಂತೆ ನಡೆದಿಲ್ಲ. ಬರೀ ಸುಳ್ಳು ಹೇಳಿಕೊಂಡು ತಿರುಗಾಡುತ್ತಿದ್ದಾರೆ. ಕಪ್ಪು ಹಣ ತಂದು ಪ್ರತಿ ಕುಟುಂಬಕ್ಕೂ ತಲಾ 15 ಲಕ್ಷ ರೂ. ಹಾಕುವುದಾಗಿ ಹೇಳಿದ್ದರು. 2 ಕೋಟಿ ಉದ್ಯೋಗ ಸೃಷ್ಟಿ, ಅಚ್ಛೇ ದಿನ್ ಆಯೇಗಾ, ಬೆಲೆ ಏರಿಕೆ, ಹಣದುಬ್ಬರ ಕಡಿಮೆ ಮಾಡುವುದಾಗಿ ಹೇಳಿದ್ದರು. ರೈತರ ಆದಾಯ ದುಪ್ಪಟ್ಟು ಮಾಡುವುದಾಗಿ ಭರವಸೆ ನೀಡಿದ್ದರು. ಇವುಗಳಲ್ಲಿ ಒಂದಾದರೂ ಜಾರಿಗೆ ತಂದಿದ್ದಾರಾ ಎಂದು ಪ್ರಶ್ನಿಸಿದರು.

ಸಾಬೀತಾದರೆ ರಾಜಕೀಯ ನಿವೃತ್ತಿ: ಕೇಂದ್ರ ಗೃಹ ಸಚಿವ ಅಮಿತಾ ಷಾ ರಾಮನಗದಲ್ಲಿ ರೋಡ್ ಶೋ ನಡೆಸಿ ಸುಳ್ಳು ಹೇಳಿದ್ದಾರೆ. ಕರ್ನಾಟಕ ಸರ್ಕಾರ ಬರ ಪರಿಹಾರಕ್ಕಾಗಿ ವಿಳಂಬವಾಗಿ ಅರ್ಜಿ ಸಲ್ಲಿಸಿದೆ ಎಂದಿದ್ದಾರೆ. ರಾಜ್ಯದಲ್ಲಿ ಬರಗಾಲ ಕುರಿತಂತೆ ಸೆಪ್ಟಂಬರ್‌ನಲ್ಲಿ ನಾವು ಕೇಂದ್ರ ಸರ್ಕಾರಕ್ಕೆ ಅರ್ಜಿ ಸಲ್ಲಿಸಿದ್ದೇವೆ. ಅಕ್ಟೋಬರ್ ತಿಂಗಳಲ್ಲಿ ಕೇಂದ್ರದ ಬರ ಅಧ್ಯಯನ ತಂಡ ರಾಜ್ಯಕ್ಕೆ ಆಗಮಿಸಿ ಪರಿಶೀಲನೆ ನಡೆಸಿತು. ಬಳಿಕ ಸಚಿವರಾದ ಕೃಷ್ಣ ಭೈರೇಗೌಡ, ಪ್ರಿಯಾಂಕ ಖರ್ಗೆ, ಚಲುವರಾಯಸ್ವಾಮಿ ಕೇಂದ್ರ ಸಚಿವರನ್ನು ಭೇಟಿ ಮಾಡಿ ಬರ ಪರಿಹಾರ ಕುರಿತು ಚರ್ಚಿಸಿದ್ದಾರೆ. ನಾನು ಡಿ.19ರಂದು ಖುದ್ದಾಗಿ ಪ್ರಧಾನಿ ಮೋದಿ ಹಾಗೂ ಡಿ.20ರಂದು ಅಮಿತ್ ಷಾ ಭೇಟಿ ಮಾಡಿ ಬರ ಪರಿಹಾರ ನೀಡುವಂತೆ ಮನವಿ ಮಾಡಿದ್ದೇನೆ. ಆ ವೇಳೆ ಅಮಿತ್ ಷಾ ಡಿ.23ಕ್ಕೆ ಸಭೆ ಕರೆದಿದ್ದೇನೆ. ಕರ್ನಾಟಕದಲ್ಲಿ 223 ತಾಲೂಕು ಬರಗಾಲ ಘೋಷಣೆ ಮಾಡಿದ್ದೀರಿ. 18,171 ಕೋಟಿ ರೂ. ಪರಿಹಾರ ಕೇಳಿದ್ದೀರಿ. ಅದನ್ನು ಸಭೆಯಲ್ಲಿ ಚರ್ಚಿಸಿ, ಬಿಡುಗಡೆ ಮಾಡುವುದಾಗಿ ಅಮಿತ್ ಷಾ ತಿಳಿಸಿದ್ದರು. ನಾವು ಮನವಿ ಸಲ್ಲಿಸಿ 6 ತಿಂಗಳು, ಕೇಂದ್ರ ತಂಡ ವರದಿ ಕೊಟ್ಟು 5 ತಿಂಗಳಾಗಿದೆ. ಆದರೆ, ಇಂದು ರಾಜ್ಯದ ಜನರನ್ನು ದಿಕ್ಕು ತಪ್ಪಿಸಲು ಸುಳ್ಳು ಹೇಳಿದ್ದಾರೆ. ಸುಳ್ಳು ಹೇಳಬೇಡಿ, ಒಂದೇ ವೇದಿಕೆಯಲ್ಲಿ ಚರ್ಚೆಗೆ ಕರೆದರೂ ಬರುತ್ತಿಲ್ಲ. ಚರ್ಚೆಗೆ ಬರಲು ಅವರಿಗೆ ಧಮ್ ಇಲ್ಲ. ಸುಳ್ಳು ಹೇಳಿದ್ದರೆ ನಾನು ರಾಜಕೀಯದಿಂದ ನಿವೃತ್ತಿಯಾಗುತ್ತೇನೆ. ನೀವು ಸುಳ್ಳು ಹೇಳಿದ್ದರೆ ರಾಜೀನಾಮೆ ನೀಡುತ್ತೀರಾ ಎಂದು ಸವಾಲು ಹಾಕಿದರು. ಈ ಸಂದರ್ಭದಲ್ಲಿ ಉಪಮುಖ್ಯಮಂತ್ರಿ ಡಿ.ಕೆ.ಶಿವಕುಮಾರ್, ಶಾಸಕ ತನ್ವೀರ್ ಸೇಠ್, ಸಚಿವರಾದ ಕೆ.ವೆಂಕಟೇಶ್, ಡಾ.ಹೆಚ್.ಸಿ.ಮಹದೇವಪ್ಪ, ಶಾಸಕರಾದ ಪೊನ್ನಣ್ಣ, ಮಂಥರ್‌ಗೌಡ, ಕೆ.ಹರೀಶ್ ಗೌಡ, ಕೆಪಿಸಿಸಿ ಮಹಿಳಾ ಘಟಕದ ಅಧ್ಯಕ್ಷೆ ಡಾ.ಪುಷ್ಪ ಅಮರನಾಥ್, ನಗರ ಕಾಂಗ್ರೆಸ್ ಅಧ್ಯಕ್ಷ ಆರ್.ಮೂರ್ತಿ, ಜಿಲ್ಲಾ ಕಾಂಗ್ರೆಸ್ ಅಧ್ಯಕ್ಷ ಡಾ.ಬಿ.ಜೆ.ವಿಜಯಕುಮಾರ್, ಕೊಡಗು ಕಾಂಗ್ರೆಸ್ ಅಧ್ಯಕ್ಷ ಧರ್ಮಜ ಉತ್ತಪ್ಪ, ಮಾಜಿ ಶಾಸಕ ಹೆಚ್.ಪಿ.ಮಂಜುನಾಥ್, ವಿಧಾನ ಪರಿಷತ್ ಸದಸ್ಯ ಡಾ.ಡಿ.ತಿಮ್ಮಯ್ಯ, ಮಾಜಿ ಶಾಸಕ ಎಂ.ಕೆ.ಸೋಮಶೇಖರ್, ಚಂದ್ರಮೌಳಿ, ವಿಧಾನಪರಿಷತ್ ಮಾಜಿ ಸದಸ್ಯ ಮರಿತಿಬ್ಬೇಗೌಡ, ಮುಖಂಡರಾದ ಬಿ.ಎಂ.ರಾಮು, ಹೆಚ್.ವಿ.ರಾಜೀವ್, ಮಾಜಿ ಮೇಯರ್‌ಗಳಾದ ಬಿ.ಕೆ.ಪ್ರಕಾಶ್, ನಾರಾಯಣ, ಮೋದಾಮಣಿ, ಅನಂತು, ಪುಷ್ಪಲತಾ, ಟಿ.ಬಿ.ಚಿಕ್ಕಣ್ಣ, ತಾ.ಪಂ ಮಾಜಿ ಅಧ್ಯಕ್ಷೆ ಮಂಜುಳಾ ಮಂಜುನಾಥ್, ಕಮಲಾ ಅನಂತರಾಮು, ಕವಿತಾ ಕಾಳೆ, ಎಂ.ಪ್ರದೀಪ್ ಕುಮಾರ್, ಸುಶೀಲಾ ಕೇಶವಮೂರ್ತಿ, ಬೀರಿಹುಂಡಿ ಬಸವಣ್ಣ, ಕೂರ್ಗಳ್ಳಿ ಮಹದೇವ್, ಕಡಕೊಳ ನಾರಾಯಣ್, ಎಚ್.ಡಿ.ಗಣೇಶ್, ಉದ್ಬೂರು ಕೃಷ್ಣ, ಜಿ.ವಿ.ಸೀತಾರಾಮು, ಭಾಸ್ಕರ್, ಭಾಸ್ಕರ್ ಎಲ್.ಗೌಡ, ಹೆಡತಲೆ ಮಂಜುನಾಥ್, ಗಿರೀಶ್ ನಾಯಕ, ನಜರ್‌ಬಾದ್ ನಟರಾಜ್, ಡೈರಿ ವೆಂಕಟೇಶ್, ಈಶ್ವರ್ ಚಕ್ಕಡಿ, ಶೌಕತ್ ಅಲಿಖಾನ್ ಮೊದಲಾದವರು ಹಾಜರಿದ್ದರು.

ವಿಶ್ವಮಾನವರಾಗಬೇಕು

ಕಾಂಗ್ರೆಸ್ ಅಭ್ಯರ್ಥಿ ಎಂ.ಲಕ್ಷ್ಮಣ ಅವರನ್ನು ಕೆಲವರು ಒಕ್ಕಲಿಗರೇ ಅಲ್ಲ ಎಂದಿದ್ದಾರೆ. ಇದಕ್ಕಿಂತ ದೊಡ್ಡ ಸುಳ್ಳು ಇನ್ನೊಂದಿಲ್ಲ. ಅವರು ಅನೇಕ ಬಾರಿ ನಾನು ಹುಟ್ಟುತ್ತಾ ಒಕ್ಕಲಿಗ, ಬೆಳೆಯುತ್ತಾ ವಿಶ್ವಮಾನವ ಎಂದು ಹೇಳಿದ್ದಾರೆ. ಇದು ಕುವೆಂಪು ಅವರ ಮಾತು, ಪ್ರತಿ ಮಗು ಹುಟ್ಟುತ್ತಾ ವಿಶ್ವಮಾನವರಾಗಿರುತ್ತಾರೆ. ಆದರೆ,ಬೆಳೆಯುತ್ತಾ ಅಲ್ಪಮಾನವರಾಗುತ್ತಾರೆ. ನಾವು ವಿಶ್ವಮಾನವರಾಗಲು ಪ್ರಯತ್ನಿಸಬೇಕು. ಇದು ಕಷ್ಟದ ಕೆಲಸ. ಬುದ್ಧ, ಬಸವ, ಅಂಬೇಡ್ಕರ್, ಗಾಂಧೀಜಿ ಅವರು ವಿಶ್ವಮಾನವರಾಗಿದ್ದಾರೆ. ಅವರ ಹಾದಿಯಲ್ಲಿ ಸಾಗಲು ಪ್ರಯತ್ನಿಸಬೇಕು ಎಂದು ಸಲಹೆ ನೀಡಿದರು.

ನಕ್ಕರೆ ಅದೇ ಸ್ವರ್ಗ

ಗಂಡ : ಪ್ರತಿಂಯೊಂದಕ್ಕೂ ನನ್ನದು, ನನ್ನದೂ ಅನ್ನಬೇಡ, ನಮ್ಮದು, ನಮ್ಮಿಬ್ಬರದೂ ಅನ್ನೋದು ಕಲಿ. ಈಗ ಏನ್ ಹುಡುಕ್ತಾ ಇದೀಯಾ?

ಹೆಂಡತಿ : ನೋಡ್ರಿ... ನಮ್ಮಿರದೂ ನೈಟಿ ಹುಡುಕ್ತಾ ಇದ್ದೀನಿ... ಸಿಕ್ತಾ ಇಲ್ಲ.

ಮೈಸೂರು ಮಿತ್ರ

ಗುರುವಾರ, 4 ಏಪ್ರಿಲ್ 2024

ಸತ್ಯೇನೋತ್ತಭಿತಾ ಭೂಮಿಃ!! ನಹಿ ಸತ್ಯಾತ್ಪರೋ ಧರ್ಮಃ!
(ಭೂಮಿಯು ಸತ್ಯದ ಮೇಲೆ ನಿಂತಿದೆ, ಸತ್ಯಕ್ಕಿಂತ ಮಿಗಿಲಾದ ಧರ್ಮವಿಲ್ಲ)

ಸಂಪಾದಕ: ಎಂ.ಗೋವಿಂದೇಗೌಡ M.A.

ಅಮೃತವಾಹಿನಿ.........

ಜ್ಞಾನ, ದರ್ಶನ ಮತ್ತು ತಪಸ್ಸು –ಈ ಮಾರ್ಗವನ್ನು ಸಂಪಾದಿಸಿಕೊಂಡರೆ ಜೀವಿಗಳು ಸದ್ಗತಿ ಪಡೆಯುತ್ತಾರೆ –ಭಗವಾನ್ ಮಹಾವೀರ.

ವೇದ ಸುಳ್ಳಾದರೂ ಗಾದೆ ಸುಳ್ಳಾಗದು { ಒಟ್ಟಿಗೆ ಉಂಡರೂ ಅವರೆಕಾಳು ತಿನ್ನಬೇಡ ಅಂದಂಗೆ

ನಿಮ್ಮ ಪತ್ರಗಳು

ರಾಮ, ಕೃಷ್ಣರ ಲೆಕ್ಕಗಳು !

ಮಾನ್ಯರೆ,

ಚುನಾವಣೆ ಸಮೀಪಿಸಿದಾಗಲೆಲ್ಲಾ ಸ್ಪರ್ಧಿಗಳು ಚುನಾವಣಾ ಆಯೋಗಕ್ಕೆ ಸಲ್ಲಿಸುವ ಆಸ್ತಿ ಪಾಸ್ತಿಗಳ ವಿವರ ಓದುಗರ ಕಣ್ಣು ಕುಕ್ಕುತ್ತವೆ. ಈ ಬಾರಿಯ ಲೋಕಸಭಾ ಚುನಾವಣೆಗೆ ಸ್ಪರ್ಧಿಸುತ್ತಿರುವ ಅನೇಕ ಅಭ್ಯರ್ಥಿಗಳು ತಮ್ಮ ಆಸ್ತಿ ವಿವರಗಳನ್ನು ಘೋಷಿಸಿಕೊಂಡಿದ್ದಾರೆ. ಅನೇಕ ಅಭ್ಯರ್ಥಿಗಳು ನೂರಾರು ಕೋಟಿ ರೂಪಾಯಿಗಳ ಆಸ್ತಿ ಘೋಷಿಸಿದ್ದಾರೆ. ಕೆಲವರ ಆಸ್ತಿ ಸಾವಿರ ಕೋಟಿ ರೂಪಾಯಿಗಳನ್ನು ಸಹ ಮೀರಿದೆ. ಇವೆಲ್ಲವೂ ಪಕ್ಕಾ ಆಗಿರಲಿಕ್ಕಿಲ್ಲ. ರಾಜಕೀಯ ಪರಿಭಾಷೆಯಲ್ಲಿ ಹೇಳುವುದಾದರೆ, ರಾಮನ ಲೆಕ್ಕ ಮತ್ತು ಕೃಷ್ಣನ ಲೆಕ್ಕ ವಾಸ್ತವ ಆಸ್ತಿ ವಿವರಗಳು ರಾಮನ ಲೆಕ್ಕವಾದರೆ, ಸುಳ್ಳು ಲೆಕ್ಕ ನೀಡುವುದು ಕೃಷ್ಣನ ಲೆಕ್ಕ.

ಅನೇಕ ಅಭ್ಯರ್ಥಿಗಳು ತಮ್ಮ ನಿಜವಾದ ಆಸ್ತಿ ಘೋಷಿಸದೇ ಕೃಷ್ಣನ ಲೆಕ್ಕ ನೀಡುತ್ತಾರೆ. ಆದರೆ ಕೇಂದ್ರ ಚುನಾವಣಾ ಆಯೋಗ ಇನ್ನು ಮುಂದೆಯಾದರೂ ಇವುಗಳ ಬಗ್ಗೆ ಕಟ್ಟುನಿಟ್ಟಿನ ಕ್ರಮ ತೆಗೆದುಕೊಳ್ಳಬೇಕು. ಘೋಷಿತ ಆದಾಯಕ್ಕಿಂತ ಹೆಚ್ಚು ಆದಾಯ ಹೊಂದಿರುವುದು ತನಿಖೆಯಲ್ಲಿ ಸಾಬೀತಾದರೆ, ಅಂತಹ ಅಭ್ಯರ್ಥಿಗಳ ಹೆಚ್ಚುವರಿ ಆಸ್ತಿಗಳನ್ನು ಮುಟ್ಟುಗೋಲು ಹಾಕಿಕೊಂಡು, ಅಂತಹ ಅಭ್ಯರ್ಥಿ ಮುಂದಿನ ಐದು ವರ್ಷಗಳವರೆಗೆ ಯಾವುದೇ ಚುನಾವಣೆಯಲ್ಲಿ ಸ್ಪರ್ಧಿಸದಂತೆ ನಿರ್ಬಂಧ ಹೇರಬೇಕು. ಇಂತಹ ಕಠಿಣ ರೀತಿಯ ಕ್ರಮವನ್ನು ಚುನಾವಣಾ ಆಯೋಗದಿಂದ ಎದುರು ನೋಡಬಹುದೇ?

–ಕೆ.ವಿ.ವಾಸು, ವಕೀಲರು ಮತ್ತು ನೋಟರಿ, ಮೈಸೂರು

ಪಾರಂಪರಿಕ ಕಟ್ಟಡಗಳ ರಕ್ಷಣೆಯಾಗಲಿ

ಮಾನ್ಯರೆ,



ಪಾರಂಪರಿಕ ನಗರವೆಂದೇ ಕೀರ್ತಿ ಪಡೆದಿರುವ ಮೈಸೂರು ನಗರದಲ್ಲಿ ಹಲವು ಪಾರಂಪರಿಕ ಕಟ್ಟಡಗಳು ಸರಿಯಾಗಿ ನಿರ್ವಹಣೆ ಮಾಡದೆ ದುಃಸ್ಥಿತಿಗೆ ತಲುಪಿರುವುದು ನೋವಿನ ಸಂಗತಿ. ಪಾರಂಪರಿಕ ಕಟ್ಟಡಗಳಲ್ಲಿ ಒಂದಾಗಿರುವ ಹಿಂದಿನ ಜಿಲ್ಲಾಧಿಕಾರಿಗಳ ಕಚೇರಿ 1895 ರಲ್ಲಿ ನಿರ್ಮಿಸಿದ್ದು, ಸುಮಾರು ಒಂದು ಶತಮಾನಕ್ಕಿಂತ ಹಳೆಯದಾಗಿದೆ. ಬಿಸಿಲಿನ ತಾಪಕ್ಕೆ ಗೋಡೆ ಬಣ್ಣ ಉದುರುತ್ತಿದೆ. ಕಟ್ಟಡದ ಕೆಲ ಭಾಗಗಳಲ್ಲಿ ಗಿಡ ಮತ್ತು ಸಣ್ಣ ಮರಗಳು ಬೆಳೆಯುತ್ತಿದ್ದು ಮಳೆಗಾಲ ಪ್ರಾರಂಭವಾದರೆ ಇದರೊಳಗೆ ನೀರು ಇಳಿದು ಕಟ್ಟಡಕ್ಕೆ ಬಹುದೊಡ್ಡ ಹಾನಿಯಾಗಬಹುದು. ಹಳೆ ಡಿಸಿ ಕಚೇರಿ ಕಟ್ಟಡ ಮಾತ್ರವಲ್ಲದೆ ಮೈಸೂರಿನಲ್ಲಿರುವ ಬಹುತೇಕ ಪಾರಂಪರಿಕ ಕಟ್ಟಡಗಳ ಸ್ಥಿತಿಯು ಹೀಗೆ ಇದೆ. ಸರಸ್ವತಿಪುರಂನ ಅಗ್ನಿಶಾಮಕ ಕಚೇರಿ ಕಟ್ಟಡ, ಮಹಾರಾಣಿ ವಿಜ್ಞಾನ ಕಾಲೇಜು ಕಟ್ಟಡ ಈಗಾಗಲೇ ಈ ಕಾರಣಗಳಿಂದಲೇ ಕುಸಿದು ಬಿದ್ದಿರುವ ಉದಾಹರಣೆಗಳಿವೆ. ಆದ್ದರಿಂದ, ವಿವಿಧ ಇಲಾಖೆ ಹಾಗೂ ಸಾರ್ವಜನಿಕ ಬಳಕೆಯಲ್ಲಿರುವ ಪಾರಂಪರಿಕ ಕಟ್ಟಡಗಳ ನಿರ್ವಹಣೆಯ ಅಗತ್ಯವಿದೆ. ಸರ್ಕಾರ ಇವುಗಳ ನಿರ್ವಹಣೆಗೆ ಪ್ರತ್ಯೇಕ ಅನುದಾನ ಮೀಸಲಿಡುವ ಅಗತ್ಯವಿದ್ದು, ಸಂಬಂಧಪಟ್ಟ ಸ್ಥಳೀಯ ಸಂಸ್ಥೆಗಳು ಆದಷ್ಟು ಬೇಗ ಎಲ್ಲಾ ಪಾರಂಪರಿಕ ಕಟ್ಟಡಗಳನ್ನು ಸಂರಕ್ಷಣೆ ಮಾಡಲಿ.

–ಜ್ಞಾನೇಶ್ವರಿ. ಬಿ.ಎಸ್., ಮಹಾರಾಣಿ ಮಹಿಳಾ ಕಲಾ ಕಾಲೇಜು, ಮೈಸೂರು.

ಪ್ರತಿಯೊಬ್ಬರಲ್ಲೂ ಕ್ಷಮಿಸುವ ಗುಣವಿರಲಿ

ಮಾನ್ಯರೆ,

ಕ್ಷಮೆ ಎನ್ನುವುದು ಪ್ರತಿಂಯೊಬ್ಬರ ಬದಲಾವಣೆಗೆ ಒಂದು ಅವಕಾಶ. ಯಾರೇ ಆದರೂ ತಪ್ಪು ಮಾಡದೇ ಇರಲು ಸಾಧ್ಯವಿಲ್ಲ ಅಲ್ಲವೆ? ಆದರೆ ತನ್ನ ತಪ್ಪನ್ನು ಅರಿತುಕೊಂಡು ತಿದ್ದಿ ನಡೆದಾಗ ಮಾತ್ರ ಅವನು ಮಾಡಿದ ತಪ್ಪು ಮಾಯವಾಗುವುದು. ಜೊತೆಗೆ ಮಾಡಿದ ತಪ್ಪಿಗೆ ಪ್ರಾಯಶ್ಚಿತ್ತ ಮಾಡಿಕೊಂಡಾಗ ಅವರು ಉತ್ತಮರೆನಿಸಿಕೊಳ್ಳುತ್ತಾರೆ. ಎಂತಹ ಕೊಲೆಗಡುಕರಿಗೂ ನಮ್ಮ ನ್ಯಾಯಾಲಯದಲ್ಲಿ ತಿದ್ದಿಕೊಂಡು ಉತ್ತಮ ಮನುಷ್ಯನಾಗಿ ಬಾಳಲು ಅವಕಾಶ ನೀಡುತ್ತದೆ. ಅಂತದರಲ್ಲಿ ಮನುಷ್ಯ–ಮನುಷ್ಯರಲ್ಲಿ ವೈಮನಸ್ಸೇಕೆ. ಮಾಡಿದ ತಪ್ಪನ್ನು ತಿದ್ದಿ ನಡೆಯಲು ಒಂದು ಅವಕಾಶ ಕೊಡುವುದರಲ್ಲಿ ತಪ್ಪೇನಿಲ್ಲಾ ಎನ್ನುವುದು ನನ್ನ ವಾದವಷ್ಟೇ..!

ಯಾವುದೇ ತಪ್ಪನ್ನು ಸಣ್ಣದರಲ್ಲೇ ಚಿವುಟಿ ಹಾಕಿದಾಗ ಮುಂದೆ ಅದು ಬೆಳೆದು ಹೆಮ್ಮರವಾಗಿ ದೊಡ್ಡ ಮಟ್ಟದ ತಪ್ಪಾಗುವುದನ್ನು ನಾವು ತಡೆಯಬೇಕು. ತಪ್ಪು ಮಾಡಿದನ್ನು ಅವರಿಗೆ ಹೇಳದೆ ಹಾಗೆ ಬಿಟ್ಟರೆ ಮತ್ತು ಅವರನ್ನು ಕ್ಷಮಿಸದೆ ಅವರ ತಪ್ಪನ್ನು ಅವರಿಗೆ ತಿಳಿ ಹೇಳದೆ ಹಾಗೆ ಬಿಟ್ಟರೆ ಅದು ಇನ್ನು ಬೆಳೆದು ವಿಸ್ತಾರವಾಗುವುದರಲ್ಲಿ ಯಾವುದೇ ಅನುಮಾನವಿಲ್ಲ.

ಹಾಗಾಗಿ ಪ್ರತಿಂಯೊಬ್ಬರು ಕ್ಷಮಿಸುವ ಮನೋಭಾವವನ್ನು ರೂಢಿಸಿಕೊಂಡರೆ ಒಳಿತಾಗಿ ಉತ್ತಮವಾದ ಆರೋಗ್ಯಕರವಾದ ಸಾಮರಸ್ಯವಾದ ಜೀವನ ನಡೆಸಲು ಸಾಧ್ಯ. ಕ್ಷಮೆ ಎಂಬುದು ಕೇವಲ ಹೆಣ್ಣು ಮಕ್ಕಳಿಗೆ ಮಾತ್ರ ಮೀಸಲಾಗಿರಿಸಿದೇ ಎಂಬುದು ನಮ್ಮ ತಪ್ಪು ಕಲ್ಪನೆ. ಗಂಡು ಮಕ್ಕಳು ಸಹ ಹೆಣ್ಣು ಮಕ್ಕಳಂತೆ ಕ್ಷಮಿಸುವ ಗುಣವನ್ನು ಹೊಂದಬೇಕು. ಇಬ್ಬರು ಸಮಾನರು ಎಂದ ಮೇಲೆ ಎಲ್ಲದರಲ್ಲೂ ಸಮಾನವಾದ ಹಕ್ಕನ್ನು ಹೊಂದಬೇಕಲ್ಲವೇ.

ಒಬ್ಬರನ್ನು ಚಿಕ್ಕ ತಪ್ಪಿನಲ್ಲಿ ಕ್ಷಮಿಸುವುದರಿಂದ ಅವನ ಜೀವನ ಮುಂದೆ ಉತ್ತಮ ಹಾದಿಯಲ್ಲಿ ಸಾಗಬಹುದು. ಅವನು ಮಾಡಿದ ತಪ್ಪನ್ನು ತಿದ್ದಿಕೊಂಡು ಮುಂದೆ ಎಂದೂ ಇಂತಹ ತಪ್ಪು ಮರುಕಳಿಸದೇ ಹಾಗೆ ನೋಡಿಕೊಂಡು ಉತ್ತಮ ವ್ಯಕ್ತಿಯಾಗಿ ಬಾಳಬಹುದೂ ಎಂಬ ಸಣ್ಣ ನಂಬಿಕೆ. ಇಲ್ಲವಾದರೆ ಅದನ್ನೇ ಋಣಾತ್ಮಕವಾಗಿ ತೆಗೆದುಕೊಂಡು ಮುಂದೆ ತಪ್ಪಿನ ಮೇಲೆ ತಪ್ಪು ಮಾಡಿ ಕಳ್ಳ ಸುಳ್ಳನಾಗಬಹುದು. ಈ ಪಾಪಕ್ಕೆ ನಾವು ಕಾರಣರಾಗಬಾರದು. ಆದ್ದರಿಂದ ಪ್ರತಿಯೊಬ್ಬರು ಎಲ್ಲರನ್ನೂ ಕ್ಷಮಿಸುವ ಗುಣ ಬೆಳೆಸಿಕೊಳ್ಳಲಿ ಎಂಬುದೇ ನನ್ನ ಉದ್ದೇಶ.

–ಅನಿಲ್ ರಾಜ, ಸಹ ಶಿಕ್ಷಕರು, ಗೀತಾ ಭಾರತಿ ಶಾಲೆ, ಸಿದ್ಧಾರ್ಥನಗರ, ಮೈಸೂರು



ರಾಘವೇಂದ್ರ ಸಿ.ಎಸ್.
ಉಪನ್ಯಾಸಕರು
ರಾಮಕೃಷ್ಣ ವಿದ್ಯಾಶಾಲಾ, ಮೈಸೂರು
ಮೊ: 9036389640

ಈ ಜೀವನ

ಸಂಸಾರದಲ್ಲಿರಲಿ ಸಾಮರಸ್ಯ...!

ಸದ್ದು ಗದ್ದಲಗಳ ನಡುವೆ ಸಾಗುವ ಮಾತುಗಳ ಹರಿಯಬಿಡುವ ಬಾಯಿಗಳು ತಮ್ಮ ಗಂಟಲು ಹರಿದು ಹೋಗುವಷ್ಟು ಎತ್ತರದ ದನಿಯಲ್ಲಿ ಎತ್ತರಿಸಿ ಮಾತುಗಳೆಂಬ ಮಂತ್ರಗಳನ್ನು ಹೊರ ಹಾಕಲಾಗಿ "ಸಾಕು ಸಾಕಾಗಿದೆ ಈ ಮದುವೆ, ಜಂಜಾಟ, ಸಂಸಾರ ಎಲ್ಲ ಯಾರಿಗೆ ಬೇಕು? ಬ್ರಹ್ಮಚಾರಿ ಜೀವನನೇ ಚೆನ್ನಾಗಿತ್ತು. ಮದುವೆ ಇನ್ನೂ ಆಗಿಲ್ವ?" ಅಂತ ಎಲ್ಲ ಕೇಳಿ ಕೇಳಿ ಮದುವೆಯಾದೆ. ಪ್ರಶ್ನೆ ಕೇಳುವವರು ಇಲ್ಲವಾದರೂ ಆದರೆ ಮದುವೆಯಾದ ಮೇಲೆ ಸಂತೋಷನೂ ಇಲ್ಲ, ನೆಮ್ಮದಿ ಅಂತೂ ಮೊದಲೇ ಇಲ್ಲ... ಇದು ಒಂದು ಜೀವನನಾ ಅಂತ ಅನಿಸಿದೆ!

ಈ ಮಾತುಗಳ ವೈಖರಿಗೆ ವಿಸ್ತಾರದ ಮಣೆ ಹಾಕುವ ಅಗತ್ಯವಿಲ್ಲ ಎನಿಸುತ್ತದೆ. ಸರ್ವೆ ಸಾಮಾನ್ಯವಾಗಿ ಎಲ್ಲರ ಮನೆಗಳಲ್ಲು ನಡೆಯುವ ಸಾಮಾನ್ಯ ಪ್ರಸಂಗಗಳೇ ಇವು. ಅಂತೆಯೇ ಈ ಮಾತುಗಳು ಕೇವಲ ಒಬ್ಬ ವ್ಯಕ್ತಿಗೆ ಸಂಬಂಧಿಸಿದ್ದಲ್ಲ. ಪ್ರಸ್ತುತ ದಿನಗಳಲ್ಲಿ ಮದುವೆ ಎಂದರೆ ಜಿಗುಪ್ಸೆಪಡುವ ಮಟ್ಟಿಗೆ ಯುವ ಜನತೆ ಬಂದು ನಿಂತಿದೆ. ಸಮಸ್ಯೆ ಯಾರಿಗೂ ಬೇಡ, ಸಂತೋಷ, ಸುಖ, ಸಂಭ್ರಮ ಬೇಕೆಂಬ ಮನೋಭಾವ ಎಲ್ಲೆಡೆ ಹೆಚ್ಚುತ್ತಿದೆ. ಮದುವೆ ಎಂದರೆ ಸಮಸ್ಯೆ ಅಲ್ಲ, ಹಾಗೆ ನೋಡಿದರೆ ಸಮಸ್ಯೆಗಳೇ ಇಲ್ಲದ ಮನುಷ್ಯನಾಗಲೀ, ಮನೆಯಾಗಲೀ ಇಲ್ಲವೇ ಇಲ್ಲ. ಒಬ್ಬರಿಗಿಂತ ಮತ್ತೊಬ್ಬರಿಗೆ ಸಮಸ್ಯೆಯ ರೀತಿ ವಿಭಿನ್ನವಾಗಿರುತ್ತದೆ ಅಷ್ಟೇ. ಪ್ರಸ್ತುತ ಸನ್ನಿವೇಶಗಳಲ್ಲಿ ಮದುವೆ ಎಂದರೆ ಇನ್ನಿಲ್ಲದ ಹಾಗೆ ಬೇಸರ, ಭಯ, ಜಿಗುಪ್ಸೆಪಡುತ್ತಿರುವುದಕ್ಕೆ ಹಲವು ಕಾರಣಗಳು ಕಂಡುಬರುತ್ತದೆ. ಅಲ್ಪಸ್ವಲ್ಪವಾದರೂ ಪರಿಹಾರ ತಂತ್ರ ಕಂಡುಕೊಂಡರೆ ಸಂಸಾರ ಅಂತಹ ಬೇಸರ ತರಿಸಲಾರದು ಎಂಬುದು ನನ್ನ ಅಭಿಪ್ರಾಯ.

ಹೊಂದಾಣಿಕೆ: ಪ್ರಸ್ತುತ ಸನ್ನಿವೇಶದಲ್ಲಿ ಗಮನಿಸುವುದಾದರೆ ಮದುವೆಯಾದವರಲ್ಲಿ ಪ್ರಮುಖವಾಗಿ ಈ ಹೊಂದಾಣಿಕೆಯ ಕೊರತೆ ಕಂಡುಬರುತ್ತಿದೆ. ಗಂಡ ಹೆಂಡತಿಯ ನಡುವಿನ ಹೊಂದಾಣಿಕೆ ಕೊರತೆ, ಅತ್ತೆ–ಸೊಸೆ ನಡುವೆ ಹೊಂದಾಣಿಕೆ ಕೊರತೆ, ಗಂಡನ ಮನೆಯವರೊಂದಿಗೆ ಹೊಂದಾಣಿಕೆಯ ಕೊರತೆ ಪ್ರಮುಖವಾಗಿ ಕಂಡುಬರುವುದು. ಸಂಸಾರ ಎಂದರೆ ಎರಡು ವಿಭಿನ್ನ ಹೃದಯಗಳು ಪರಸ್ಪರ ಬೇಕು–ಬೇಡಗಳ ಅರಿತು ಒಬ್ಬರನ್ನೊಬ್ಬರು ಅರ್ಥಮಾಡಿಕೊಂಡು ಸಾಗಬೇಕಾದ ಬದುಕಿನ ಹೆದ್ದಾರಿಯಾಗಿರುತ್ತದೆ. ಆದರೆ ಇತ್ತೀಚೆಗೆ ಗಂಡ–ಹೆಂಡತಿಯರಲ್ಲಿ ಹೊಂದಾಣಿಕೆ ಕೊರತೆ ಕಂಡುಬರುತ್ತಿದೆ. ಗಂಡ ಹೇಳಿದ ಹಾಗೆ ನಾನು ಯಾಕೆ ಕೇಳಬೇಕೆಂದು ಹೆಂಡತಿ, ಹೆಂಡತಿ ಹೇಳಿದ ಹಾಗೆ ನಾನ್ಯಾಕೆ ಕೇಳಬೇಕೆಂದು ಗಂಡ ಹೀಗೆ ಪರಸ್ಪರ ಪೈಪೋಟಿಯಿಂದಾಗಿ ಸಂಸಾರದಲ್ಲಿ ಕಂದಕಗಳು ಮೂಡುತ್ತಿವೆ. ಇದರೊಂದಿಗೆ ಅತ್ತೆ ಮತ್ತು ಸೊಸೆಯ ನಡುವೆ ಹೊಂದಾಣಿಕೆ ಕೊರತೆ ಅತೀ ಹೆಚ್ಚಾಗಿಯೇ ಇರುತ್ತದೆ ಎಂದರೆ ಅದು ಅತಿಶಯೋಕ್ತಿ ಅಲ್ಲ. ನನ್ನ ಮಗನನ್ನು ನನ್ನಿಂದ ದೂರ ಮಾಡಲು ಬಂದವಳು ಇವಳು ಎಂದು ಅತ್ತೆ ಭಾವಿಸಿದರೆ, ಇವರು ಹೇಳಿದಂತೆ ಕೇಳಲು ನಾನೇನು ಇವರ ಮನೆಯ ಸೇವಕಿಯೇ ಎಂಬ ಭಾವ ಇರುವ ಸೊಸೆ ಈ ಇಬ್ಬರ ನಡುವಿನ ಮುಸುಕಿನ ಗುದ್ದಾಟದಿಂದ ಮನೆಯಲ್ಲಿ ನೆಮ್ಮದಿಯಿಲ್ಲದೇ ಪರಿತಪಿಸುವ ಗಂಡಂದಿರ ಪಾಡು ಆ ದೇವರಿಗೆ ಪ್ರೀತಿ ತರುವಂತದ್ದು. ಈ ಕಡೆ ಅಮ್ಮನ ಪರವಾಗಿಯೂ ಮಾತನಾಡಲಾಗದೇ,ಆ ಕಡೆ ಮಡದಿಯ ಪರವಾಗಿಯೂ ಮಾತನಾಡಲಾಗದೇ ಒಳಗೊಳಗೆ ಸಂಕಟಪಡುವ ಗಂಡಸರ ಪಾಡು ಹೇಳತೀರದು.

ಮನುಷ್ಯರಿಗೆ ಮೊದಲು ಹೊಂದಾಣಿಕೆಯ ಮನೋಭಾವ ಇರಬೇಕು.ನನಗೆ ಇದರ ಬಗ್ಗೆ ಮಾತನಾಡುವಾಗ ಮತ್ತೆ ಮತ್ತೆ ಜಿ.ಎಸ್.ಎಸ್ ಅವರ ಅನ್ವೇಷಣೆ ಕವನದ ಕೊನೆಯ ನಾಲ್ಕು ಸಾಲುಗಳು ಕಾಡುತ್ತವೆ.

ಹತ್ತಿರವಿದ್ದೂ ದೂರ ನಿಲ್ಲುವೆವು
ನಮ್ಮ ಅಹಮ್ಮಿನ ಕೋಟೆಯಲಿ
ಎಷ್ಟು ಕಷ್ಟವೋ ಹೊಂದಿಕೆ ಎಂಬುದು
ನಾಲ್ಕು ದಿನದ ಈ ಬದುಕಿನಲಿ

ನಶ್ವರವಾದ ಈ ಬದುಕಿನಲ್ಲಿ ಸಾವು ಖಚಿತವಾದುದು. ಆದ್ದರಿಂದ ಇರುವಷ್ಟು ದಿನ ನಮ್ಮ ಅಹಂಕಾರವನ್ನು ಬದಿಗೆ ಸರಿಸಿ ಎಲ್ಲರೊಂದಿಗೆ ಹೊಂದಿಕೊಂಡು ಬಾಳುವ ಬಗೆಯನ್ನು ಕಲಿತರೆ ಜೀವನ ಸುಮಧುರವಾಗಿರುತ್ತದೆ.

ಸೋತು ಗೆಲ್ಲುವ ತಾಳ್ಮೆ ಅಗತ್ಯ: ಮೊದಲೇ ಹೇಳಿದ ಹಾಗೆ ಗಂಡನಾಗಲೀ, ಹೆಂಡತಿಯಾಗಲೀ ಪರಸ್ಪರ ಒಬ್ಬರನ್ನೊಬ್ಬರು ಅರ್ಥಮಾಡಿಕೊಂಡು ಜೀವನ ಸಾಗಿಸಬೇಕು. ಮೂಗು ಇರುವವರೆಗೆ ನೆಗಡಿ ತಪ್ಪಿದ್ದಲ್ಲ; ಮನೆ ಇರುವವರೆಗೆ ಮಾತು ತಪ್ಪಿದ್ದಲ್ಲ ಎಂಬ ಗಾದೆಯಂತೆ ಸಂಸಾರದಲ್ಲಿ ಒಬ್ಬರು ಕೋಪ ಮಾಡಿಕೊಂಡಾಗ ಮತ್ತೊಬ್ಬರು ಶಾಂತ ರೀತಿಯಲ್ಲಿ ಇದ್ದು ಸಮಸ್ಯೆಯನ್ನು ಬಗೆಹರಿಯುವಂತೆ ನೋಡಿಕೊಳ್ಳಬೇಕು. ಕೋಪ, ಮನಸ್ತಾಪ ಯಾವುದು ಕೂಡ ಶಾಶ್ವತವಲ್ಲ. ಗಂಡ ಕೋಪ ಮಾಡಿಕೊಂಡಾಗ ಹೆಂಡತಿ ಶಾಂತ ರೀತಿಯಲ್ಲಿದ್ದು ಹೆಂಡತಿ ಕೋಪ ಮಾಡಿಕೊಂಡಾಗ ಗಂಡ ಶಾಂತರೀತಿಯಲ್ಲಿದ್ದು ಪರಸ್ಪರ ಕುಳಿತು ಮಾತನಾಡಿದರೆ ಸಮಸ್ಯೆಗಳು ಬಗೆಹರಿಯುವುದು ಕಷ್ಟವೇನಲ್ಲ. ಇಂದಿನ ದಿನದಲ್ಲಿ ಮುಖ್ಯವಾಗಿ ಆ ತಾಳ್ಮೆ ಎಂಬ ಮನೋಭಾವವೇ ಕಡಿಮೆಯಾಗುತ್ತಿದೆ ಹಾಗಾಗಿಯೇ ಜಗಳ, ಮನಸ್ತಾಪ ಹೆಚ್ಚಾಗುತ್ತಿದ್ದು ವಿಚ್ಛೇದನದ ಪ್ರಸಂಗಗಳು ದಿನೇದಿನೆ ಅಧಿಕವಾಗುತ್ತಿದೆ. ಒಂದು ಕ್ಷಣದ ಕೋಪದಿಂದ ಪಾರಾದರೆ ನಾಲ್ಕು ದಿನದ ದುಃಖದಿಂದ ಪಾರಾದಂತೆ ಎಂಬ ಮಾತು ತಾಳ್ಮೆಯ ಮಹತ್ವವನ್ನು ತಿಳಿಸುವಂತದ್ದು. ಎಲ್ಲರ ಮನೆಯ ದೋಸೇನೂ ತೂತೇ ಎಂಬ ಗಾದೆಯಂತೆ ಪ್ರತಿಯೊಬ್ಬರ ಮನೆಯಲ್ಲಿ ಒಂದಲ್ಲ ಒಂದು ಸಮಸ್ಯೆಗಳು, ಮಾತುಕತೆಗಳು ಮನಸ್ತಾಪಗಳು ಇದ್ದೇ ಇರುತ್ತವೆ. ಸಹನೆಯಿಂದ ಕುಳಿತುಕೊಂಡು ಮಾತನಾಡಿದರೆ ಅದು ಎಂತಹ ಸಮಸ್ಯೆಯಾದರು ಬಗೆಹರಿಸಲು ಸಾಧ್ಯವಿದೆ.ಅದನ್ನು ಬಿಟ್ಟು ಮದುವೆ ಎಂದರೆ ಸಮಸ್ಯೆ, ಮದುವೆಯೇ ಬೇಡ ಎಂಬುದು ನಿಜಕ್ಕೂ ಪಲಾಯನವಾದಿಗಳ ನುಡಿ ಎನ್ನಬಹುದು.



“

> **ಸಂಸಾರ ಎಂದ ಮೇಲೆ ಮಾತುಕತೆ, ನೋವು, ನಲಿವು, ವಾದ–ವಿವಾದ ಸಹಜ. ಅದನ್ನು ಅರಿತುಕೊಂಡು ಎಲ್ಲವನ್ನೂ ಸಮಾನವಾಗಿ ಸರಿದೂಗಿಸಿಕೊಂಡು ಹೋಗದಿದ್ದರೆ ಎತ್ತು ಏರಿಗೆ ಕೋಣ ನೀರಿಗೆ ಎಂಬ ಗಾದೆಯಂತೆ ಸಂಸಾರದ ಹಾದಿ ತಪ್ಪುತ್ತದೆ. ಬೇಡದ ವಿಚಾರಗಳು ಒಳನುಸುಳುತ್ತವೆ. ಹಾಗೆ ಆಗದಂತೆ ಎಚ್ಚರ ವಹಿಸಿ ಸಾಮರಸ್ಯದಿಂದ ಸಂಸಾರವನ್ನು ನಡೆಸಿದ್ದಲ್ಲಿ ಪ್ರತಿ ಸಂಸಾರವು ಆನಂದ ಸಾಗರವಾಗಬಲ್ಲದು.**

ಪ್ರೀತಿ ಎಂದರೆ ಅದು ತೋರ್ಪಡಿಕೆಯಲ್ಲ: ನಿರ್ಜೀವ ವಸ್ತುಗಳಾದ ಮೊಬೈಲ್ ಫೋನ್, ಅಂತರ್ಜಾಲ, ಸಾಮಾಜಿಕ ಜಾಲತಾಣ ಪ್ರಸ್ತುತ ಸನ್ನಿವೇಶಗಳಲ್ಲಿ ಸಂಸಾರದಲ್ಲಿ ಹುಳಿಯನ್ನು ಹಿಂಡುವ ಕೆಲಸವನ್ನು ಮಾಡುತ್ತಿದೆ. ಎಲ್ಲರೂ ನಮ್ಮನ್ನು ಗುರುತಿಸಬೇಕು ಎಂದು, ಎಲ್ಲರ ಗಮನವನ್ನು ತಮ್ಮೆಡೆಗೆ ತರಲು, ಹೆಚ್ಚು ಲೈಕ್ಸ್‌ಗಳನ್ನು ಪಡೆಯುವ ಕಡೆಗೆ ಹೆಚ್ಚು ಗಮನ ನೀಡುತ್ತಿರುವುದು ಇಂದಿನ ಜನಾಂಗದ ಅತೀ ದೊಡ್ಡ ಸಮಸ್ಯೆಯಾಗಿದೆ. ಪ್ರೀತಿ ಎಂದರೆ ನಾವು ಧರಿಸುವ ಬಟ್ಟೆಯಲ್ಲ – ಅದು ಎಲ್ಲರಿಗೂ ಕಾಣಬೇಕು, ಎಲ್ಲರಿಗೂ ಮೆಚ್ಚುಗೆ ಆಗಬೇಕು, ಎಲ್ಲರೂ ಗುರುತಿಸಬೇಕು ಎಂದು ಭಾವಿಸುವುದು ಶುದ್ಧ ಮೂರ್ಖತನವಾಗುತ್ತದೆ. ಎಲ್ಲವೂ ಮಿತಿಯಲ್ಲಿದ್ದರೆ ಚೆನ್ನ, ಆದರೆ ಮಿತಿಯೇ ಅತಿಯಾದರೆ ಅದೇ ವಿಷವಾಗುತ್ತದೆ. ಪ್ರೀತಿ ತೋರ್ಪಡಿಕೆಯಲ್ಲ, ಸ್ಟೇಟಸ್‌ನಲ್ಲಿ ಹಾಕಿಕೊಂಡ ಮಾತ್ರಕ್ಕೆ ಪ್ರೀತಿ ಇದೆಯೆಂದು ಇಲ್ಲವಾದರೆ ಇಲ್ಲವೆಂದು ತಿಳಿಯುವುದು ಅನರ್ಥವಾಗುತ್ತದೆ. ನನಗೆ ಇದನ್ನು ಹೇಳುವಾಗ ಹಿಂದೆ ಓದಿದ ಕಥೆಯೊಂದು ನೆನಪಿಗೆ ಬರುತ್ತದೆ

ಕಥೆ: ಗಂಡ ಹೆಂಡತಿ ಇಬ್ಬರೂ ಮೃಗಾಲಯಕ್ಕೆ ಹೋಗಿರುತ್ತಾರೆ. ಅಲ್ಲಿ ಎರಡು ಕೋತಿಗಳು ಒಂದರ ಪಕ್ಕ ಒಂದು ಸಂತೋಷದಿಂದ ಇರುವುದನ್ನು ಗಮನಿಸುತ್ತಾರೆ. ಮುಂದೆ ಎರಡು ಸಿಂಹಗಳು ಪರಸ್ಪರ ದೂರದಲ್ಲಿ ಕುಳಿತು ಇರುವುದನ್ನು ನೋಡಿದ ಮಡದಿ ತನ್ನ ಗಂಡನಿಗೆ ಈ ರೀತಿ ಹೇಳುತ್ತಾಳೆ; ನೋಡಿ ಆ ಕೋತಿಗಳೆರಡು ಪರಸ್ಪರ ಅನ್ಯೋನ್ಯವಾಗಿ ಇರುವ ದಂಪತಿಗಳ ಹಾಗೆ. ಈ ಎರಡು ಸಿಂಹಗಳು ಅನ್ಯೋನ್ಯತೆ ಇಲ್ಲದ ದಂಪತಿಯ ಹಾಗೆ ಕಂಡುಬರುತ್ತಾರೆ ಎಂದು ತನ್ನ ಅಭಿಪ್ರಾಯವನ್ನು ತಿಳಿಸುತ್ತಾಳೆ. ಆಗ ಗಂಡ ಆ ಕೋತಿಗಳು ಇದ್ದ ಜಾಗಕ್ಕೆ ಹೋಗಿ ಒಂದು ಕೋತಿಗೆ ಕಲ್ಲನ್ನು ಎಸೆಯುತ್ತಾನೆ. ಕಲ್ಲು ಬಿದ್ದ ಕೂಡಲೇ ಕೋತಿ ದೂರ ಹೋಗಿ ನಿಲ್ಲುತ್ತದೆ. ಮತ್ತೊಂದು ಕೋತಿ ಒಬ್ಬಂಟಿಯಾಗುತ್ತದೆ. ಗಂಡ ಮತ್ತೆ ದೂರ ಇರುವ ಸಿಂಹ ಒಂದಕ್ಕೆ ಕಲ್ಲನ್ನು ಎಸೆದಾಗ ಪರಸ್ಪರ ಸಿಂಹಗಳೆರಡು ಒಂದಾಗಿ ಬೆರೆತು ಕಲ್ಲನ್ನು ಎಸೆದವರನ್ನು ಹೆದರಿಸುವ ಕೆಲಸ ಮಾಡುತ್ತವೆ. ಆಗ ಗಂಡ ತನ್ನ ಹೆಂಡತಿಗೆ ಹೇಳುತ್ತಾನೆ; ಪ್ರೀತಿ ಎಂದರೆ ಮತ್ತೊಬ್ಬರು ನೋಡಲಿ ಎಂದು ಯಾವಾಗಲೂ ಜೊತೆಯಲ್ಲೇ ಇದ್ದು ನಗುಮುಖದಿಂದ ಇರುವಂತೆ ತೋರಿಸಿಕೊಳ್ಳುವುದಲ್ಲ. ಏನೇ ಸಮಸ್ಯೆಗಳು ಬಂದರು ಎಷ್ಟೇ ದೂರದಲ್ಲಿದ್ದರೂ ನಿನ್ನೊಂದಿಗೆ ನಾನಿರುವೆ ಎಂಬ ಅಭಯವನ್ನು ನೀಡುವ ಆ ಸಿಂಹದಂತೆ ಇರುವುದೇ ನಿಜವಾದ ಪ್ರೀತಿ.

ಸಂಸಾರ ಎಂದರೆ ಹೀಗೆ ತೋರ್ಪಡಿಕೆಗಾಗಿ ತಮ್ಮತನವನ್ನು ಕಳೆದುಕೊಳ್ಳುವುದಲ್ಲ. ಎಷ್ಟೇ ಕಷ್ಟಗಳು ಬಂದರೂ ಪರಸ್ಪರ ಜೊತೆಯಾಗಿರುತ್ತೇವೆ ಎಂಬಂತಹ ಭಾವವನ್ನು ಹುಟ್ಟು ಹಾಕುವಂತದ್ದು. ಇನ್ನು ಮುಂದಾದರೂ ನಿರ್ಜೀವ ವಸ್ತುಗಳ ಮೇಲೆ ಗಮನವನ್ನು ನೀಡದೆ ಜೀವ ಇರುವ ನಿಮ್ಮವರನ್ನು ನಂಬಿ ಆಗ ಸಂಬಂಧಗಳು ಗಟ್ಟಿಯಾಗಿ ನೆಲೆ ನಿಲ್ಲುತ್ತವೆ.

ಪರಸ್ಪರ ನಂಬಿಕೆ ಅಗತ್ಯ: ಸಂಸಾರದಲ್ಲಿ ನಂಬಿಕೆ ಅತೀ ಮುಖ್ಯವಾದದ್ದು. ಯಾರೇ ಏನೇ ಹೇಳಿದರೂ ಕೇಳುವಂತಹ ಹಿತ್ತಾಳೆ ಕಿವಿಯ ಮನೋಭಾವ ಇದ್ದರೆ ಅಂತಹ ಸಂಸಾರದಲ್ಲಿ ಕಲಹಗಳು ದಿನೇದಿನೆ ಹೆಚ್ಚಾಗುತ್ತದೆ ವಿನಃ ಕಡಿಮೆಯಾಗಲಾರದು. ನಮ್ಮವರನ್ನು ಮೊದಲು ನಾವು ನಂಬಬೇಕು. ಅವರ ಬೇಕು, ಬೇಡಗಳನ್ನು ಅರಿತು ನಡೆಯಬೇಕು. ಒಂದು ವೇಳೆ ತಪ್ಪು ದಾರಿಯಲ್ಲೇ ನಡೆದಿದ್ದರೂ ಪರಸ್ಪರ ಕುಳಿತು ಸಮಾಲೋಚಿಸಿ ಮತ್ತೊಮ್ಮೆ ಆ ತಪ್ಪು ಮರುಕಳಿಸದಂತೆ ಮಾಡುವ ಮೂಲಕ ದಾರಿ ತಪ್ಪಿದ ಸಂಸಾರದ ಬಂಡಿಯನ್ನು ಮತ್ತೆ ತಮ್ಮ ಹಿಡಿತಕ್ಕೆ ತೆಗೆದುಕೊಳ್ಳಬಹುದು. ನಂಬಿಕೆ ಬದುಕಿಗೆ ಅತೀ ಅಮೂಲ್ಯವಾದುದು, ಆ ನಂಬಿಕೆ ಸಂಸಾರದಲ್ಲಿ ತೀರಾ ಅಗತ್ಯ ಹಾಗೂ ಅನಿವಾರ್ಯವಾದುದು.

ಹಣಕ್ಕಿಂತ ಗುಣಕ್ಕೆ ಪ್ರಾಧಾನ್ಯತೆ ನೀಡಬೇಕು: ಪ್ರಸ್ತುತ ದಿನಗಳಲ್ಲಿ ಸಂಸಾರದಲ್ಲಿ ಅತೀ ಹೆಚ್ಚಿನ ಮಹತ್ವವನ್ನು ಹಣವು ನಿರ್ವಹಿಸುತ್ತಿದೆ. ಆಸ್ತಿ ಹಣ ಇದ್ದರೆ ಮಾತ್ರ ಪ್ರೀತಿ, ಇಲ್ಲದಿದ್ದರೆ ಪ್ರೀತಿಯು ಇಲ್ಲ ಭಾವನೆಯು ಇಲ್ಲ ಎಂಬಂತಹ ಮನೋಭಾವ ಇತ್ತೀಚಿನ ದಿನಗಳಲ್ಲಿ ಹೆಚ್ಚಾಗಿರುತ್ತದೆ. ಹಣವನ್ನು ಯಾರು ಬೇಕಾದರೂ, ಹೇಗೆ ಬೇಕಾದರೂ ಸಂಪಾದನೆ ಮಾಡಬಹುದು. ಆದರೆ ಸಂಸಾರ ಎಂಬ ಬಂಡಿ ಸಾಗಬೇಕಾದರೆ ಹಣಕ್ಕಿಂತ ಮುಖ್ಯವಾದದ್ದು ಗುಣ. ಅದು ಗಂಡನ ಗುಣವಾಗಿರಬಹುದು ಅಥವಾ ಹೆಂಡತಿಯ ಗುಣವಾಗಿರಬಹುದು. ಒಳ್ಳೆಯ ಗುಣಗಳಿದ್ದರೆ ಮಾತ್ರ ಆ ಸಂಸಾರ ಹೆಚ್ಚು ದಿನ ಉಳಿಯಲು ಸಾಧ್ಯ. ಇಲ್ಲದಿದ್ದರೆ ಆ ಸಂಸಾರ ಕ್ಷಣಿಕವಾಗಿ ಸ್ವಲ್ಪ ದಿನಗಳಲ್ಲಿ ಮುರಿದು ಬೀಳಬಹುದು. ಗಂಡ ಹೆಂಡತಿಯರು ಪರಸ್ಪರ ಪ್ರೀತಿಯನ್ನು, ಭಾವನೆಯನ್ನು ವ್ಯಕ್ತಪಡಿಸಿಕೊಂಡು ಸಂಸಾರ ಸಾಗಿಸಬೇಕೇ ಹೊರತು ಹಣ ಎಷ್ಟಿದೆ, ಆಸ್ತಿ ಎಷ್ಟು ಮಾಡಿದ್ದಾರೆ ಎಂಬಂತಹ ಸಾಧಾರಣ ಸಂಗತಿಗಳಿಗೆ ಗಮನ ನೀಡಿದರೆ ಆ ಸಂಸಾರ ಬಹು ಕಾಲ ಉಳಿಯಲಾರದು. ಹೀಗೆ ಹೇಳಿದ ಮಾತ್ರಕ್ಕೆ ಹಣ, ಆಸ್ತಿ ಬೇಡವೆಂದು ಅರ್ಥವಲ್ಲ. ಹಣ ಆಸ್ತಿ ಬದುಕಲು ಬೇಕು. ಆದರೆ ಅವುಗಳಿಗಿಂತ ಒಳ್ಳೆಯ ನಡತೆ, ಗುಣ ಅತೀ ಅಮೂಲ್ಯವಾದುದು. ಕೋಟ್ಯಾಂತರ ಆಸ್ತಿ ಇದ್ದು, ಪರಸ್ಪರ ಗೌರವ ಭಾವನೆಯೇ ಇಲ್ಲದಿದ್ದರೆ, ಪ್ರೀತಿಯೇ ಇಲ್ಲದೆ ಹೋದರೆ ಏನು ಉಪಯೋಗ? ಸನ್ನಡತೆ, ಒಳ್ಳೆಯ ಗುಣ, ಹೊಂದಾಣಿಕೆ ಮನೋಭಾವ ಸಂಸಾರದಲ್ಲಿ ಸಾಮರಸ್ಯವನ್ನು ತರಬಲ್ಲದು.

ಕಷ್ಟ–ಸುಖ ಏನೇ ಬಂದರೂ ಒಟ್ಟಾಗಿ ನಿಲ್ಲುವ ಗುಣ: ಜೀವನವೆಂಬ ಪಯಣದಲ್ಲಿ ಏಳು ಬೀಳುಗಳು ಸಹಜ. ಕಷ್ಟ–ಸುಖ, ನೋವು–ನಲಿವು ಸರ್ವೇಸಾಮಾನ್ಯ. ಇಂತಹ ಸಂದರ್ಭದಲ್ಲಿ ಗಂಡನಾಗಲೀ, ಹೆಂಡತಿಯಾಗಲೀ, ಪರಸ್ಪರ ಜೊತೆಯಾಗಿ ನಿಲ್ಲಬೇಕು. ಕಷ್ಟಕಾಲದಲ್ಲಿ ಕುಗ್ಗಿದಾಗ ಧೈರ್ಯವನ್ನು ನೀಡಿ ಈ ಜೀವನವನ್ನು ಮುನ್ನಡೆಸಬೇಕು. ಸುಖ ಬಂದಾಗ ಸಂತೋಷದಿಂದ ಬಾಳ್ವೆ ನಡೆಸಬೇಕು. ಸಂಸಾರದಲ್ಲಿ ಏನೇ ಸಮಸ್ಯೆಗಳು ಎದುರಾದರೂ ಅಥವಾ ಯಾವುದೇ ಸಂತೋಷಗಳು ಬಂದರು ಅವನ್ನು ಸಮಾನವಾಗಿ ಸ್ವೀಕರಿಸುವಂತಹ ಗುಣ ನಮ್ಮಲ್ಲಿ ಇರಬೇಕು. ಹೀಗಿದ್ದಾಗ ಮಾತ್ರ ಆ ಸಂಸಾರ ಉತ್ತಮವಾಗಿ ನೆಲೆ ನಿಲ್ಲಬಲ್ಲದು. ಸರಸವೇ ಜನನ ವಿರಸವೇ ಮರಣ ಸಮರಸವೇ ಜೀವನ ಎಂಬ ಕವಿವಾಣಿ ಇದನ್ನೇ ತಿಳಿಸುತ್ತದೆ.

ಈ ಮೇಲೆ ತಿಳಿಸಿದ ಗುಣಗಳು ಉತ್ತಮ ಸಂಸಾರಕ್ಕೆ ದಾರಿ ದೀಪವಾಗಬಹುದು. ಸಂಸಾರ ಎಂದ ಮೇಲೆ ಮಾತುಕತೆ, ನೋವು, ನಲಿವು, ವಾದ–ವಿವಾದ ಸಹಜ. ಅದನ್ನು ಅರಿತುಕೊಂಡು ಎಲ್ಲವನ್ನೂ ಸಮಾನವಾಗಿ ಸರಿದೂಗಿಸಿಕೊಂಡು ಹೋಗದಿದ್ದರೆ ಎತ್ತು ಏರಿಗೆ ಕೋಣ ನೀರಿಗೆ ಎಂಬ ಗಾದೆಯಂತೆ ಸಂಸಾರದ ಹಾದಿ ತಪ್ಪುತ್ತದೆ. ಬೇಡದ ವಿಚಾರಗಳು ಒಳನುಸುಳುತ್ತವೆ. ಹಾಗೆ ಆಗದಂತೆ ಎಚ್ಚರವಹಿಸಿ ಸಾಮರಸ್ಯದಿಂದ ಸಂಸಾರವನ್ನು ನಡೆಸಿದ್ದಲ್ಲಿ ಪ್ರತಿ ಸಂಸಾರವು ಆನಂದ ಸಾಗರವಾಗಬಲ್ಲದು.

ಸಂಸಾರವು ಎರಡು ಮನೆತನಗಳ, ಎರಡು ಒಡಲುಗಳ, ಎರಡು ಜೀವಗಳ ಪ್ರೀತಿಯ ಬೆಸುಗೆಯಿಂದ ಮುನ್ನಡೆಯಬೇಕಾಗಿರುವ ಜಾಗೃತ ಕೈಗನ್ನಡಿ ಚೂರು ಮೈ ಮರೆತರೂ ಮನಸ್ಸುಗಳು ಪುಡಿಪುಡಿಯಾಗುವ, ಮತ್ತೂ ಜೋಡಿಸಿದರೂ ಮೂಲ ರೂಪವನ್ನು ಕಳೆದುಕೊಳ್ಳುವ ಹೀನಸ್ಥಿತಿಗೆ ಬಂದಿರುತ್ತದೆ. ಕೂಡಿ ಬಾಳಿದರೆ ಸ್ವರ್ಗ ಸುಖ ಅನುಭವದ ಹಿನ್ನೆಲೆಯಲ್ಲಿ ಒಡಮೂಡಿರುವ ಮಾತು ಎಂದೂ ಹುಸಿಯಾಗುವುದು.

ಜೀವನ
ಜೀವನ ಅಂದುಕೊಂಡ ಹಾಗೇ ಏನೂ ನಡೆಯದೆ
ಅಂದುಕೊಳ್ಳದೆಲ್ಲಾ ಸರಾಗವಾಗಿ ನಡೆಯುವ
ಕಲ್ಲು –ಮುಳ್ಳು ಹಾದಿಗಳ ಸವೆಸಿ ನಡೆಯುವ
ಬಹು ಆಯಾಸದಾಯಕ ಪ್ರಯಾಣ.

ಗ್ರಾಹಕರಿಗೆ ಉತ್ತಮ ಟಿವಿ ಜೊತೆಗೆ 8 ಸಾವಿರ ಪರಿಹಾರಕ್ಕೆ ಆದೇಶ

ಮೈಸೂರು, ಏ.3–ಗುಣಮಟ್ಟವಿಲ್ಲದ ಟಿವಿ ಮಾರಾಟ ಮಾಡಿದ್ದ ಹಿನ್ನೆಲೆಯಲ್ಲಿ ಮೈಸೂರಿನ ಕೆ.ಆರ್. ಆಸ್ಪತ್ರೆ ರಸ್ತೆಯಲ್ಲಿರುವ ಮಹಾವೀರ್ ಡಿಸ್ಟ್ರಿಬ್ಯೂಟರ್ಸ್ ಮತ್ತು ಒನಿಡಾ ಕಂಪನಿಯವರು ಗ್ರಾಹಕನಿಗೆ ಒಟ್ಟು ಎಂಟು ಸಾವಿರ ರೂ. ಪರಿಹಾರ ನೀಡಬೇಕೆಂದು ಮೈಸೂರು ಜಿಲ್ಲಾ ಗ್ರಾಹಕರ ವ್ಯಾಜ್ಯಗಳ ಪರಿಹಾರ ಆಯೋಗ ಆದೇಶ ನೀಡಿದೆ.

ವಿವರ: ಮೈಸೂರು ಚಾಮುಂಡಿಪುರಂ ನಿವಾಸಿ ಎಂ.ಕೆ.ರಮೇಶ್ ಎಂಬುವರು ಮಹಾವೀರ್ ಡಿಸ್ಟ್ರಿಬ್ಯೂಟರ್ಸ್‌ನಿಂದ 2022ರ ಮಾರ್ಚ್ 7 ರಂದು ಒನಿಡಾ ಕಂಪನಿಯ 32 ಇಂಚು ಟಿವಿ ಖರೀದಿಸಿದ್ದರು. ಆದರೆ ಒಂದು ವಾರದ ನಂತರ ಟಿವಿ ರಿ–ಬೂಟ್ ಆಗುತ್ತಿತ್ತು. ಇದರಿಂದಾಗಿ ಅವರಿಗೆ ಟಿವಿ ವೀಕ್ಷಿಸಲು ಸಾಧ್ಯವಾಗುತ್ತಿರಲಿಲ್ಲ. ಒನಿಡಾ ಕಂಪನಿಯ ಕಸ್ಟಮರ್ ಕೇರ್‌ಗೆ ಅವರು ದೂರು ಸಲ್ಲಿಸಲಾಗಿ ಹಲವಾರು ಬಾರಿ ಟೆಕ್ನೀಷಿಯನ್‌ಗಳು ಬಂದು ರಿಪೇರಿ ಮಾಡಿದರೂ ಟಿವಿ ಸರಿಯಾಗಲಿಲ್ಲ.

ಆನಂತರ ಅವರು ಒನಿಡಾ ಕಂಪನಿಗೆ ಮೇಲ್ ಮೂಲಕವೂ ಕೂಡ ದೂರು ಸಲ್ಲಿಸಿದರೂ ಪ್ರಯೋಜನವಾಗದ ಕಾರಣ 2023ರ ಜ.13 ರಂದು ಒನಿಡಾ ಕಂಪನಿಗೆ ವಕೀಲರ ಮೂಲಕ ನೋಟಿಸ್ ಕೂಡ ನೀಡಿದ್ದರು. ಅದಕ್ಕೂ ಸ್ಪಂದನೆ ದೊರೆಯದ ಕಾರಣ ಅವರು ಜಿಲ್ಲಾ ಗ್ರಾಹಕರ ವ್ಯಾಜ್ಯಗಳ ಪರಿಹಾರ ಆಯೋಗದಲ್ಲಿ 2023ರ ಏ.5ರಂದು ದಾವೆ ಹೂಡಿದ್ದರು.

ವಿಚಾರಣೆ ನಡೆಸಿದ ಆಯೋಗದ ಅಧ್ಯಕ್ಷೆ ಎ.ಕೆ.ನವೀನ್ ಕುಮಾರಿ, ಸದಸ್ಯರಾದ ಮಾರುತಿ ವಡ್ಡರ್ ಮತ್ತು ಎಂ.ಕೆ. ಲಲಿತ ಅವರು ರಮೇಶ್ ಅವರಿಗೆ ಮಹಾವೀರ್ ಡಿಸ್ಟ್ರಿಬ್ಯೂಟರ್ಸ್ ಮತ್ತು ಒನಿಡಾ ಕಂಪನಿಯವರು ಉತ್ತಮ ಗುಣಮಟ್ಟದ ಟಿವಿ ನೀಡಬೇಕು. ತಪ್ಪಿದಲ್ಲಿ ಟಿವಿ ಮೌಲ್ಯ 18 ಸಾವಿರ ರೂ.ಗಳನ್ನು ಶೇ.12ರಷ್ಟು ಬಡ್ಡಿ ಸಮೇತ ಪಾವತಿಸಬೇಕು. ರಮೇಶ್ ಅವರಿಗೆ ಉಂಟಾದ ಮಾನಸಿಕ ಸಂಕಟಕ್ಕೆ 5 ಸಾವಿರ ರೂ. ಹಾಗೂ ವ್ಯಾಜ್ಯದ ವೆಚ್ಚ ಮೂರು ಸಾವಿರ ರೂ.ಗಳನ್ನು ನೀಡಬೇಕು ಎಂದು ಆದೇಶಿಸಿದ್ದಾರೆ.

3418 ಬುಡಕಟ್ಟು ಕುಟುಂಬಗಳಿಗೆ ಪುನರ್ವಸತಿಗೆ ಆಗ್ರಹ


ಮೈಸೂರು,ಏ.3–ನಾಗರಹೊಳೆ ರಾಷ್ಟ್ರೀಯ ಉದ್ಯಾನವನ ಅರಣ್ಯದಿಂದ ಹೊರ ಹಾಕಲ್ಪಟ್ಟ 3418 ಕುಟುಂಬಗಳಿಗೆ ಹೈಕೋರ್ಟ್ ಆದೇಶದಂತೆ ಪುನರ್ವಸತಿ ಕಲ್ಪಿಸಬೇಕು ಹಾಗೂ ನ್ಯಾಯಾಲಯದ ಆದೇಶ ನಿರ್ಲಕ್ಷಿಸಿದವರ ವಿರುದ್ಧ ಕಾನೂನು ಕ್ರಮ ಕೈಗೊಳ್ಳಬೇಕೆಂದು ಕರ್ನಾಟಕ ರಾಜ್ಯ ಕಾನೂನು ಸೇವೆ ಪ್ರಾಧಿಕಾರದ ಮಾಜಿ ಸದಸ್ಯ ಬಿ.ಎಸ್. ವಿಠ್ಠಲ ಅವರು ಕಾನೂನು ಸೇವೆಗಳ ಪ್ರಾಧಿಕಾರದ ಅಧ್ಯಕ್ಷರಿಗೆ ಪತ್ರ ಬರೆದಿದ್ದಾರೆ.

ನಾಗರಹೊಳೆ ರಾಷ್ಟ್ರೀಯ ಉದ್ಯಾನವನದಿಂದ 3418 ಬುಡಕಟ್ಟು ಕುಟುಂಬದವರನ್ನು ಹೊರ ಹಾಕಲ್ಪಟ್ಟಿತ್ತು. ಇವರಿಗೆ ಪುನರ್ವಸತಿ ಕಲ್ಪಿಸುವಂತೆ 2014ರ ಆ.5ರಂದು ರಾಜ್ಯ ಸರ್ಕಾರಕ್ಕೆ ಹೈಕೋರ್ಟ್ ಕಮಿಟಿ ಶಿಫಾರಸು ಮಾಡಿತ್ತು ಎಂದಿರುವ ಅವರು, ಈ ಸಂಬಂಧ ಸರ್ಕಾರ ಈವರೆಗೆ ಯಾವುದೇ ಕ್ರಮ ಕೈಗೊಳ್ಳದ ಕಾರಣ ಈ ಕುಟುಂಬಗಳಿಗೆ ಜರೂರಾಗಿ ಪುನರ್ವಸತಿ ಕಲ್ಪಿಸಬೇಕು ಹಾಗೂ ಬುಡಕಟ್ಟು ಜನರ ಹಕ್ಕುಗಳನ್ನು ನಿರ್ಲಕ್ಷಿಸಿದವರ ವಿರುದ್ಧ ಕಾನೂನು ಕ್ರಮ ಕೈಗೊಳ್ಳಬೇಕು ಎಂದು ವಿಠ್ಠಲ ಅವರು ತಮ್ಮ ಪತ್ರದಲ್ಲಿ ಮನವಿ ಮಾಡಿದ್ದಾರೆ.

ಪೊಲೀಸ್ ವೈದ್ಯಕೀಯ ತಪಾಸಣಾ ಕೇಂದ್ರ: ಸಾರ್ವಜನಿಕರಿಗೂ ಚಿಕಿತ್ಸೆ

ಮೈಸೂರು, ಏ.3–ಮೈಸೂರು ನಗರ ಪೊಲೀಸ್ ಘಟಕದಲ್ಲಿ ಪೊಲೀಸ್ ಭವನದ ಸಂಯೋಗದೊಂದಿಗೆ ಪೊಲೀಸ್ ಕಲ್ಯಾಣ ಕಾರ್ಯಕ್ರಮದನ್ವಯ ಪೊಲೀಸ್ ಅಧಿಕಾರಿ ಮತ್ತು ಸಿಬ್ಬಂದಿಗಳ ಉಪಯೋಗಕ್ಕಾಗಿ ಜಲಪುರಿಯಲ್ಲಿ ನೂತನವಾಗಿ ನಿರ್ಮಿಸಿರುವ ಪೊಲೀಸ್ ವೈದ್ಯಕೀಯ ತಪಾಸಣಾ ಕೇಂದ್ರದಲ್ಲಿ ಸರ್ಕಾರಿ ಆಸ್ಪತ್ರೆಯಲ್ಲಿ ನಿಗದಿಪಡಿಸುವ ದರವನ್ನು ನೀಡಿ ಪೊಲೀಸ್ ಕುಟುಂಬದವರಲ್ಲದೆ ಸಾರ್ವಜನಿಕರು ಸಹ ವೈದ್ಯಕೀಯ ಸೌಲಭ್ಯವನ್ನು ಪಡೆದುಕೊಳ್ಳಬಹುದಾಗಿದೆ ಎಂದು ಮೈಸೂರು ನಗರದ ಪೊಲೀಸ್ ವೆಲ್‌ಫೇರ್ ಟ್ರಸ್ಟ್ ಸಭೆಯು ತೀರ್ಮಾನಿಸಲಾಗಿದೆ ಎಂದು ಪೊಲೀಸ್ ಆಯುಕ್ತರ ಕಚೇರಿಯ ಸಾರ್ವಜನಿಕ ಸಂಪರ್ಕಾಧಿಕಾರಿಗಳು ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

Printed by T.S. Gopinath, Published by M. Govinde Gowda on behalf of Academy Newspapers Private Limited, 15-C Industrial 'A' Layout, Bannimantap, Mysore-570 015 and Printed at Academy News papers Private Limited, 15-C Industrial 'A' Layout, Bannimantap, Mysore-570 015 and Published at 15-C Industrial 'A' Layout, Bannimantap, Mysore-570 015, Editor: M. Govinde Gowda Ph: 2496520 / 2496521 / 2496526 / 2496527 / 2496528. Fax: 0821-2496525. CITY OFFICES: Visveswaraya Building, III Floor, K.R. CIRCLE, MYSORE-570 001, Ph: 2431774 and No. 114, D. DEVARAJ URS ROAD (Opposite Big Bus), MYSORE-570 001. Ph: 2428695. RNI Reg. No. 36581 / 1980 E-mail address: news@mysurumithra.com For advertisements: ad@mysurumithra.com, website: www.mysurumithra.com



ಸುತ್ತೂರು ಶ್ರೀಗಳ ಆಶೀರ್ವಾದ ಪಡೆದ ಸಿಎಂ ಸಿದ್ದರಾಮಯ್ಯ



ಮೈಸೂರಿನ ಚಾಮುಂಡಿಬೆಟ್ಟದ ತಪ್ಪಲಿನ ಸುತ್ತೂರು ಶಾಖಾ ಮಠಕ್ಕೆ ಬುಧವಾರ ಭೇಟಿ ನೀಡಿದ್ದ ಮುಖ್ಯಮಂತ್ರಿ ಸಿದ್ದರಾಮಯ್ಯ ಸುತ್ತೂರು ಶ್ರೀ ಶಿವರಾತ್ರಿ ದೇಶಿಕೇಂದ್ರ ಸ್ವಾಮೀಜಿ ಆಶೀರ್ವಾದ ಪಡೆದರು. ಮೈಸೂರು-ಕೊಡಗು ಲೋಕಸಭಾ ಕ್ಷೇತ್ರದ ಕಾಂಗ್ರೆಸ್ ಅಭ್ಯರ್ಥಿ ಎಂ.ಲಕ್ಷ್ಮಣ ಇನ್ನಿತರರನ್ನು ಚಿತ್ರದಲ್ಲಿ ಕಾಣಬಹುದು.

ಮೈಸೂರು, ಏ.3(ಬಿಎಲ್‌ಯು)- ಮುಖ್ಯಮಂತ್ರಿ ಸಿದ್ದರಾಮಯ್ಯ ಇಂದು ಮೈಸೂರಿನ ಚಾಮುಂಡಿಬೆಟ್ಟದ ತಪ್ಪಲಿನ ಸುತ್ತೂರು ಶಾಖಾ ಮಠಕ್ಕೆ ಭೇಟಿ ನೀಡಿ ಸುತ್ತೂರು ಶ್ರೀ ಶಿವರಾತ್ರಿ ದೇಶಿಕೇಂದ್ರ ಸ್ವಾಮೀಜಿ ಆಶೀರ್ವಾದ ಪಡೆದರು.

ಶಾಸಕ ಹರೀಶ್‌ಗೌಡ, ಮೈಸೂರು-ಕೊಡಗು ಲೋಕಸಭಾ ಕ್ಷೇತ್ರದ ಕಾಂಗ್ರೆಸ್ ಅಭ್ಯರ್ಥಿ ಎಂ.ಲಕ್ಷ್ಮಣ, ಮಾಜಿ ಶಾಸಕ ಎಂ.ಕೆ.ಸೋಮಶೇಖರ್ ಸೇರಿದಂತೆ ಹಲವು ಮುಖಂಡರು ಈ ಸಂದರ್ಭದಲ್ಲಿ ಉಪಸ್ಥಿತರಿದ್ದರು. ಸುತ್ತೂರು ಶ್ರೀಗಳ ಆಶೀರ್ವಾದ ಪಡೆದ ನಂತರ ಸಿದ್ದರಾಮಯ್ಯ ಸುಮಾರು 45 ನಿಮಿಷಗಳ ಕಾಲ ರಹಸ್ಯ ಮಾತುಕತೆ ನಡೆಸಿದರು. ಲಕ್ಷ್ಮಣ ಹೊರತುಪಡಿಸಿ ಯಾರಿಗೂ ಪ್ರವೇಶ ಇರಲಿಲ್ಲ.

ಬಿಜೆಪಿ ಸೋಲಿಸಲು 'ದೇಶ ಉಳಿಸಿ ಸಂಕಲ್ಪ ಯಾತ್ರೆ'

ಮೈಸೂರು,ಏ.3(ಜಿಎ)-ಈ ಬಾರಿಯ ಲೋಕಸಭಾ ಚುನಾವಣೆಯಲ್ಲಿ ಸಂವಿಧಾನ ವಿರೋಧಿ, ಕೋಮು ಭಾವನೆ ಕೆರಳಿಸುತ್ತಿರುವ ಸುಲಿಗೆಕೋರ ಬಿಜೆಪಿಯನ್ನು ಸೋಲಿಸುವ ನಿಟ್ಟಿನಲ್ಲಿ ಏ.1ರಿಂದ 'ದೇಶ ಉಳಿಸಿ ಸಂಕಲ್ಪ ಯಾತ್ರೆ' ಜನಾಂದೋಲನ ಹಮ್ಮಿಕೊಂಡಿದ್ದು, ಇಂದು ಯಾತ್ರೆ ಮೈಸೂರು ತಲುಪಿದೆ.

ಮೈಸೂರು ತಲುಪಿದ ಯಾತ್ರೆ, ಜನರಲ್ಲಿ ಜಾಗೃತಿ ಮೂಡಿಸುವ ಕಾರ್ಯಕ್ರಮ

ದೇಶ ಉಳಿಸಿ ಸಂಕಲ್ಪ ಯಾತ್ರೆಯ ಸಂಯೋಜಕ ಆರ್.ನಾಗೇಶ್ ಅರಳಕುಪ್ಪೆ ಮೈಸೂರು ಜಿಲ್ಲಾ ಪತ್ರಕರ್ತರ ಭವನದಲ್ಲಿ ಸುದ್ದಿಗೋಷ್ಠಿಯಲ್ಲಿ ಈ ವಿಷಯ ತಿಳಿಸಿ, ಯಾತ್ರೆಯು ಮೂರು ಮಾರ್ಗಗಳಲ್ಲಿ ರಾಜ್ಯ ವ್ಯಾಪಿ ಸಂಚರಿಸುತ್ತಿದೆ. ಅದರಲ್ಲಿ ಒಂದು ಈಗ ಮೈಸೂರು ನಗರಕ್ಕೆ ಆಗಮಿಸಿದ್ದು, ಇಲ್ಲಿ ಸಮಾನಮನಸ್ಕರ ಸಭೆ ನಡೆಸಿ ಬಳಿಕ ಮಡಿಕೇರಿ ಮೊದಲಾದ ಮಾರ್ಗಗಳಲ್ಲಿ ತೆರಳಿ ಏ.8ರಂದು ಮಧ್ಯಾಹ್ನ 3 ಗಂಟೆಗೆ ಬೆಳಗಾವಿಯ ಮಹಾತ್ಮ ಗಾಂಧಿ ಸಭಾಂಗಣದಲ್ಲಿ ಸಮಾರೋಪಗೊಳ್ಳಲಿದೆ ಎಂದರು.

ಆಳುವ ಪಕ್ಷವನ್ನು ನಾವು ವಿರೋಧಿಸುತ್ತಿದ್ದೇವೆ ಎಂದ ಮಾತ್ರಕ್ಕೆ ವಿರೋಧ ಪಕ್ಷವನ್ನು ಕೊಂಡಾಡುತ್ತಿದ್ದೇವೆ ಎಂದಲ್ಲ. ಅದರ ವಿರುದ್ಧವೂ ಹೋರಾಡುತ್ತ ಬಂದಿದ್ದೇವೆ. ಆದರೆ ದೇಶದ ಜನರಿಗೆ ವಿಶ್ವಾಸ ದ್ರೋಹ ಬಗೆಯುತ್ತಿರುವ ಬಿಜೆಪಿಯನ್ನು ಸೋಲಿಸಬೇಕು. ಯಾರೇ ಅಧಿಕಾರಕ್ಕೆ ಬಂದರೂ ಅವರ ಜೊತೆ ಜನಹಿತದ ಜಾರಿಗಾಗಿ ಎಡೆಬಿಡದೇ ಹೋರಾಟ ನಡೆಸಬೇಕು ಎಂಬುದು ನಮ್ಮ ಸ್ಪಷ್ಟ ನಿಲುವಾಗಿದೆ ಎಂದು ತಿಳಿಸಿದರು.

ಅಧಿಕಾರಕ್ಕೆ ಬರಲು ಬೇಕಾದ ಯಾವುದೇ ಸಾಧನೆ ಬಿಜೆಪಿ ಮಾಡಿಲ್ಲ. ಜೊತೆಗೆ, ಜಾತಿ ಜಾತಿಗಳ ನಡುವೆ ಬೆಂಕಿ ಹಚ್ಚುವ, ಧರ್ಮ ಧರ್ಮಗಳ ನಡುವೆ ದ್ವೇಷ ಬೆಳೆಸುವ, ದೇಶವನ್ನು ಭಾವೋದ್ರೇಕಗೊಳಿಸಿ ಮತ ಕಬಳಿಸುವ ತಂತ್ರಗಾರಿಕೆ ಮಾರ್ಗಗಳನ್ನು ಬಿಜೆಪಿ ಮಾಡುತ್ತಿದೆ. ಹೀಗಾಗಿ ಜನರನ್ನು ಜಾಗೃತಗೊಳಿಸುವ ನಿಟ್ಟಿನಲ್ಲಿ ಎಲ್ಲಾ ಜನಪರ ಶಕ್ತಿಗಳನ್ನು ಬೆಸೆದು ಬರಲಿರುವ ಚುನಾವಣೆ ಎದುರಿಸಬೇಕಾಗಿದೆ ಎಂದು ತಿಳಿಸಿದರು.

ಸುದ್ದಿಗೋಷ್ಠಿಯಲ್ಲಿ ಡಾ. ರಮೇಶ್ ಬೆಲ್ಲಂಕೊಂಡ, ಆಲಗೂಡು ಶಿವಕುಮಾರ್, ಕೆ.ವಿ.ಭಟ್, ಎಂ.ಎನ್. ಮಕುಂದರಾಜ್, ಹೊಸೂರು ಕುಮಾರ್, ಅಸಾದುಲ್ಲಾ ಉಪಸ್ಥಿತರಿದ್ದರು.

ಎನ್‌ಡಿಎ ಅಭ್ಯರ್ಥಿಗಳ ಗೆಲುವಿಗೆ ಚಾಮುಂಡಿ ಮೊರೆ!




ಮೈಸೂರು,ಏ.3-2024ರ ಲೋಕಸಭಾ ಚುನಾವಣೆ ಹಿನ್ನೆಲೆಯಲ್ಲಿ ಪ್ರಧಾನಮಂತ್ರಿ ನರೇಂದ್ರ ಮೋದಿ ನೇತೃತ್ವದ ಎನ್‌ಡಿಎ ಅಭ್ಯರ್ಥಿಗಳ ಗೆಲುವಿಗಾಗಿ ರಾಜ್ಯ ಬಿಜೆಪಿ ಮಹಿಳಾ ಮುಖಂಡರಾದ ಡಾ.ಶಾಂತ ಸುರೇಂದ್ರ, ಪ್ರೇಮಾ ನಂದಿನಿ, ಸೀತಾ ಲಕ್ಷ್ಮಿ, ಶೋಭಾರಾಣಿ, ಪ್ರೇಮ, ಸುರೇಶ್, ಮಂಜುಳ, ಶಿವರಾಂ, ನಳಿನಿ, ವೆಂಕಟಮ್ಮ, ಭಾಗ್ಯಮ್ಮ ಲೋಕೇಶ್, ನೇಹ, ಪುಷ್ಪಾವತಿ, ಭಾಗ್ಯಮ್ಮ, ಬಿ.ಭಾಗ್ಯವತಿ, ಮಂಜುಳ, ಸುಜಾತ, ಕಲಾ ಲೋಕೇಶ್ ಸೇರಿದಂತೆ ಇತರೆ ಮಹಿಳೆಯರು ಕಾಲ್ನಡಿಗೆ ಮೂಲಕ ಚಾಮುಂಡಿಬೆಟ್ಟ ಹತ್ತಿ, ದೇವಿಗೆ ವಿಶೇಷ ಪೂಜೆ ಸಲ್ಲಿಸಿದರು.

ಶಿವಮೊಗ್ಗ ಹಾಗೂ ರಾಜ್ಯದ ಇತರೆ ಜಿಲ್ಲೆಗಳಿಂದ ಆಗಮಿಸಿದ್ದ ಬಿಜೆಪಿ ಮಹಿಳಾ ಕಾರ್ಯಕರ್ತರನ್ನು ಮೈಸೂರು ಬಿಜೆಪಿ ಮುಖಂಡ ಜಯಪ್ರಕಾಶ್ (ಜೆಪಿ) ಹಾಗೂ ಇತರರು ಚಾಮುಂಡಿ ಬೆಟ್ಟದ ಪಾದದ ಬಳಿ ತೆರಳಿ ಅಭಿನಂದಿಸಿದರು. ಎನ್‌ಡಿಎ ಅಭ್ಯರ್ಥಿಗಳ ಗೆಲುವಿಗಾಗಿ ಮಹಿಳಾ ಕಾರ್ಯಕರ್ತರಿಗೆ ಅಭಿನಂದನೆ ಸಲ್ಲಿಸುವ ವೇಳೆ ಮೈಸೂರಿನ ವಿಷ್ಣು ಸಂಜಯ್, ಮಹೇಶ್‌ಗೌಡ ಇತರರಿದ್ದರು.

ಜಿಲ್ಲಾ ಸ್ವೀಪ್ ಸಮಿತಿ ವತಿಯಿಂದ ರೀಲ್ಸ್, ವಿಡಿಯೋ ಸ್ಪರ್ಧೆ

ಮೈಸೂರು, ಏ.3-ಲೋಕಸಭಾ ಸಾರ್ವತ್ರಿಕ ಚುನಾವಣೆ 2024ರ ಅಂಗವಾಗಿ ಮತದಾರರಲ್ಲಿ ಮತದಾನ ಜಾಗೃತಿ ಮೂಡಿಸುವ ಸಲುವಾಗಿ ಹಾಗೂ ಎಲ್ಲರೂ ಚುನಾವಣೆಯ ಹಬ್ಬದಲ್ಲಿ ಭಾಗಿದಾರರಾಗಲು ಪ್ರೋತ್ಸಾಹಿಸುವ ಸಲುವಾಗಿ ಜಿಲ್ಲಾ ಸ್ವೀಪ್ ಸಮಿತಿಯಿಂದ ರೀಲ್ಸ್ ಹಾಗೂ ವಿಡಿಯೋ ಮಾಡುವ ಸ್ಪರ್ಧೆಗಳನ್ನು ಏರ್ಪಡಿಸಲಾಗಿದೆ. ಆಸಕ್ತ ಸಾರ್ವಜನಿಕರು ಮತದಾನದ ಮಹತ್ವ, ಪ್ರತಿ ವೋಟಿನ ಮೌಲ್ಯ, ನೈತಿಕ ಮತದಾನ ಮತ್ತು ಎಲ್ಲಾ ವರ್ಗಗಳ ಪಾಲ್ಗೊಳ್ಳುವಿಕೆಯನ್ನು ಪ್ರತಿಬಿಂಬಿಸುವ (ಪಕ್ಷಾತೀತವಾಗಿ ಯಾವುದೇ ರಾಜಕೀಯ ವ್ಯಕ್ತಿ ಹೋಲಿಕೆ ಇಲ್ಲದಂತೆ) ಕುರಿತಾಗಿ ಗರಿಷ್ಠ ಎರಡು ನಿಮಿಷ ಅವಧಿಯ ರೀಲ್ಸ್ ಹಾಗೂ ವಿಡಿಯೋಗಳನ್ನು ತಯಾರಿಸಿ sveepmysuru2018@gmail.com ಈ ಇ-ಮೇಲ್ ವಿಳಾಸಕ್ಕೆ ಏ.10ರೊಳಗೆ ಕಳುಹಿಸಿಕೊಡಬಹುದಾಗಿದೆ. ಉತ್ತಮ ಸಂದೇಶವುಳ್ಳ ಮೂರು ಆಯ್ಕೆಗಳಿಗೆ ಸೂಕ್ತ ಬಹುಮಾನ ನೀಡಿ ಪ್ರೋತ್ಸಾಹಿಸಲಾಗುವುದು ಎಂದು ಜಿಲ್ಲಾ ಪಂಚಾಯತ್‌ನ ಮುಖ್ಯಕಾರ್ಯನಿರ್ವಾಹಕ ಅಧಿಕಾರಿ ಹಾಗೂ ಜಿಲ್ಲಾ ಸ್ವೀಪ್ ಸಮಿತಿ ಅಧ್ಯಕ್ಷೆ ಕೆ.ಎಂ.ಗಾಯತ್ರಿ ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

ಮೈಸೂರಿನ ಹನ್ನೆರಡು ಮಹನೀಯರ ಪ್ರತಿಮೆಗಳಿಗೆ ಯದುವೀರ್ ಮಾಲಾರ್ಪಣೆ









ಮೈಸೂರು,ಏ.3(ಆರ್‌ಕೆ)- ಇಂದು ನಾಮಪತ್ರ ಸಲ್ಲಿಸುವ ಮೊದಲು ಮೈಸೂರು-ಕೊಡಗು ಲೋಕಸಭಾ ಕ್ಷೇತ್ರದ ಬಿಜೆಪಿ ಅಭ್ಯರ್ಥಿ ಯದುವೀರ ಕೃಷ್ಣದತ್ತ ಚಾಮರಾಜ ಒಡೆಯರ್ ಮೈಸೂರು ಆಳಿದ ರಾಜರು ಹಾಗೂ ಮಹನೀಯರ 12 ಪ್ರತಿಮೆಗಳಿಗೆ ಮಾಲಾರ್ಪಣೆ ಮಾಡಿದರು.

ನಗರ ಬಿಜೆಪಿ ಅಧ್ಯಕ್ಷ, ಎಲ್.ನಾಗೇಂದ್ರ, ಜಿಲ್ಲಾಧ್ಯಕ್ಷ ಎಲ್.ಆರ್.ಮಹದೇವಸ್ವಾಮಿ, ಶಾಸಕ ಟಿ.ಎಸ್.ಶ್ರೀವತ್ಸ, ಮಾಜಿ ಶಾಸಕ ಎಸ್.ಎ.ರಾಮದಾಸ್, ಮುಖಂಡರಾದ ರಘು ಕೌಟಿಲ್ಯ ಇತರರೊಂದಿಗೆ ಕೆಆರ್ ಸರ್ಕಲ್‌ನ ಕೃಷ್ಣರಾಜ ಒಡೆಯರ್, ಚಾಮರಾಜ ಸರ್ಕಲ್‌ನ ಚಾಮರಾಜ ಒಡೆಯರ್, ಜಯಚಾಮರಾಜ ಒಡೆಯರ್ ಪ್ರತಿಮೆ, ಬಸವೇಶ್ವರ ವೃತ್ತದ ಶ್ರೀ ಬಸವೇಶ್ವರ ಪ್ರತಿಮೆ, ಕುವೆಂಪು ಪ್ರತಿಮೆ, ಲಲಿತಮಹಲ್ ರಸ್ತೆಯ ಸಂಗೊಳ್ಳಿ ರಾಯಣ್ಣ ಪ್ರತಿಮೆ, ಪುರಭವನ ಆವರಣದ ಡಾ.ಬಿಆರ್.ಅಂಬೇಡ್ಕರ್ ಪ್ರತಿಮೆ, ಗಾಂಧಿ ಸ್ಕ್ವೇರ್‌ನ ಮಹಾತ್ಮ ಗಾಂಧಿ ಪ್ರತಿಮೆ, ಡಾ.ರಾಜಕುಮಾರ್ ಉದ್ಯಾನವನದಲ್ಲಿ ಡಾ.ರಾಜ್‌ಕುಮಾರ್ ಪ್ರತಿಮೆ, ಫೀಲ್ಡ್ ಮಾರ್ಷಲ್ ಕೆ.ಎಂ. ಕಾರ್ಯಪ್ಪ ಪ್ರತಿಮೆ ಸೇರಿದಂತೆ ಸದಾ ಸ್ಮರಣೀಯರಾದ ಮಹನೀಯರುಗಳ ಪ್ರತಿಮೆಗಳಿಗೆ ಮಾಲಾರ್ಪಣೆ ಮಾಡಿದ ಯದುವೀರ್ ಅವರು ಗೌರವ ಸಮರ್ಪಿಸಿದರು. ನಂತರ ಅವರು ಅರಮನೆ ಉತ್ತರ ದ್ವಾರದ ಶ್ರೀ ಕೋಟೆ ಆಂಜನೇಯ ಸ್ವಾಮಿ, ಗಣಪತಿ ದೇವಸ್ಥಾನದಲ್ಲಿ ವಿಶೇಷ ಪೂಜೆ ಸಲ್ಲಿಸಿದ ಬಳಿಕ ಬಿಜೆಪಿ ಮತ್ತು ಜೆಡಿಎಸ್ ಮುಖಂಡರು, ಕಾರ್ಯಕರ್ತರೊಂದಿಗೆ ಮೆರವಣಿಗೆಯಲ್ಲಿ ಜಿಲ್ಲಾಧಿಕಾರಿ ಕಚೇರಿಗೆ ತೆರಳಿ ಜಿಲ್ಲಾ ಚುನಾವಣಾಧಿಕಾರಿ ಡಾ.ಕೆ.ವಿ.ರಾಜೇಂದ್ರ ಅವರಿಗೆ ತಮ್ಮ ಎರಡನೇ ಸೆಟ್ ನಾಮಪತ್ರ ಸಲ್ಲಿಸಿದರು. ಈ ಸಂದರ್ಭದಲ್ಲಿ ಡಿಸಿಪಿ ಎಂ.ಮುತ್ತುರಾಜ್ ನೇತೃತ್ವದಲ್ಲಿ ಮೆರವಣಿಗೆಗೆ ಭಾರಿ ಬಿಗಿ ಪೊಲೀಸ್ ಬಂದೋಬಸ್ತ್ ವ್ಯವಸ್ಥೆ ಮಾಡಲಾಗಿತ್ತು.

2023-24ನೇ ಆರ್ಥಿಕ ವರ್ಷದಲ್ಲಿ ಪರೋಕ್ಷ ತೆರಿಗೆ ಸಂಗ್ರಹ ಏರಿಕೆ



ನವದೆಹಲಿ: 2023-24ನೇ ಆರ್ಥಿಕ ವರ್ಷದಲ್ಲಿ 14.84 ಲಕ್ಷ ಕೋಟಿ ಪರೋಕ್ಷ ತೆರಿಗೆ ಸಂಗ್ರಹಕ್ಕೆ ಪರಿಷ್ಕೃತ ಗುರಿ ನಿಗದಿಯಾಗಿತ್ತು. ಇದಕ್ಕಿಂತಲೂ ಹೆಚ್ಚು ತೆರಿಗೆ ಸಂಗ್ರಹವಾಗಿದೆ ಎಂದು ಕೇಂದ್ರ ಪರೋಕ್ಷ ತೆರಿಗೆಗಳು ಮತ್ತು ಕಸ್ಟಮ್ಸ್ ಮಂಡಳಿ (ಸಿಬಿಐಸಿ) ತಿಳಿಸಿದೆ.

ಸೇವಾ ಹಾಗೂ ಅಬಕಾರಿ ಸುಂಕ ಒಳಗೊಂಡ ಪರೋಕ್ಷ ತೆರಿಗೆ ಸಂಗ್ರಹದಲ್ಲಿ ಏರಿಕೆಯಾಗಿದೆ ಎಂದು ಸಿಬಿಐಸಿ ಅಧ್ಯಕ್ಷ ಸಂಜಯ್ ಕುಮಾರ್ ಅಗರ್ವಾಲ್ ಅವರು, ಕ್ಷೇತ್ರ ಅಧಿಕಾರಿಗಳಿಗೆ ಬರೆದಿರುವ ಪತ್ರದಲ್ಲಿ ಮಾಹಿತಿ ನೀಡಿದ್ದಾರೆ.

ಈ ಗುರಿ ಸಾಧನೆಯು ವೃತ್ತಿಪರತೆಯನ್ನಷ್ಟೇ ಪ್ರತಿಬಿಂಬಿಸುವುದಿಲ್ಲ. ಮಂಡಳಿಯ ಸಾಂಘಿಕ ಕೆಲಸಕ್ಕೆ ಕನ್ನಡಿ ಹಿಡಿದಿದೆ. ನಿಮ್ಮ ಈ ಅಮೂಲ್ಯ ಕೊಡುಗೆಗೆ ಆಭಾರಿಯಾಗಿದ್ದೇನೆ ಎಂದು ತಿಳಿಸಿದ್ದಾರೆ.

20.18 ಲಕ್ಷ ಕೋಟಿ ಜಿಎಸ್‌ಟಿ ಸಂಗ್ರಹ: 2023-24ನೇ ಆರ್ಥಿಕ ವರ್ಷದಲ್ಲಿ 20.18 ಲಕ್ಷ ಕೋಟಿ ಜಿಎಸ್‌ಟಿ ಸಂಗ್ರಹವಾಗಿದ್ದು, ಇದು ಹೊಸ ಮೈಲಿಗಲ್ಲಾಗಿದೆ. ಕಳೆದ ವರ್ಷಕ್ಕೆ ಹೋಲಿಸಿದರೆ ಶೇ 11.7ರಷ್ಟು ಏರಿಕೆಯಾಗಿದೆ ಎಂದು ತಿಳಿಸಿದ್ದಾರೆ.

ಪರಿಷ್ಕೃತ ಕೇಂದ್ರ ಜಿಎಸ್‌ಟಿಯಲ್ಲಿ ಪರಿಹಾರ ಸೆಸ್ 9.57 ಲಕ್ಷ ಕೋಟಿ, ಅಬಕಾರಿ ತೆರಿಗೆ 3.08 ಲಕ್ಷ ಕೋಟಿ ಹಾಗೂ ಕಸ್ಟಮ್ಸ್ ಸುಂಕ 2.19 ಲಕ್ಷ ಕೋಟಿ ಇದೆ ಎಂದು ವಿವರಿಸಿದ್ದಾರೆ.



ಮೈಸೂರಿನ ದೇವರಾಜ ಮೊಹಲ್ಲಾ ಗಂಗಮ್ಮ ಚಾಮುಂಡೇಶ್ವರಿ ಜಾತ್ರಾ ಮಹೋತ್ಸವದಲ್ಲಿ ಭಾಗವಹಿಸಿದ ಬಿಜೆಪಿ ಅಭ್ಯರ್ಥಿ ಯದುವೀರ್ ಕೃಷ್ಣದತ್ತ ಒಡೆಯರ್, ಮಾಜಿ ಶಾಸಕ ನಾಗೇಂದ್ರ ಅವರನ್ನು ನಗರಪಾಲಿಕೆ ಮಾಜಿ ಸದಸ್ಯ ಪ್ರಶಾಂತ್‌ಗೌಡ ಗೌರವಿಸಿದರು. ಈ ವೇಳೆ ನಗರ ಪಾಲಿಕೆ ಮಾಜಿ ಸದಸ್ಯೆ ಪ್ರಮೀಳಾ ಭರತ್, ಮುಖಂಡರಾದ ಹರ್ಷ, ಗೋಪಿನಾಥ್ ಮತ್ತು ಮೊಹಲ್ಲಾದ ಮುಖಂಡರು ಉಪಸ್ಥಿತರಿದ್ದರು.



ಮೈಸೂರಿನ ಜೆ.ಪಿ.ನಗರದ ನವೋದಯ ಬಡಾವಣೆಯಲ್ಲಿ ಮೈಸೂರು-ಕೊಡಗು ಲೋಕಸಭಾ ಕ್ಷೇತ್ರದ ಕಾಂಗ್ರೆಸ್ ಅಭ್ಯರ್ಥಿ ಎಂ.ಲಕ್ಷ್ಮಣ್ ಪರವಾಗಿ ಮನೆಮನೆಗೆ ತೆರಳಿ ಮತಯಾಚನೆ ಮಾಡಲಾಯಿತು. ಈ ವೇಳೆ ಮಾಜಿ ಶಾಸಕ ಎಂಕೆ.ಸೋಮಶೇಖರ್, ಮುಡಾ ಮಾಜಿ ಅಧ್ಯಕ್ಷ ಹೆಚ್.ವಿ.ರಾಜೀವ್, ಮಾಜಿ ಮಹಾಪೌರರಾದ ನಾರಾಯಣ್, ಬಿ.ಎಲ್.ಭೈರಪ್ಪ, ಕಾಂಗ್ರೆಸ್ ಮುಖಂಡರಾದ ಪ್ರದೀಪ್‌ಕುಮಾರ್, ದೇವರಾಜು ಅರಸು ಬ್ಲಾಕ್ ಕಾಂಗ್ರೆಸ್ ಅಧ್ಯಕ್ಷ ಶ್ರೀಧರ್, ಜಗನ್ನಾಥ್ ಭೋವಿ, ಮಹೇಂದ್ರ, ಆರ್.ದಾಸ್, ನಾಗರಾಜು, ರಾಮಪ್ರಸಾದ್, ಸುಂದರ್, ಕೇಬಲ್ ಶೇಖರ್, ಡೈರಿ ವೆಂಕಟೇಶ್, ವಾಸು, ಮೈಸೂರು ಬಸವಣ್ಣ, ನಿವೃತ್ತ ಕಂದಾಯಾಧಿಕಾರಿ ಕೆ.ಪೆಂಚಾಲಯ್ಯ, ವೆಂಕಟೇಶ್, ನಾಗರತ್ನ ಮಂಜುನಾಥ್, ಚಾಮುಂಡಯ್ಯ ರಂಜನ್, ರಾಮಚಂದ್ರ ಉಪಸ್ಥಿತರಿದ್ದರು.

ನಾಲ್ವರು ಅಭ್ಯರ್ಥಿಗಳಿಂದ ನಾಮಪತ್ರ ಸಲ್ಲಿಕೆ



ಕ್ರಿಸ್ಟೋಫರ್ ರಾಜಕುಮಾರ್



ಹರೀಶ್.ಎನ್

ಮೈಸೂರು,ಏ.3-ಮೈಸೂರು-ಕೊಡಗು ಲೋಕಸಭಾ ಸಾರ್ವತ್ರಿಕ ಚುನಾವಣೆಯಲ್ಲಿ ಬುಧವಾರ 4 ಅಭ್ಯರ್ಥಿಗಳಿಂದ ನಾಮಪತ್ರ ಸಲ್ಲಿಕೆಯಾಗಿದೆ.

ಸೋಷಿಯಲಿಸ್ಟ್ ಪಕ್ಷದ ಅಭ್ಯರ್ಥಿಯಾಗಿ ಹರೀಶ್.ಎನ್, ಭಾರತೀಯ ಜನತಾ ಪಕ್ಷದ ಅಭ್ಯರ್ಥಿಯಾಗಿ ಯದುವೀರ್ ಕೃಷ್ಣದತ್ತ ಚಾಮರಾಜ ಒಡೆಯರ್, ಭಾರತೀಯ ರಾಷ್ಟ್ರೀಯ ಕಾಂಗ್ರೆಸ್ ಪಕ್ಷದ ಅಭ್ಯರ್ಥಿಯಾಗಿ ಎಂ.ಲಕ್ಷ್ಮಣ್ ಹಾಗೂ ಪಕ್ಷೇತರ ಅಭ್ಯರ್ಥಿಯಾಗಿ ಕ್ರಿಸ್ಟೋಫರ್ ರಾಜಕುಮಾರ್ ತಮ್ಮ ನಾಮಪತ್ರ ಸಲ್ಲಿಸಿದ್ದಾರೆ.

ಮೈಸೂರಲ್ಲಿ 47 ವರ್ಷದ ನಂತರ ಒಕ್ಕಲಿಗ ಸಮುದಾಯಕ್ಕೆ ಕಾಂಗ್ರೆಸ್ ಟಿಕೆಟ್ ಸಿಕ್ಕಿದೆ: ಡಿಕೆಶಿ

● 24 ಗಂಟೆಯೂ ಸಿದ್ಧ'ರಾಮ'ಯ್ಯರ ಲಕ್ಷ್ಮಣ ಸೇವೆಗೆ ಲಭ್ಯವಿದ್ದಾರೆ ● ಯಾವುದೇ ತಾರತಮ್ಯ ಮಾಡದೇ ಬರೀ ಅಭಿವೃದ್ಧಿ ಮಂತ್ರ: ಲಕ್ಷ್ಮಣ



ಮೈಸೂರು, ಏ.3(ಎಂಟಿವೈ)- ಮೈಸೂರು-ಕೊಡಗು ಲೋಕಸಭಾ ಕ್ಷೇತ್ರದಲ್ಲಿ ಕಾಂಗ್ರೆಸ್, 47 ವರ್ಷದ ನಂತರ ಒಕ್ಕಲಿಗ ಸಮುದಾಯಕ್ಕೆ ಟಿಕೆಟ್ ನೀಡಿ ಎಂ.ಲಕ್ಷ್ಮಣ ಅವರನ್ನು ಕಣಕ್ಕಿಳಿಸಿದ್ದು, ದಿನದ 24 ಗಂಟೆಯೂ ಜನರ ಸೇವೆಗೆ ಲಭ್ಯವಿರುವ ಇವರನ್ನು ಗೆಲ್ಲಿಸುವಂತೆ ಉಪಮುಖ್ಯಮಂತ್ರಿ ಡಿ.ಕೆ.ಶಿವಕುಮಾರ್ ಮನವಿ ಮಾಡಿದ್ದಾರೆ.

ಮೈಸೂರಿನ ಟೆರೆಷಿಯನ್ ಕಾಲೇಜು ಬಳಿ ಕಾಂಗ್ರೆಸ್ ಅಭ್ಯರ್ಥಿ ಎಂ.ಲಕ್ಷ್ಮಣ ಪರ ಪ್ರಚಾರ ಸಭೆಯಲ್ಲಿ ಮಾತನಾಡಿದ ಅವರು, ಮೈಸೂರು ಕ್ಷೇತ್ರದಲ್ಲಿ ಸುದೀರ್ಘ ಅವಧಿಯ ನಂತರ ಕಾಂಗ್ರೆಸ್ ಪಕ್ಷ ಒಕ್ಕಲಿಗ ಸಮುದಾಯದ ಅಭ್ಯರ್ಥಿಯನ್ನು ಕಣಕ್ಕಿಳಿಸಿದೆ. ನಮ್ಮ ಸಮುದಾಯಕ್ಕೆ ಸೇರಿದ ನೀವು ಕೆಪಿಸಿಸಿ ಅಧ್ಯಕ್ಷರಾಗಿದ್ದೀರಿ. ಒಕ್ಕಲಿಗ ಸಮುದಾಯದ ಅಭ್ಯರ್ಥಿಗೆ ಯಾಕೆ ಟಿಕೆಟ್ ಕೊಡುತ್ತಿಲ್ಲ ಎಂದು ಕೇಳುತ್ತಿದ್ದರು. ಸಾಮಾಜಿಕ ಬದ್ಧತೆ ಕಾಂಗ್ರೆಸ್‌ಗೆ ಇದೆ. 47 ವರ್ಷದ ನಂತರ ಲಕ್ಷ್ಮಣ್‌ಗೌಡರನ್ನು ಪಕ್ಷದ ಅಭ್ಯರ್ಥಿಯಾಗಿ ಕಣಕಿಳಿಸಿದ್ದೇವೆ. ಎರಡೂ ಜಿಲ್ಲೆಯ ಜನ ಸಮಸ್ಯೆ ಆಲಿಸಲು ದಿನದ 24 ಗಂಟೆಯೂ ಲಭ್ಯವಿರುವ ಅಭ್ಯರ್ಥಿಯನ್ನು ಕಣಕ್ಕಿಳಿಸಿದ್ದೇವೆ. ಪ್ರಜಾಪ್ರಭುತ್ವ ವ್ಯವಸ್ಥೆಯಲ್ಲಿ ಜನಸೇವೆ ಮಾಡುವವರನ್ನು ಸಮಾಜ ಗುರುತಿಸುತ್ತದೆ. ನಮ್ಮ ಸರ್ಕಾರ ಗ್ಯಾರಂಟಿಯನ್ನು ಜಾರಿಗೊಳಿಸಿದ ನಂತರ ರಾಜ್ಯದೆಲ್ಲೆಡೆ ಮುಖ್ಯಮಂತ್ರಿ ಸಿದ್ದರಾಮಯ್ಯ ಅವರೊಂದಿಗೆ ನಾವು ಪ್ರವಾಸ ಮಾಡಿದ್ದು, ಎಲ್ಲೆಡೆ ಉತ್ತಮ ಪ್ರತಿಕ್ರಿಯೆ ವ್ಯಕ್ತವಾಗಿದೆ. ಹಾಗಾಗಿ ನಮಗೆ ಆತ್ಮಸ್ಥೈರ್ಯ ಹೆಚ್ಚಾಗಿದೆ. ಆದರೆ, ಬಿಜೆಪಿ ನಾಯಕರು ಕೇವಲ ಮೋದಿ ಅಲೆಯಲ್ಲಿ ಗೆಲ್ಲುವುದಾಗಿ ಹೇಳುತ್ತಿದ್ದಾರೆ. ನಾವು ನೀಡಿದ ಭರವಸೆ ಅನುಷ್ಠಾನಗೊಳಿಸಿರುವುದನ್ನು ಜನರ ಮುಂದೆ ಇಟ್ಟು ಮತ ಕೇಳುತ್ತೇವೆ ಎನ್ನಲು ಅವರಿಗೆ ಮುಖವಿಲ್ಲ. ರಾಜ್ಯದಲ್ಲಿ ಮೋದಿ ಅಲೆ ಎಲ್ಲಿದೆ. ಕಂಡಿರುವವರು ಹೇಳಬೇಕು. ಕಳೆದ ವಿಧಾನಸಭಾ ಚುನಾವಣೆಯಲ್ಲಿ ಪ್ರಧಾನಿ ಹಳ್ಳಿ, ಜಿಲ್ಲೆಗಳಿಗೆ ಹೋಗಿದ್ದರು. ಆದರೆ, ಕಾಂಗ್ರೆಸ್‌ಗೆ 136 ಸ್ಥಾನ ಲಭಿಸಿತು. ಇದರಿಂದ ಮೋದಿ ಅಲೆ ಕರ್ನಾಟಕದಲ್ಲಿ ನಡೆಯುವುದಿಲ್ಲ ಎಂಬುದು ಸಾಬೀತಾಗಿದೆ ಎಂದರು.

ಕಮಲ ಕೆರೆಯಲ್ಲಿದ್ದರೆ ಚಂದ, ತೆನೆ ಹೊಲದಲ್ಲಿದ್ದರೆ ಚಂದ, ದಾನ-ಧರ್ಮ ಮಾಡುವ ಕೈ ಅಧಿಕಾರದಲ್ಲಿದ್ದರೆ ಮಾತ್ರ ಚಂದ. ಹಾಗಾಗಿ ಕೈ ಗೆ ರಾಜ್ಯದ ಜನತೆ ಬೆಂಬಲ ನೀಡಿದ್ದರಿಂದ ನಾವು ಕೊಟ್ಟ ಮಾತನ್ನು ಉಳಿಸಿಕೊಂಡಿದ್ದೇವೆ. ಗ್ಯಾರಂಟಿ ಯೋಜನೆಗಳನ್ನು ಜಾರಿಗೊಳಿಸಿದ್ದೇವೆ. ಜನ ಎಚ್ಚೆತ್ತುಕೊಳ್ಳಬೇಕು, ಬಿಜೆಪಿಗರ ಸುಳ್ಳನ್ನು ಬಯಲು ಮಾಡಿ, ಪ್ರಶ್ನಿಸಬೇಕು. ಅಚ್ಛೆ ದಿನ ಎಲ್ಲಿ, ರೈತರ ಬದುಕನ್ನು ಎಲ್ಲಿ ಬದಲಿಸಿದ್ದೀರಿ ಎಂದು ಕೇಳಬೇಕು. ಮೈಸೂರು-ಕೊಡಗು ಲೋಕಸಭಾ ಕ್ಷೇತ್ರದಲ್ಲಿ ಮುಖ್ಯಮಂತ್ರಿ ಸಿದ್ಧರಾಮಯ್ಯ(ಸಿದ್ಧರಾಮಯ್ಯ) ಅವರಿಗೆ ಲಕ್ಷ್ಮಣನಂತೆ ಇದ್ದಾರೆ. ಅವರನ್ನು ಗೆಲ್ಲಿಸುವ ಜವಾಬ್ದಾರಿ ಪಕ್ಷದ ಕಾರ್ಯಕರ್ತರದ್ದು ಎಂದರು.

ನಿಮ್ಮೆಲ್ಲರ ಸೇವೆಗೆ ಸದಾ ಸಿದ್ಧ: ಕಾಂಗ್ರೆಸ್ ಅಭ್ಯರ್ಥಿ ಎಂ.ಲಕ್ಷ್ಮಣ ಮಾತನಾಡಿ, ಸಾಮಾನ್ಯ ಕಾರ್ಯಕರ್ತರಿಗೂ ಬೆಲೆ ನೀಡುವ ಏಕೈಕ ಪಕ್ಷ ಕಾಂಗ್ರೆಸ್. ನಾನೊಬ್ಬ ಸಾಮಾನ್ಯ ಕಾರ್ಯಕರ್ತ. ನನ್ನನ್ನು ಗೆಲ್ಲಿಸಿ ನಿಮ್ಮೆಲ್ಲರ ಸೇವೆಗೆ ನಾನು ಸದಾ ಸಿದ್ಧನಿದ್ದೇನೆ. ಎಐಸಿಸಿ ಅಧ್ಯಕ್ಷ ಮಲ್ಲಿಕಾರ್ಜುನ ಖರ್ಗೆ, ಸೋನಿಯಾ ಗಾಂಧಿ, ರಾಹುಲ್ ಗಾಂಧಿ, ಪ್ರಿಯಾಂಕ ಗಾಂಧಿ, ಮುಖ್ಯಮಂತ್ರಿ ಸಿದ್ದರಾಮಯ್ಯ, ಉಪಮುಖ್ಯಮಂತ್ರಿ ಡಿ.ಕೆ ಶಿವಕುಮಾರ್ ಹಾಗೂ ಮೈಸೂರು-ಕೊಡಗು ಕ್ಷೇತ್ರದ ಎಲ್ಲಾ ಶಾಸಕರುಗಳ ಬೆಂಬಲದಿಂದ ಲೋಕಸಭಾ ಚುನಾವಣೆಗೆ ನನಗೆ ಟಿಕೆಟ್ ದೊರೆತಿದೆ. ವಿಧಾನಪರಿಷತ್ ಚುನಾವಣೆಯಲ್ಲಿ ಎರಡು ಬಾರಿ ಸೋಲನ್ನು ಅನುಭವಿಸಿದ್ದೆ. ಆದರೂ ನನ್ನ ಕಾರ್ಯವನ್ನು ಗುರುತಿಸಿ ಕಾಂಗ್ರೆಸ್ ಪಕ್ಷ ಮತ್ತೊಮ್ಮೆ ಅವಕಾಶ ಮಾಡಿಕೊಟ್ಟಿದೆ. ಹಾಗಾಗಿ ಈ ಬಾರಿ ನನಗೆ ಬೆಂಬಲವನ್ನು ನೀಡಿ ಗೆಲ್ಲಿಸಬೇಕು ಎಂದು ಕೋರಿದರು.

ನಿಮ್ಮ ನಂಬಿಕೆಯನ್ನು ನಾನು ಎಂದಿಗೂ ಹುಸಿ ಮಾಡುವುದಿಲ್ಲ. ದಿನದ 24 ಗಂಟೆ ನಿಮ್ಮ ಸೇವೆ ಮಾಡಲು ಸದಾ ನಿಮ್ಮೊಂದಿಗೆ ಇರುತ್ತೇನೆ. 15 ದಿನಗಳ ಕಾಲ ಮೈಸೂರಿನಲ್ಲಿ ಹಾಗೂ ಮತ್ತೆ 15 ದಿನಗಳ ಕಾಲ ಕೊಡಗಿನಲ್ಲಿ ಇದ್ದುಕೊಂಡು ತಮ್ಮೆಲ್ಲರ ಸೇವೆಯನ್ನು ನಿಷ್ಠೆಯಿಂದ ಮಾಡಲು ಸಿದ್ಧನಿದ್ದೇನೆ. ಮುಖ್ಯಮಂತ್ರಿ ಸಿದ್ದರಾಮಯ್ಯ ಅವರ ನೇತೃತ್ವದ ಸರ್ಕಾರ 2013 ರಿಂದ 2018 ರವರೆಗೆ ಮೈಸೂರಿಗೆ 3.800 ಕೋಟಿ ರೂ.ಅನುದಾನವನ್ನು ನೀಡಿದೆ. ಮಹಾರಾಣಿ ಕಾಲೇಜು, ವಿದ್ಯಾರ್ಥಿ ನಿಲಯ, ಜಯದೇವ ಆಸ್ಪತ್ರೆ, ಕಾಂಕ್ರೀಟ್ ರಸ್ತೆ ಹೀಗೆ ಅನೇಕ ಅಭಿವೃದ್ಧಿ ಕಾರ್ಯಗಳನ್ನು ಮುಖ್ಯಮಂತ್ರಿ ಸಿದ್ದರಾಮಯ್ಯ ಅವರ ನೇತೃತ್ವದ ಕಾಂಗ್ರೆಸ್ ಸರ್ಕಾರ ಮಾಡಿದೆ ಎಂದರು.

ಮೈಸೂರು ಮತ್ತು ಕೊಡಗು ಜಿಲ್ಲೆಯಲ್ಲಿ ಪ್ರವಾಸೋದ್ಯಮ ಬೆಳವಣಿಗೆಗೆ ಉತ್ತಮವಾದ ಅವಕಾಶವಿದೆ. ಆದರೆ ಹಿಂದೆ ಇದ್ದ ಸಂಸದರು ಯಾವುದೇ ಪ್ರಯತ್ನ ಮಾಡಲಿಲ್ಲ. ಈ ಕೆಲಸವನ್ನು ನಾನು ಮಾಡುತ್ತೇನೆ. ಜನರ ಮಧ್ಯೆ, ಧರ್ಮದ ಮಧ್ಯೆ, ಜಾತಿಯ ಮಧ್ಯೆ ಯಾವುದೇ ತಾರತಮ್ಯ ಮಾಡುವುದಿಲ್ಲ. ಎಲ್ಲರನ್ನೂ ವಿಶ್ವಾಸಕ್ಕೆ ತೆಗೆದುಕೊಳ್ಳುತ್ತೇನೆ. ಕಾರ್ಯಕರ್ತರು ಮತ್ತು ಮುಖಂಡರು ಮನೆ ಮನೆಗೆ ಭೇಟಿ ನೀಡಿ ಕಾಂಗ್ರೆಸ್ ಸರ್ಕಾರದ ಅಭಿವೃದ್ಧಿ ಕಾರ್ಯಗಳನ್ನು ಜನಸಾಮಾನ್ಯರಿಗೆ ತಿಳಿಸಿ ಮತ ಹಾಕಿಸುವುದರ ಮೂಲಕ ನನ್ನನ್ನು ಗೆಲ್ಲಿಸಬೇಕು ಎಂದು ಡಿ.ಕೆ.ಶಿವಕುಮಾರ್ ಮನವಿ ಮಾಡಿದರು.

ಮಂಡ್ಯ ಜಿಲ್ಲೆಯ ರಾಜಕೀಯ ಗಣ್ಯರ ಸಮಾಧಿಗೆ ನಮಿಸಿದ ಕುಮಾರಸ್ವಾಮಿ





ಮಂಡ್ಯ ಲೋಕಸಭಾ ಕ್ಷೇತ್ರದ ಜೆಡಿಎಸ್–ಬಿಜೆಪಿ ಮೈತ್ರಿ ಅಭ್ಯರ್ಥಿ ಹೆಚ್‌ಡಿ.ಕುಮಾರಸ್ವಾಮಿ ಅವರು ರೈತ ನಾಯಕ ಕೆ.ಎಸ್.ಪುಟ್ಟಣ್ಣಯ್ಯ ಮತ್ತು ಮಾಜಿ ಶಾಸಕ ಹೆಚ್.ಡಿ.ಚೌಡಯ್ಯ ಅವರ ಸಮಾಧಿಗೆ ಪುಷ್ಪ ನಮನ ಸಲ್ಲಿಸಿದರು.

ಮಂಡ್ಯ,ಏ.3– ಮಂಡ್ಯ ಲೋಕಸಭಾ ಕ್ಷೇತ್ರದ ಜೆಡಿಎಸ್ ಅಭ್ಯರ್ಥಿಯಾದ ಮಾಜಿ ಮುಖ್ಯಮಂತ್ರಿ ಹೆಚ್.ಡಿ.ಕುಮಾರಸ್ವಾಮಿ ಮಂಡ್ಯ ಜಿಲ್ಲೆಯ ರಾಜಕೀಯ ಮುತ್ಸದ್ದಿಗಳ ಸಮಾಧಿ ಸ್ಥಳಗಳಿಗೆ ಬುಧವಾರ ಭೇಟಿ ನೀಡಿ ನಮನ ಸಲ್ಲಿಸಿದರು.

ಪಾಂಡವಪುರ ತಾಲೂಕಿನ ಕ್ಯಾತನಹಳ್ಳಿಯಲ್ಲಿರುವ ರೈತ ನಾಯಕ, ಮಾಜಿ ಶಾಸಕ ಕೆ.ಎಸ್.ಪುಟ್ಟಣ್ಣಯ್ಯ ಸಮಾಧಿಗೆ ಸ್ಥಳಕ್ಕೆ ಭೇಟಿ ಕೊಟ್ಟ ಹೆಚ್ಡಿಕೆ ವಿಶೇಷ ಪೂಜೆ ಸಲ್ಲಿಸಿ, ಪುಷ್ಪ ನಮನ ಸಲ್ಲಿಸಿದರು.

ಬಳಿಕ ಮಂಡ್ಯ ತಾಲ್ಲೂಕಿನ ಹೊಳಲು ಗ್ರಾಮಕ್ಕೆ ಆಗಮಿಸಿದ ಹೆಚ್ಡಿಕೆ ಗ್ರಾಮದಲ್ಲಿರುವ ಮಾಜಿ ಶಾಸಕ ಹಾಗೂ ಜಿಲ್ಲೆಯ ಹಿರಿಯ ರಾಜಕೀಯ ಮುತ್ಸದ್ದಿ ಡಾ.ಹೆಚ್.ಡಿ. ಚೌಡಯ್ಯ ಸಮಾಧಿಗೂ ವಿಶೇಷ ಪೂಜೆ ಸಲ್ಲಿಸಿ ಪುಷ್ಪಾರ್ಚನೆ ನೆರವೇರಿಸಿದರು.

ಆ ನಂತರ ಮಂಡ್ಯ ತಾಲೂಕಿನ ಕೀಲಾರ ಗ್ರಾಮಕ್ಕೆ ಆಗಮಿಸಿ ನಿತ್ಯ ಸಚಿವ ಕೆ.ವಿ.ಶಂಕರಗೌಡರ ಸಮಾಧಿಗೂ ವಿಶೇಷ ಪೂಜೆ ಸಲ್ಲಿಸಿದರು. ತದನಂತರ ಮಂಡ್ಯ ತಾಲೂಕಿನ ಸೂನಗನಹಳ್ಳಿ ಗ್ರಾಮಕ್ಕೆ ಆಗಮಿಸಿದ ಹೆಚ್ಡಿಕೆ, ಮಾಜಿ ಸಚಿವ ಎಸ್.ಡಿ.ಜಯರಾಂ ಸಮಾಧಿಗೆ ವಿಶೇಷ ಪೂಜೆ ಸಲ್ಲಿಸಿ, ನಮಿಸಿದರು.

ಮದ್ದೂರು ತಾಲ್ಲೂಕಿನ ಕೆ.ಎಂ.ದೊಡ್ಡಿಯ ಹನುಮಂತ ನಗರದ ಬಳಿ ಇರುವ ಮಾಜಿ ಸಂಸದ, ರೈತ ಹೋರಾಟಗಾರ, ಮಂಡ್ಯದ ಗಾಂಧಿ ಎಂದೇ ಕರೆಯಲ್ಪಡುವ ಡಾ.ಜಿ.ಮಾದೇಗೌಡ ಸಮಾಧಿ ಸ್ಥಳಕ್ಕೆ ತೆರಳಿ ವಿಶೇಷ ಪೂಜೆ ಸಲ್ಲಿಸಿದರು.

ನಂತರ ಬೆಂಗಳೂರಿಗೆ ತೆರಳಿದ ಕುಮಾರಸ್ವಾಮಿ, ಕಂಠೀರವ ಸ್ಟುಡಿಯೋ ಬಳಿ ಇರುವ ಹಿರಿಯ ನಟ, ಮಾಜಿ ಸಚಿವ ಡಾ.ಅಂಬರೀಷ್ ಅವರ ಸಮಾಧಿಗೆ ವಿಶೇಷ ಪೂಜೆ ಸಲ್ಲಿಸಿ, ಗೌರವ ನಮನ ಸಲ್ಲಿಸಿದರು.

ಕ್ಯಾತನಹಳ್ಳಿ ಗ್ರಾಮದಲ್ಲಿ ಸುದ್ದಿಗಾರರೊಂದಿಗೆ ಮಾತನಾಡಿದ ಹೆಚ್.ಡಿ. ಕುಮಾರಸ್ವಾಮಿ, ಮಂಡ್ಯ ಜಿಲ್ಲೆಯ ಪರವಾಗಿ ಅವರ ಜೀವಿ ತಾವಧಿಯಲ್ಲಿ ಹೋರಾಟ ಮಾಡಿರುವ ಮಹನೀಯರ ಸಮಾಧಿಗಳಿಗೆ ನಾಮಪತ್ರ ಸಲ್ಲಿಕೆಗೂ ಮುನ್ನ ಪೂಜೆ ಸಲ್ಲಿಸಬೇಕೆಂಬ ಹಿನ್ನೆಲೆಯಲ್ಲಿ ಮಾದೇಗೌಡರು, ಪುಟ್ಟಣ್ಣಯ್ಯ, ಶಂಕರೇಗೌಡರು, ಚೌಡಯ್ಯ, ಎಸ್.ಡಿ. ಜಯರಾಂ ಹಾಗೂ ಅಂಬರೀಷ್ ಅವರ ಸಮಾಧಿಗಳಿಗೆ ಪುಷ್ಪ ನಮನ ಅರ್ಪಿಸಿ, ಅವರನ್ನು ಸ್ಮರಿಸಿಕೊಳ್ಳುತ್ತಿದ್ದೇನೆ ಎಂದರು.

ಕೇಂದ್ರದಲ್ಲಿ ಎನ್‌ಡಿಎ 400ಕ್ಕೂ ಹೆಚ್ಚು ಸ್ಥಾನ ಗೆಲ್ಲಬೇಕೆಂಬ ಬಯಕೆ ಇದೆ. ಸಂಸದೆ ಸುಮಲತಾ ಅವರು ಬಿಜೆಪಿ ಸೇರುವ ಪ್ರಕಟಣೆ ಸ್ವಾಗತಾರ್ಹವಾಗಿದ್ದು, ನನ್ನ ಹಾಗೂ ಹಲವರ ಪರ ಪ್ರಚಾರ ಮಾಡಲಿದ್ದು, ನಾನು ಸಹ ಪ್ರಚಾರಕ್ಕೆ ಅವರನ್ನು ಆಹ್ವಾನಿಸುವೆ. ನನಗಾಗಿ ಕ್ಷೇತ್ರಬಿಟ್ಟುಕೊಟ್ಟ ಅವರಿಗೆ ಕೃತಜ್ಞತೆ ಸಲ್ಲಿಸುವೆ ಎಂದು ಹೇಳಿದರು.

ಈ ಸಂದರ್ಭದಲ್ಲಿ ಮಾಜಿ ಸಚಿವರಾದ ಸಿ.ಎಸ್.ಪುಟ್ಟರಾಜು, ಡಿ.ಸಿ.ತಮ್ಮಣ್ಣ, ಶಾಸಕ ಹೆಚ್.ಟಿ.ಮಂಜು, ಮಾಜಿ ಶಾಸಕರಾದ ಸುರೇಶ್‌ಗೌಡ, ಕೆ.ಟಿ.ಶ್ರೀಕಂಠೇಗೌಡ, ಡಾ.ಕೆ.ಅನ್ನದಾನಿ, ಜೆಡಿಎಸ್ ಹಾಗೂ ಬಿಜೆಪಿ ಮುಖಂಡರಾದ ಡಿ.ರಮೇಶ್, ಬಿ.ಆರ್. ರಾಮಚಂದ್ರ, ಕೆ.ಎಸ್.ವಿಜಯಾನಂದ, ಡಾ.ಇಂದ್ರೇಶ್, ಅಶೋಕ್ ಜಯರಾಂ ಇದ್ದರು.

ಇಂದು ಹೆಚ್ಡಿಕೆ ನಾಮಪತ್ರ ಸಲ್ಲಿಕೆ

ಬಿಎಸ್‌ವೈ, ಗೋವಾ ಸಿಎಂ ಭಾಗಿ

ಮಂಡ್ಯ: ಮಂಡ್ಯ ಲೋಕಸಭಾ ಕ್ಷೇತ್ರದ ಜೆಡಿಎಸ್ ಅಭ್ಯರ್ಥಿ ಹಾಗೂ ಮಾಜಿ ಮುಖ್ಯಮಂತ್ರಿ ಹೆಚ್.ಡಿ.ಕುಮಾರಸ್ವಾಮಿ ಗುರುವಾರ ಮಂಡ್ಯ ಡಿಸಿ ಕಚೇರಿಯಲ್ಲಿ ತಮ್ಮ ಉಮೇದುವಾರಿಕೆ ಸಲ್ಲಿಸಲಿದ್ದಾರೆ.

ಇದಕ್ಕೂ ಮುನ್ನ ಬೆಳಿಗ್ಗೆ 9 ಗಂಟೆಗೆ ಮಂಡ್ಯ ನಗರದ ಅರ್ಕೇಶ್ವರ ದೇಗುಲದಲ್ಲಿ ವಿಶೇಷ ಪೂಜೆ ಸಲ್ಲಿಸಿ, ನಂತರ ಕಾಳಿಕಾಂಭ ದೇಗುಲ, ಲಕ್ಷ್ಮಿ ಜನಾರ್ದನ ದೇಗುಲಗಳಿಗೂ ಭೇಟಿ ನೀಡಿ ನಂತರ ನಗರದ ನೀರಾವರಿ ಇಲಾಖೆ ಮುಂದಿರುವ ಕಾವೇರಿ ಮಾತೆ, ವಿಶ್ವೇಶ್ವರಯ್ಯ ಪುತ್ಥಳಿ, ನಾಲ್ವಡಿ ಕೃಷ್ಣರಾಜ ಒಡೆಯರ್ ಪುತ್ಥಳಿಗೆ ಮಾಲಾರ್ಪಣೆ ಮಾಡಿ, ಬಳಿಕ ಡಿಸಿ ಕಚೇರಿಯ ಎದುರು ಇರುವ ಉದ್ಯಾನವನದಲ್ಲಿ ಡಾ.ಬಿ.ಆರ್.ಅಂಬೇಡ್ಕರ್, ಬಾಬು ಜಗಜೀವನ್ ರಾಮ್ ಪ್ರತಿಮೆಗಳಿಗೆ ಮಾಲಾರ್ಪಣೆ ಮಾಡಿ, 11.15ಕ್ಕೆ ನಾಮಪತ್ರ ಸಲ್ಲಿಕೆ ಮಾಡಲಿದ್ದಾರೆ. ಬಳಿಕ 11 ಗಂಟೆಗೆ ನಗರದ ಮಂಡ್ಯ ವಿಶ್ವವಿದ್ಯಾನಿಲಯದ ಆವರಣದಲ್ಲಿ ಬೃಹತ್ ಬಹಿರಂಗ ಸಭೆ ನಡೆಯಲಿದೆ.

ನಾಮಪತ್ರ ಸಲ್ಲಿಕೆ ಹಾಗೂ ಬಹಿರಂಗ ಸಮಾವೇಶ ಕಾರ್ಯಕ್ರಮಕ್ಕೆ ಮಾಜಿ ಮುಖ್ಯಮಂತ್ರಿ ಬಿ.ಎಸ್.ಯಡಿಯೂರಪ್ಪ, ಗೋವಾ ಮುಖ್ಯಮಂತ್ರಿ ಪ್ರಮೋದ್ ಸಾವಂತ್, ಜೆಡಿಎಸ್ ಯುವ ಘಟಕದ ರಾಜ್ಯಾಧ್ಯಕ್ಷ ನಿಖಿಲ್ ಕುಮಾರಸ್ವಾಮಿ, ಮೈಸೂರು– ಕೊಡಗು ಕ್ಷೇತ್ರ ಬಿಜೆಪಿ ಅಭ್ಯರ್ಥಿ ಯದುವೀರ್ ಕೃಷ್ಣದತ್ತ ಚಾಮರಾಜ ಒಡೆಯರ್ ಸೇರಿದಂತೆ ಮಂಡ್ಯ ಜಿಲ್ಲೆ ಸೇರಿ ಜೆಡಿಎಸ್, ಬಿಜೆಪಿಯ ಶಾಸಕರು, ಮಾಜಿ ಶಾಸಕರುಗಳು ಹಾಗೂ ಮುಖಂಡರುಗಳು ಕಾರ್ಯಕ್ರಮದಲ್ಲಿ ಭಾಗಿಯಾಗಲಿದ್ದಾರೆ.

7 ಅಭ್ಯರ್ಥಿಗಳಿಂದ 9 ನಾಮಪತ್ರ ಸಲ್ಲಿಕೆ

ಮಂಡ್ಯ,ಏ.3–ಮಂಡ್ಯ–ಲೋಕಸಭಾ ಚುನಾವಣೆಗೆ ನಾಮಪತ್ರ ಸಲ್ಲಿಸಲು 5ನೇ ದಿನವಾದ ಇಂದು 7 ಅಭ್ಯರ್ಥಿಗಳು ಒಟ್ಟು 9 ನಾಮಪತ್ರ ಸಲ್ಲಿಸಿದ್ದಾರೆ ಎಂದು ಜಿಲ್ಲಾ ಚುನಾವಣಾಧಿಕಾರಿ ಡಾ.ಕುಮಾರ ತಿಳಿಸಿದ್ದಾರೆ.

ಪಕ್ಷೇತರ ಅಭ್ಯರ್ಥಿಯಾಗಿ ಅರುಣ್ ಕುಮಾರ್.ಟಿ.ವಿ –1 ನಾಮಪತ್ರ, ಲೋಕ ಶಕ್ತಿ ಪಕ್ಷದ ಅಭ್ಯರ್ಥಿಯಾಗಿ ಎನ್. ಬಸವರಾಜು –1 ನಾಮಪತ್ರ, ಪಕ್ಷೇತರ ಅಭ್ಯರ್ಥಿಯಾಗಿ ಲೋಲ –1 ನಾಮಪತ್ರ, ಪಕ್ಷೇತರ ಅಭ್ಯರ್ಥಿಯಾಗಿ ಶಿವನಂಜಪ್ಪ –1 ನಾಮಪತ್ರ, ಬಹುಜನ ಸಮಾಜ ಪಕ್ಷದ ಅಭ್ಯರ್ಥಿಯಾಗಿ ಶಿವಶಂಕರ್ ಎಸ್ –3 ನಾಮಪತ್ರ, ಪಕ್ಷೇತರ ಅಭ್ಯರ್ಥಿಯಾಗಿ ರಾಮಯ್ಯ ಡಿ –1 ನಾಮಪತ್ರ, ಕರ್ನಾಟಕ ರಾಷ್ಟ್ರ ಸಮಿತಿ ಪಕ್ಷದ ಅಭ್ಯರ್ಥಿಯಾಗಿ ಚಂದ್ರಶೇಖರ ಕೆ. ಆರ್ –1 ನಾಮಪತ್ರ ಸಲ್ಲಿಸಿದ್ದಾರೆ.

ಜಿಲ್ಲೆಯ ಮಗನೇ ಸಂಸದರಾಗುವುದು ಸೂಕ್ತ



ಕಿಕ್ಕೇರಿ ಸಮೀಪದ ಮಂದಗೆರೆಯಲ್ಲಿ ಲೋಕಸಭಾ ಚುನಾವಣಾ ಕಾಂಗ್ರೆಸ್ ಅಭ್ಯರ್ಥಿ ವೆಂಕಟರಮಣೇಗೌಡ(ಸ್ಟಾರ್ ಚಂದ್ರು) ಪರವಾಗಿ ಕೆ.ಬಿ. ಚಂದ್ರಶೇಖರ್ ಮತಯಾಚಿಸಿದರು.

ಕಿಕ್ಕೇರಿ: ರಾಜ್ಯದಲ್ಲಿಯೇ ಪ್ರತಿಷ್ಠಿತ ಕಣವಾದ ಮಂಡ್ಯ ಜಿಲ್ಲೆ ಸಂಸದರು ಜಿಲ್ಲೆಯವರೇ ಆಗಬೇಕು ಎಂಬುದನ್ನು ಮತದಾರರು ಅರಿಯಬೇಕು ಎಂದು ಮಾಜಿ ಸಚಿವ ಕೆ.ಬಿ. ಚಂದ್ರಶೇಖರ್ ತಿಳಿಸಿದರು.

ಸಮೀಪದ ಮಂದಗೆರೆಯಲ್ಲಿ ಕಾಂಗ್ರೆಸ್ ಅಭ್ಯರ್ಥಿ ವೆಂಕಟರಮಣೆಗೌಡ (ಸ್ಟಾರ್‌ಚಂದ್ರು) ಪರ ಮತಯಾಚಿಸಿ ಮಾತನಾಡಿ, ಎಲ್ಲ ಮುಖಂಡರು ಯೋಚಿಸಿ ಸ್ಟಾರ್ ಚಂದ್ರು ಅವರನ್ನು ಒಮ್ಮತದಿಂದ ಆಯ್ಕೆ ಮಾಡಿದ್ದಾರೆ. ಎಚ್.ಡಿ.ದೇವೇಗೌಡರನ್ನು ಪ್ರಧಾನಿಯಾಗಿ ಹಾಗೂ ಎಚ್.ಡಿ. ಕುಮಾರಸ್ವಾಮಿಯನ್ನು ಮುಖ್ಯಮಂತ್ರಿ ಮಾಡಿದವರು ಕಾಂಗ್ರೆಸ್ ಪಕ್ಷ ಎಂಬುದನ್ನು ಮರೆಯಬಾರದು. ಇವರಿಗೆ ಬುದ್ಧಿ ಕಲಿಸುವ ಕಾಲ ಬಂದಿದ್ದು ಮತದಾರರು ಮರೆಯಬಾರದು ಎಂದರು.

ಬೇರೆ ಜಿಲ್ಲೆಯವರನ್ನು ನಮ್ಮ ಜಿಲ್ಲೆಯ ಮತದಾರರ ಒಪ್ಪಲಾರ ಎಂಬುದನ್ನು ವಿರೋಧಪಕ್ಷದವರು ಅರಿಯಬೇಕು. ಈಗಾಗಲೇ ಕಳೆದ ಚುನಾವಣೆಯಲ್ಲಿ ಜನತೆ ತೋರಿಸಿದ್ದಾರೆ. ಮೋದಿ ಬಾಯಲ್ಲಿ ಬರುವುದೆಲ್ಲ ಬರೀ ಸುಳ್ಳು. ಇಂತಹ ಕೆಟ್ಟ ರಾಜಕಾರಣಿ, ಸರ್ಕಾರ ಮೊದಲು ತೆಗೆಯಲು ಸಂಕಲ್ಪ ಮಾಡಬೇಕು ಎಂದು ಗುಡುಗಿದರು.

ಕಾಂಗ್ರೆಸ್ ಮುಖಂಡ ಬಿ.ಎಲ್. ದೇವರಾಜು ಮಾತನಾಡಿ, ತಾಲೂಕಿನ ಜನತೆ ಬುದ್ಧಿವಂತರಿದ್ದು ಚರ್ಚೆ ಮಾಡುವ ಜಾಣ್ಮೆ ಇವರಲ್ಲಿದೆ. ಯುವಕರು ಎಚ್ಚೆತ್ತುಕೊಂಡು ಮತದಾನ ಮಾಡಬೇಕು. ಯುವ ಜಾಗೃತಿ ಮೂಡಿಸಲು ರಾಜೀವ್‌ಗಾಂಧಿ ಜೀವಮಾನ ಶ್ರಮಿಸಿದವರು ಎಂದು ತಮ್ಮ ಪಕ್ಷವನ್ನು ಹೊಗಳಿದರು.

ಅಭ್ಯರ್ಥಿ ವೆಂಕಟರಮಣೇಗೌಡ ಮಾತನಾಡಿ, ಜಿಲ್ಲೆಯ ಮಗ ತಾನಾಗಿದ್ದು, ತಮ್ಮ ಸೇವೆ ಮಾಡಲು ಅವಕಾಶ ಮಾಡಿಕೊಡಿ ಎಂದು ಮನವಿ ಮಾಡಿದರು. ಮಾಜಿ ಶಾಸಕ ಬಿ. ಪ್ರಕಾಶ್, ಬ್ಲಾಕ್ ಕಾಂಗ್ರೆಸ್ ಅಧ್ಯಕ್ಷ ಹರಳಹಳ್ಳಿ ವಿಶ್ವನಾಥ್, ನಾಗೇಂದ್ರಕುಮಾರ್, ಮೈಶುಗರ್ ಕಾರ್ಖಾನೆ ಅಧ್ಯಕ್ಷ ಸಿ.ಡಿ. ಗಂಗಾಧರ್, ಮುಖಂಡರಾದ ಬಸ್ತಿರಂಗಪ್ಪ, ಮಾದಾಪುರ ರಾಮಕೃಷ್ಣೇಗೌಡ ಮತ್ತಿತರರು ಹಾಜರಿದ್ದರು.

ಕಾರು ಡಿಕ್ಕಿ: ಬೈಕ್ ಸವಾರ ಸಾವು



ಹಲಗೂರು,ಏ.3– ಕಾರೊಂದು ಬೈಕಿಗೆ ಡಿಕ್ಕಿ ಹೊಡೆದ ಪರಿಣಾಮ ಬೈಕ್ ಸವಾರ ಸಾವನ್ನಪ್ಪಿ, ಮತ್ತಿಬ್ಬರು ಗಾಯಗೊಂಡಿರುವ ಘಟನೆ ಸಮೀಪದ ದಳವಾಯಿ ಕೋಡಿಹಳ್ಳಿ ಬಳಿ ಸಂಭವಿಸಿದೆ. ಕೆಂಪಯ್ಯನದೊಡ್ಡಿ ಗ್ರಾಮ ಮಹದೇವು(38) ಮೃತಪಟ್ಟಿದ್ದು, ದಳವಾಯಿ ಕೋಡಿಹಳ್ಳಿ ಗ್ರಾಮದ ನಂಜುಂಡಿ (60) ಬಸವರಾಜು (35) ಗಂಭೀರವಾಗಿ ಗಾಯಗೊಂಡಿದ್ದು, ಅವರನ್ನು ಆಸ್ಪತ್ರೆಗೆ ಸೇರಿಸಲಾಗಿದೆ. ಹಲಗೂರಿನಿಂದ ಕನಕಪುರ ಮಾರ್ಗದಲ್ಲಿ ವೇಗವಾಗಿ ಬಂದ ಕಾರು ಹೀರೋ ಸ್ಪ್ಲೆಂಡರ್ ಬೈಕ್ ಗೆ ಡಿಕ್ಕಿ ಹೊಡೆದು ಮಹದೇವು ಸಾವನ್ನಪ್ಪಿ, ನಂಜುಂಡಿ ಗಾಯಗೊಂಡರು. ರಸ್ತೆ ಪಕ್ಕದಲ್ಲಿ ನಿಂತಿದ್ದ ಅದೇ ಗ್ರಾಮದ ಬಸವರಾಜುಗೆ ಅದೇ ಕಾರು ಡಿಕ್ಕಿ ಹೊಡೆದು ಅವರು ಗಂಭೀರವಾಗಿ ಗಾಯಗೊಂಡಿದ್ದು ಮಂಡ್ಯ ಜಿಲ್ಲಾ ಆಸ್ಪತ್ರೆಗೆ ದಾಖಲಿಸಲಾಗಿದೆ.

ಶ್ರೀರಂಗಪಟ್ಟಣದ ವಿವಿಧೆಡೆ ಕಾಂಗ್ರೆಸ್ ಅಭ್ಯರ್ಥಿ ಸ್ಟಾರ್ ಚಂದ್ರು ಮತಯಾಚನೆ



ಶ್ರೀರಂಗಪಟ್ಟಣ,ಏ.3– ಮಂಡ್ಯ ಲೋಕಸಭಾ ಕ್ಷೇತ್ರದ ಕಾಂಗ್ರೆಸ್ ಅಭ್ಯರ್ಥಿ ವೆಂಕಟರಮಣೇಗೌಡ (ಸ್ಟಾರ್ ಚಂದ್ರು) ಅವರು ತಾಲೂಕಿನ ವಿವಿಧೆಡೆ ಚುನಾವಣಾ ಪ್ರಚಾರ ನಡೆಸಿ ಮತಯಾಚನೆ ನಡೆಸಿದರು.

ಶ್ರೀರಂಗಪಟ್ಟಣ ವಕೀಲರ ಸಂಘದವರನ್ನು ಭೇಟಿ ಮಾಡಿ ಮಾತನಾಡಿದ ಅವರು, ರಾಷ್ಟ್ರ ನಿರ್ಮಾಣದಲ್ಲಿ ವಕೀಲರ ಪಾತ್ರ ಪ್ರಮುಖವಾದದ್ದು. ವಕೀಲರು ನ್ಯಾಯಾಂಗದ ಕೀಲಿಕೈ ಇದ್ದಂತೆ. ವಕೀಲರು ಮತ್ತು ವಕೀಲರ ಸಂಘದ ಕುಂದುಕೊರತೆಗಳನ್ನು ಬಗೆಹರಿಸಲು ಶ್ರಮಿಸುತ್ತೇನೆ. ಕಾಂಗ್ರೆಸ್‌ನ ಮೂಲಮಂತ್ರ ಅಭಿವೃದ್ಧಿ, ಕಾಂಗ್ರೆಸ್ ಅಜೆಂಡಾ ಅಭಿವೃದ್ಧಿ. ರಾಜ್ಯದಲ್ಲಿ ಕಾಂಗ್ರೆಸ್ ಸರ್ಕಾರ ಜಾರಿಗೆ ತಂದಿರುವ ಕಾರ್ಯಕ್ರಮಗಳು, ಅಭಿವೃದ್ಧಿ ಆಧಾರದ ಮೇಲೆ ನಾನು ಮತ ಯಾಚಿಸುತ್ತಿದ್ದೇನೆ. ಮಂಡ್ಯ ಜಿಲ್ಲೆಯ ಅಭಿವೃದ್ಧಿಗಾಗಿ ಕಾಂಗ್ರೆಸ್ ಬೆಂಬಲಿಸಿ ಎಂದು ವಿನಂತಿಸಿದರು.

ರಂಗನಾಥಸ್ವಾಮಿ ದರ್ಶನ: ಮಂಡ್ಯ ಲೋಕಸಭಾ ಕ್ಷೇತ್ರದ ಕಾಂಗ್ರೆಸ್ ಅಭ್ಯರ್ಥಿ ವೆಂಕಟರಮಣೇಗೌಡ (ಸ್ಟಾರ್ ಚಂದ್ರು) ಅವರು ಶ್ರೀರಂಗಪಟ್ಟಣದ ಶ್ರೀ ರಂಗನಾಥಸ್ವಾಮಿಯ ದರ್ಶನ ಪಡೆದರು. ವಿಷ್ಣುವನ್ನು ಆರಾಧಿಸುವ ದಕ್ಷಿಣ ಭಾರತದ ಪ್ರಮುಖ ದೇವಾಲಯವಾದ ಶ್ರೀ ರಂಗನಾಥಸ್ವಾಮಿಗೆ ಪೂಜೆ ಸಲ್ಲಿಸಿ ರಾಜ್ಯದ ಜನತೆಗೆ ಒಳಿತಾಗಲಿ ಎಂದು ಪ್ರಾರ್ಥಿಸಿದರು.

ಬಳಿಕ ಹುಲಿಕೆರೆಯಲ್ಲಿನ ಕ್ಯಾಥೋಲಿಕ್ ಧರ್ಮಕ್ಷೇತ್ರ ಹಾಗೂ ಶ್ರೀರಂಗಪಟ್ಟಣದಲ್ಲಿನ ಗುಂಬಜ್‌ಗೆ ಭೇಟಿ ನೀಡಿದರು.

ಚಂದ್ರವನ ಆಶ್ರಮಕ್ಕೆ ಭೇಟಿ: ಮಂಡ್ಯ ಲೋಕಸಭಾ ಕ್ಷೇತ್ರದ ಕಾಂಗ್ರೆಸ್ ಅಭ್ಯರ್ಥಿ ವೆಂಕಟರಮಣೇಗೌಡ (ಸ್ಟಾರ್ ಚಂದ್ರು) ಅವರು, ಶ್ರೀರಂಗಪಟ್ಟಣದಲ್ಲಿನ ಚಂದ್ರವನ ಆಶ್ರಮಕ್ಕೆ ಭೇಟಿ ನೀಡಿದರು. ಆಶ್ರಮದಲ್ಲಿನ ಶ್ರೀ ಕಾಶಿ ಚಂದ್ರಮೌಳೇಶ್ವರ ಸ್ವಾಮಿ ದೇವಸ್ಥಾನಕ್ಕೆ ತೆರಳಿ ಪೂಜೆ ಸಲ್ಲಿಸಿದರು. ನಂತರ ಶ್ರೀ ತ್ರಿನೇತ್ರ ಮಹಂತ ಶಿವಯೋಗಿ ಸ್ವಾಮಿ ಅವರನ್ನು ಭೇಟಿ ಮಾಡಿ ಹಾರ, ಶಾಲು, ಹಾಕಿ ಫಲತಾಂಬೂಲ ನೀಡಿ ಸನ್ಮಾನಿಸಿ ಆಶೀರ್ವಾದ ಪಡೆದರು. ಹರಿದ್ವಾರದ ಪರಮಪೂಜ್ಯ ಮಹಾಮಂಡಳೇಶ್ವರ ಸ್ವಾಮೀಜಿ ಡಾ. ಉಮಾಕಾಂತಾನಂದ ಸರಸ್ವತಿ ಜೀ ಮಹರಾಜ ಅವರು ಆಶೀರ್ವದಿಸಿದರು. ಈ ಸಂದರ್ಭದಲ್ಲಿ ಶಾಸಕ ರಮೇಶ್ ಬಾಬು ಬಂಡಿಸಿದ್ದೇಗೌಡ, ಕಾಂಗ್ರೆಸ್ ಅಧ್ಯಕ್ಷ ರಮೇಶ್, ಮುಖಂಡರುಗಳಾದ ದಿನೇಶ್, ಪ್ರಕಾಶ್, ನಂದೀಶ್ ಜೊತೆಯಲ್ಲಿದ್ದರು.

13 ಪಿಕ್ ಪಾಕೆಟ್ ಕಳ್ಳರ ಬಂಧನ

ಮಡಿಕೇರಿ, ಏ.3–ಇತ್ತೀಚಿಗೆ ಕುಶಾಲನಗರ ಮತ್ತು ಮಡಿಕೇರಿಯಲ್ಲಿ ನಡೆದ ಬಿಜೆಪಿ ಕಾರ್ಯಕರ್ತರ ಸಮಾವೇಶದಲ್ಲಿ ಮಾಜಿ ಶಾಸಕರಿಬ್ಬರ ಸಹಿತ ಇತರರ ಜೇಬಿನಿಂದ ಪಿಕ್ ಪಾಕೆಟ್ ಮಾಡಿದ್ದ 13 ಆರೋಪಿಗಳನ್ನು ಕೊಡಗು ಜಿಲ್ಲಾ ಪೊಲೀಸರು ಬಂಧಿಸಿದ್ದಾರೆ.

ಶಿವಮೊಗ್ಗ ಭದ್ರಾವತಿಯ ಜಯಣ್ಣ ಅಲಿಯಾಸ್ ಕಿರಿಕ್ ಜಯ(38), ಪುಟ್ಟರಾಜು ಅಲಿಯಾಸ್ ಪುಟ್ಟ(39), ಸಿ. ನಾಗರಾಜ ಅಲಿಯಾಸ್ ಕೋತಿ ಕಿಚ್ಚ(43), ಆರ್.ವೆಂಕಟೇಶ್(44), ರಾಮು ಅಲಿಯಾಸ್ ಕುಳ್ಳರಾಮು(43), ಕೆ.ಉಮೇಶ್ (36), ಜಯಣ್ಣ ಅಲಿಯಾಸ್ ದೊಡ್ಡ ಜಯಣ್ಣ(53), ಬೋಜಪ್ಪ ಅಲಿಯಾಸ್ ಬೋಜ(50), ಮೆಹಬೂಬ್ ಸುಭಾನ್ (48), ಡಿ.ಗಿರೀಶ(31), ಬಾಲು(35), ಬೆಂಗಳೂರಿನ ಹೆಬ್ಬಗೋಡಿಯ ಹರೀಶ(35), ನೆಲಮಂಗಲದ ರಂಗಣ್ಣ ಅಲಿಯಾಸ್ ರಂಗ(50) ಬಂಧಿತರು.

ಬಂಧಿತರನ್ನು ನ್ಯಾಯಾಲಯದ ವಶಕ್ಕೆ ನೀಡಲಾಗಿದ್ದು, ಪಿಕ್ ಪಾಕೆಟ್ ಮಾಡಿದ್ದ 1,96,300 ರೂ.ಗಳ ಪೈಕಿ 65,960 ರೂ. ಹಾಗೂ ಕೃತ್ಯಕ್ಕೆ ಬಳಸಿದ್ದ 12 ಮೊಬೈಲ್, 2 ಕಾರುಗಳನ್ನು ವಶಪಡಿಸಿಕೊಳ್ಳಲಾಗಿದೆ.

ಪ್ರಕರಣ: ಮಡಿಕೇರಿ ನಗರ ಮತ್ತು ಕುಶಾಲನಗರ ಪೊಲೀಸ್ ಠಾಣೆ ವ್ಯಾಪ್ತಿಯಲ್ಲಿ ಲೋಕಸಭಾ ಚುನಾವಣೆ ಹಿನ್ನೆಲೆಯಲ್ಲಿ ಮಾ.27ರಂದು ಬಿಜೆಪಿ ಕಾರ್ಯಕರ್ತರ ಸಭೆ ಏರ್ಪಡಿಸಲಾಗಿತ್ತು. ಈ ವೇಳೆ ನೂಕುನುಗ್ಗಲು ಸೃಷ್ಟಿಸಿ ಮಾಜಿ ಸ್ಪೀಕರ್ ಕೆ.ಜಿ.ಬೋಪಯ್ಯ ಅವರ ಜೇಬಿನಲ್ಲಿದ್ದ 17 ಸಾವಿರ ರೂ., ಕುಶಾಲನಗರ ಇಂದಿರಾ ಬಡಾವಣೆಯ ಎಂ.ಎಂ. ಚರಣ್ ಅವರ 32 ಸಾವಿರ, ಡಿ.ಹೆಚ್. ಚಂದ್ರಶೇಖರ್ ಬಳಿಯಿದ್ದ 50 ಸಾವಿರ, ಹೆಚ್.ಮಣಿ ಅವರ ಜೇಬಿನಿಂದ 15 ಸಾವಿರ ಹಾಗೂ ಮಡಿಕೇರಿಯ ಖಾಸಗಿ ಹೊಟೇಲ್ ಸಭಾಂಗಣದಲ್ಲಿ ನಡೆದ ಕಾರ್ಯಕ್ರಮದಲ್ಲಿ ರಂಗಸಮುದ್ರ ನಿವಾಸಿ ಹೆಚ್.ಎಸ್.ನಿತಿನ್ ಅವರ ಜೇಬಿನಿಂದ 50 ಸಾವಿರ, ವಿರಾಜಪೇಟೆ ನಿವಾಸಿ ಯೋಗೇಶ್ ಅವರ ಬಳಿಯಿದ್ದ 32 ಸಾವಿರ ಸೇರಿದಂತೆ ಒಟ್ಟು 1,96,300 ರೂ.ಗಳನ್ನು ಪಿಕ್ ಪಾಕೆಟ್ ಮಾಡಲಾಗಿತ್ತು.

ಈ ಕುರಿತು ಪ್ರತ್ಯೇಕ 3 ದೂರು ದಾಖಲು ಮಾಡಿಕೊಳ್ಳಲಾಗಿತ್ತು. ಪ್ರಕರಣ ಬೆಳಕಿಗೆ ಬಂದ ತಕ್ಷಣ ಕಾರ್ಯಪ್ರವೃತ್ತರಾದ ಪೊಲೀಸರು ಸಭಾಂಗಣದಲ್ಲಿ ಅಳವಡಿಸಲಾಗಿದ್ದ ಸಿಸಿ ಕ್ಯಾಮರಾ ದೃಶ್ಯಾವಳಿಗಳ ಸಹಿತ ತಾಂತ್ರಿಕ ಮಾಹಿತಿ ಕಲೆ ಹಾಕಿ ಆರೋಪಿಗಳನ್ನು ಬಂಧಿಸಿದ್ದಾರೆ. ಕುಶಾಲನಗರ ಡಿವೈಎಸ್‌ಪಿ ಆರ್.ವಿ.ಗಂಗಾಧರಪ್ಪ, ವೃತ್ತ ನಿರೀಕ್ಷಕ ಬಿ.ಜಿ.ಪ್ರಕಾಶ್, ಠಾಣಾಧಿಕಾರಿ ಬಿ.ಎಸ್.ಉಮಾ, ಸಿಬ್ಬಂದಿ ಕಾರ್ಯಾಚರಣೆ ನಡೆಸಿದ್ದಾರೆ. ಪೊಲೀಸ್ ಅಧಿಕಾರಿಗಳು ಸಿಬ್ಬಂದಿಯನ್ನು ಜಿಲ್ಲಾ ಪೊಲೀಸ್ ವರಿಷ್ಠಾಧಿಕಾರಿ ಕೆ.ರಾಮರಾಜನ್ ಶ್ಲಾಘಿಸಿದ್ದಾರೆ.

ಕೇಂದ್ರದಿಂದ ಅನುದಾನವೇ ಬಂದಿಲ್ಲವೆನ್ನುವಂತೆ ಮಾತನಾಡುವುದು ಮುಖ್ಯಮಂತ್ರಿಗಳಿಗೆ ಶೋಭೆತರಲ್ಲ

ಬಿಜೆಪಿ ರಾಜ್ಯಾಧ್ಯಕ್ಷ ಬಿ.ವೈ.ವಿಜಯೇಂದ್ರ ಕಿಡಿ



ಮೈಸೂರಿನ ದಟ್ಟಗಳ್ಳಿಯಲ್ಲಿರುವ ತಮ್ಮ ಪುತ್ರ ಅಮಿತ್ ದೇವರಹಟ್ಟಿ ನಿವಾಸದಲ್ಲಿ ಎಂಎಲ್‌ಸಿ ವಿಶ್ವನಾಥ್ ಅವರು ಬುಧವಾರ ಬಿಜೆಪಿ ರಾಜ್ಯಾಧ್ಯಕ್ಷ ಬಿ.ವೈ.ವಿಜಯೇಂದ್ರ, ಮೈಸೂರು–ಕೊಡಗು ಲೋಕಸಭಾ ಕ್ಷೇತ್ರದ ಬಿಜೆಪಿ ಅಭ್ಯರ್ಥಿ ಯದುವೀರ ಕೃಷ್ಣದತ್ತ ಚಾಮರಾಜ ಒಡೆಯರ್ ಅವರನ್ನು ಸನ್ಮಾನಿಸಿದರು.

ಮೈಸೂರು,ಏ.3(ಪಿಎಂ)– ಕೇಂದ್ರದಿಂದ ಅನುದಾನವೇ ಬಂದಿಲ್ಲ ಎನ್ನುವಂತೆ ಮಾತನಾಡುವುದು ಮುಖ್ಯಮಂತ್ರಿಗಳಿಗೆ ಶೋಭೆ ತರುವುದಿಲ್ಲ ಎಂದು ಬಿಜೆಪಿ ರಾಜ್ಯಾಧ್ಯಕ್ಷ ಬಿ.ವೈ.ವಿಜಯೇಂದ್ರ ಹೇಳಿದರು.

ಎಂಎಲ್‌ಸಿ ವಿಶ್ವನಾಥ್ ಅವರನ್ನು ಬುಧವಾರ ಭೇಟಿ ಮಾಡಿದ ಸಂದರ್ಭದಲ್ಲಿ ಮಾಧ್ಯಮದವರಿಗೆ ಅವರು ಪ್ರತಿಕ್ರಿಯೆ ನೀಡಿದರು. 'ಬಿಜೆಪಿಗೆ ಇಲ್ಲಿ ಓಟ್ ಕೇಳುವ ನೈತಿಕತೆ ಇಲ್ಲ. ಅದರಲ್ಲೂ ಅನುದಾನ ಕೊಡದ ಮೋದಿ ಮತ್ತು ಷಾ ಅವರಿಗೆ ನೈತಿಕತೆ ಇಲ್ಲ' ಎಂದು ಮುಖ್ಯಮಂತ್ರಿ ಸಿದ್ದರಾಮಯ್ಯ ಹೇಳುತ್ತಿದ್ದಾರೆ ಎಂಬುದಕ್ಕೆ ಪ್ರತಿಕ್ರಿಯಿಸಿ, ಮುಖ್ಯಮಂತ್ರಿಗಳ ಬಾಯಲ್ಲಿ ಪದೇ ಪದೇ ಈ ರೀತಿ ಸುಳ್ಳು ಬರುತ್ತಿರುವುದು ಅಚ್ಚರಿ ಉಂಟು ಮಾಡಿದೆ ಎಂದರು.

ಯುಪಿಎ ಸರ್ಕಾರದ ಮನಮೋಹನ್ ಸಿಂಗ್ ಅವಧಿಯಲ್ಲಿ ಕರ್ನಾಟಕ ರಾಜ್ಯಕ್ಕೆ 10 ವರ್ಷಗಳಲ್ಲಿ ಕೇವಲ ಒಂದೂವರೆ ಲಕ್ಷ ಕೋಟಿ ಅನುದಾನ ಬಂದಿತ್ತು ಆದರೆ ಪ್ರಧಾನಿಮಂತ್ರಿ ನರೇಂದ್ರ ಮೋದಿಯವರ ಅವಧಿಯಲ್ಲಿ ಕಳೆದ 10 ವರ್ಷಗಳಲ್ಲಿ ಕರ್ನಾಟಕ ರಾಜ್ಯಕ್ಕೆ ನಾಲ್ಕು ಲಕ್ಷ ಕೋಟಿಗೂ ಅಧಿಕ ಅನುದಾನ ಕೊಡಲಾಗಿದೆ. ಜೊತೆಗೆ ಮೂಲಭೂತ ಸೌಕರ್ಯಗಳಿಗೆ ಒತ್ತು ನೀಡಲಾಗಿದೆ. ಹೀಗಿದ್ದೂ ಮುಖ್ಯಮಂತ್ರಿಗಳ ಈ ರೀತಿಯ ಹೇಳಿಕೆ ಹಾಸ್ಯಾಸ್ಪದ ಎಂದು ತಿರುಗೇಟು ನೀಡಿದರು.

ಬರಗಾಲದ ಹಿನ್ನೆಲೆಯಲ್ಲಿ 800ಕ್ಕೂ ಅಧಿಕ ಸಂಖ್ಯೆಯಲ್ಲಿ ರೈತರು ಆತ್ಮಹತ್ಯೆ ಮಾಡಿಕೊಂಡಿದ್ದರೂ ರೈತರ ಸಂಕಷ್ಟಕ್ಕೆ ಸ್ಪಂದಿಸಬೇಕೆಂದು ಮುಖ್ಯಮಂತ್ರಿಗಳಿಗೆ ಕಿಂಚಿತ್ತೂ ಅನ್ನಿಸಿಲ್ಲ. ರೈತರು ಸಂಕಷ್ಟಕ್ಕೆ ಸ್ಪಂದಿಸದ ಕಾಂಗ್ರೆಸ್ ಸರ್ಕಾರ ನಿಜವಾಗಲೂ ರಾಜ್ಯ ಜನತೆ ಮತ್ತು ರೈತರಿಗೆ ಒಂದು ರೀತಿಯಲ್ಲಿ ಶಾಪವಾಗಿ ಪರಿವರ್ತನೆಯಾಗಿದೆ ಎಂದು ಕಿಡಿಕಾರಿದರು.

ಕಾಂಗ್ರೆಸ್ ಸರ್ಕಾರ ಬಂದ ಮೇಲೆ ಅಭಿವೃದ್ಧಿ ಬಗ್ಗೆ ಯಾರೂ ಮಾತನಾಡಂತಾಗಿದೆ. ಜನ ಜಾನುವಾರುಗಳಿಗೂ ಕುಡಿಯುವ ನೀರಿಗೆ ಸಮಸ್ಯೆ ಉಂಟಾಗಿದೆ. ಈಗಲಾದರೂ ಎಚ್ಚೆತ್ತುಕೊಂಡು ಬರಗಾಲದ ಹಿನ್ನೆಲೆಯಲ್ಲಿ ರೈತರ ಸಂಕಷ್ಟಕ್ಕೆ ಸ್ಪಂದಿಸಬೇಕೆಂದು ಮುಖ್ಯಮಂತ್ರಿಗಳಲ್ಲಿ ಕೈಜೋಡಿಸಿ ಪ್ರಾರ್ಥನೆ ಮಾಡುತ್ತೇನೆ ಎಂದರು. ಸ್ಪಷ್ಟ ಬಹುಮತದೊಂದಿಗೆ ರಾಜ್ಯದಲ್ಲಿ ನಿಮ್ಮ ಸರ್ಕಾರ ಇದೆ. ಕೇಂದ್ರ ಸರ್ಕಾರವನ್ನು ದೂರುವುದನ್ನು ಬಿಟ್ಟು, ಸರಿಯಾದ ನ್ಯಾಯವನ್ನು ರೈತರಿಗೆ ಕೊಡಬೇಕೆಂದು ಕೋರಿದರು.

ಕೆ.ಎಸ್.ಈಶ್ವರಪ್ಪ ಅವರ ಮುನಿಸಿಗೆ ಸಂಬಂಧಿಸಿದಂತೆ ಪ್ರತಿಕ್ರಿಯಿಸಿ, ಪ್ರೀತಿ ಜಾಸ್ತಿ ಇರುವಲ್ಲಿ ಎಲ್ಲವೂ ಸರಿಯಾಗಲು ಸಮಯ ಜಾಸ್ತಿ ಬೇಕಾಗಬಹುದು. ನನಗೆ ವಿಶ್ವಾಸವಿದೆ ಎಲ್ಲವೂ ಸರಿಯಾಗಲಿದೆ ಎಂದರು.

ಮಂಡ್ಯ ಸಂಸದೆ ಸುಮಲತಾ ಅವರ ತೀರ್ಮಾನವನ್ನು ನಿರೀಕ್ಷೆ ಮಾಡಿದ್ರಾ? ಎಂಬುದಕ್ಕೆ ಪ್ರತಿಕ್ರಿಯಿಸಿ, ಸ್ವತಃ ಪ್ರಧಾನಿಗಳನ್ನು ಅವರು ಭೇಟಿ ಮಾಡಿದ್ದರು. ನಡ್ಡಾ ಮತ್ತು ಅಮಿತ್ ಷಾ ಅವರನ್ನೂ ಭೇಟಿ ಮಾಡಿದ್ದರು. ರಾಜ್ಯದ ಪರಿಸ್ಥಿತಿಯನ್ನು ಅವರು ಚರ್ಚೆ ಮಾಡಿದ್ದಾರೆ. ಮಂಡ್ಯದಲ್ಲಿ ಮೈತ್ರಿ ಅಭ್ಯರ್ಥಿ ಬೆಂಬಲಕ್ಕೆ ನಿಲ್ಲುತ್ತೇನೆ ಎಂದು ಸುಮಲತಾ ಅವರು ಹೇಳಿರುವುದನ್ನು ನಾನು ಸ್ವಾಗತಿಸುತ್ತೇನೆ. ಇಡೀ ರಾಜ್ಯಕ್ಕೆ ಒಂದು ಒಳ್ಳೆಯ ಸಂದೇಶ ನೀಡಿದ್ದಾರೆ. ಬಿಜೆಪಿ ಅವರ ಜೊತೆಯಲ್ಲಿ ಇರಲಿದೆ ಎಂದರು.

ಯದುವೀರ್‌ಗೆ ಕರಿ ಕಂಬಳಿ ಹೊದಿಸಿ ಸನ್ಮಾನ

ಬಿ.ವೈ.ವಿಜಯೇಂದ್ರ, ಯದುವೀರ್ ಅವರನ್ನು ಆರತಿ ಎತ್ತಿ ನಿವಾಸಕ್ಕೆ ಬರಮಾಡಿಕೊಳ್ಳಲಾಯಿತು. ಬಳಿಕ ವಿಶ್ವನಾಥ್ ಯದುವೀರ್ ಅವರಿಗೆ ಕರಿ ಕಂಬಳಿ ಹೊದಿಸಿ ಸನ್ಮಾನಿಸಿದರು. ಇದೇ ವೇಳೆ ಮಾಜಿ ಎಂಎಲ್‌ಸಿ ಡಿ.ಮಾದೇಗೌಡರು ಯದುವೀರ್‌ಗೆ ಮೈಸೂರು ಪೇಟ ತೊಡಿಸಿದರು. ವಿಜಯೇಂದ್ರ ಅವರನ್ನು ವಿಶ್ವನಾಥ್ ಪುತ್ರ ಅಮಿತ್ ದೇವರಹಟ್ಟಿ ಸನ್ಮಾನಿಸಿದರು. ನಂತರ ವಿಶ್ವನಾಥ್ ಮತ್ತು ಯದುವೀರ್ ಅವರಿಗೆ ವಿಜಯೇಂದ್ರ ಮೈಸೂರು ಪಾಕ್ ತಿನ್ನಿಸಿದರು.

ಕೇರಳದ ವಯನಾಡ್ ಲೋಕಸಭಾ ಕ್ಷೇತ್ರದಿಂದ ರಾಹುಲ್ ಗಾಂಧಿ ನಾಮಪತ್ರ ಸಲ್ಲಿಕೆ



ವಯನಾಡ್: ಕೇರಳದ ವಯನಾಡ್ ಲೋಕಸಭಾ ಕ್ಷೇತ್ರದಿಂದ ಕಾಂಗ್ರೆಸ್ ನಾಯಕ ರಾಹುಲ್ ಗಾಂಧಿ ಅವರು ಬುಧವಾರ ನಾಮಪತ್ರ ಸಲ್ಲಿಸಿದರು. ರಾಹುಲ್ ಗಾಂಧಿ ಅವರು ತಮ್ಮ ಸಹೋದರಿ ಪ್ರಿಯಾಂಕಾ ಗಾಂಧಿ ಮತ್ತು ಎಐಸಿಸಿ ಪ್ರಧಾನ ಕಾರ್ಯದರ್ಶಿ ಕೆ.ಸಿ. ವೇಣುಗೋಪಾಲ್ ಸೇರಿದಂತೆ ಪಕ್ಷದ ಇತರ ಹಿರಿಯ ನಾಯಕರೊಂದಿಗೆ ಚುನಾವಣಾಧಿಕಾರಿಯೂ ಆಗಿರುವ ವಯನಾಡ್ ಜಿಲ್ಲಾಧಿಕಾರಿಗೆ ಇಂದು ನಾಮಪತ್ರ ಸಲ್ಲಿಸಿದರು.

ಇಂದು ಬೆಳಗ್ಗೆ ಹೆಲಿಕಾಪ್ಟರ್ ಮೂಲಕ ವಯನಾಡಿಗೆ ಆಗಮಿಸಿದ ಅವರು, ನಾಮಪತ್ರ ಸಲ್ಲಿಸುವ ಮುನ್ನ ಇಲ್ಲಿನ ಕಲ್ಪೆಟ್ಟಾದಿಂದ ಸಿವಿಲ್ ಸ್ಟೇಷನ್‌ವರೆಗೆ ರೋಡ್ ಶೋ ನಡೆಸಿದರು.

ರೋಡ್ ಶೋ ನಂತರ ಸಾರ್ವಜನಿಕರನ್ನುದ್ದೇಶಿಸಿ ಮಾತನಾಡಿದ ಕಾಂಗ್ರೆಸ್ ನಾಯಕ, ರಾಜ್ಯದ ಹೈರೇಂಜ್ ಜಿಲ್ಲೆಯಲ್ಲಿ ಅನೇಕ ಜೀವಗಳನ್ನು ಬಲಿತೆಗೆದುಕೊಂಡಿರುವ ಮಾನವ–ಪ್ರಾಣಿ ಸಂಘರ್ಷ ಸೇರಿದಂತೆ ಎಲ್ಲಾ ವಿಷಯಗಳಲ್ಲೂ ತಾವು ವಯನಾಡಿನ ಜನರೊಂದಿಗೆ ಇರುವುದಾಗಿ ಹೇಳಿದರು.

ವಯನಾಡ್ ನನ್ನ ಮನೆ ಇದ್ದಂತೆ, ಇಲ್ಲಿನ ಜನರೇ ನನ್ನ ಕುಟುಂಬ. ವಯನಾಡ್ ಜನತೆಯ ಅಚಲ ಬೆಂಬಲಕ್ಕಾಗಿ ನಾನು ಅವರಿಗೆ ಕೃತಜ್ಞನಾಗಿದ್ದೇನೆ. ನಾವು 'ನ್ಯಾಯ್' ನ ಹೊಸ ಯುಗಕ್ಕೆ ಕಾಲಿಡುತ್ತಿರುವಾಗ, ನಿಮ್ಮಲ್ಲಿ ಪ್ರತಿಯೊಬ್ಬರಿಗೂ ನನ್ನ ಸಾಮರ್ಥ್ಯಕ್ಕೆ ತಕ್ಕಂತೆ ಸೇವೆ ಸಲ್ಲಿಸುವ ನನ್ನ ಸಮರ್ಪಣೆಯನ್ನು ಪುನರುಚ್ಚರಿಸಲು ಬಯಸುತ್ತೇನೆ" ಎಂದು ರಾಹುಲ್ ಗಾಂಧಿ ಹೇಳಿದರು.

ನಾನು ಏನೇ ಮಾತನಾಡಿದ್ದರೂ ಸಂದರ್ಭೋಚಿತವಾಗಿ ಟೀಕೆ ಮಾಡಿದ್ದೇನೆ ; ಎಂಎಲ್‌ಸಿ ಎ.ಹೆಚ್.ವಿಶ್ವನಾಥ್

ಬಿಜೆಪಿಯಲ್ಲೇ ಉಳಿದುಕೊಳ್ಳುತ್ತೀರಾ ಎಂಬುದಕ್ಕೆ 'ಕಾಲಾಯ ತಸ್ಮೈ ನಮಃ' ಎಂದ ಹಳ್ಳಿಹಕ್ಕಿ

ಮೈಸೂರು,ಏ.3(ಪಿಎಂ)– ಒಂದು ಹಂತಕ್ಕೆ ಬಿಜೆಪಿಯಿಂದ ಅಂತರ ಕಾಯ್ದುಕೊಂಡೇ ಇದ್ರಿ. ಬಿ.ವೈ.ವಿಜಯೇಂದ್ರ ಆದಿಯಾಗಿ ಬಹುತೇಕರ ವಿರುದ್ಧ ಮಾತನಾಡಿದ್ರಿ ಎಂಬುದಕ್ಕೆ ಪ್ರತಿಕ್ರಿಯಿಸಿದ ಎಂಎಲ್‌ಸಿ ಎ.ಹೆಚ್.ವಿಶ್ವನಾಥ್, ಹೌದು, ಸಂದರ್ಭೋಚಿತವಾಗಿ ಟೀಕೆ ಟಿಪ್ಪಣಿ ಆಗಿದ್ದು, ಅದು ರಾಜಕಾರಣದಲ್ಲಿ ಸಹಜ. ಹಲವಾರು ರೀತಿಯಲ್ಲಿ ನಾನು ವಾಸ್ತವಿಕವಾಗಿ ಮಾತನಾಡಿದ್ದೇನೆ. ಇಷ್ಯೂಸ್ ಇದ್ದಾಗ ಕಾಂಗ್ರೆಸ್ ಪರವಾಗಿ ಮಾತನಾಡಿದ್ದೇನೆ. ಆಗ ಹೇಳಿದ್ದನ್ನು ಈಗ ನಾನು ನಿರಾಕರಿಸುತ್ತಿಲ್ಲ ಎಂದು ಹೇಳಿದರು.

ಬುಧವಾರ ತಮ್ಮ ಪುತ್ರ ಅಮಿತ್ ದೇವರಹಟ್ಟಿ ನಿವಾಸದಲ್ಲಿ ಮಾತನಾಡಿದ ಅವರು, 47 ವರ್ಷಗಳ ನಂತರ ಒಕ್ಕಲಿಗ ಅಭ್ಯರ್ಥಿಗೆ ಕಾಂಗ್ರೆಸ್ ಟಿಕೆಟ್ ನೀಡಲಾಗಿದೆ ಎಂದು ಹೇಳುತ್ತಿರುವ ಬಗ್ಗೆ ಪ್ರತಿಕ್ರಿಯಿಸಿ, ಜಾತಿ ಪಟ್ಟ ಕಟ್ಟಲು ಹೋಗಬೇಡಿ. ಮಹಾರಾಜರು ಯಾವುದೇ ಜಾತಿ ಮುಂದಿಟ್ಟುಕೊಂಡು ಕಾರ್ಯಕ್ರಮ ಕೊಡಲಿಲ್ಲ. ಜಾತಿ ಮೀರಿದವರು ಯದುವಂಶದವರು. ಒಂದು ಜಾತಿಗೆ ಅವಮಾನ ಮಾಡಲು ಹೋಗಬೇಡಿ ಎಂದು ಅಸಮಾಧಾನ ವ್ಯಕ್ತಪಡಿಸಿದರು.

ಬೇರೆ ಬೇರೆ ಕ್ಷೇತ್ರಗಳಿಗೆ ಬಿಜೆಪಿ ಪರ ಪ್ರಚಾರಕ್ಕೆ ಹೋಗುತ್ತೀರಾ? ಎಂಬುದಕ್ಕೆ ಉತ್ತರಿಸಿ, ನಾನು ಬಿಜೆಪಿ ಎಂಎಲ್‌ಸಿ ಇದ್ದೀನಿ. ಹೌದು, ಅದು ನನ್ನ ಕರ್ತವ್ಯ ಕೂಡ ಎಂದರು. ನೀವು ಬಹುತೇಕ ಕಾಂಗ್ರೆಸ್‌ಗೆ ಮರಳಿದ್ದೀರಿ ಎನ್ನುವಂತಿತ್ತು ಎಂಬುದಕ್ಕೆ ಪ್ರತಿಕ್ರಿಯಿಸಿ, ಹಾಗೆಂದು ತಾವು ಭಾವಿಸಿದ್ರಿ ಎಂದರಲ್ಲದೆ, ನಾನು ಕಾಂಗ್ರೆಸ್ ಟಿಕೆಟ್ ಕೇಳಿದ್ದೂ ಹೌದು. ಇಲ್ಲವೆಂದಿಲ್ಲ. ಒಂದು ವೇಳೆ ಯದುವೀರರು ಕಾಂಗ್ರೆಸ್ ಅಭ್ಯರ್ಥಿ ಆಗಿದ್ದರೂ ಇಂದು ನಾನು ಹೇಳಿದ ನಿಲುವಿನಲ್ಲಿ (ಅವಿರೋಧ ಆಯ್ಕೆ) ಯಾವುದೇ ಬದಲಾವಣೆ ಇರುತ್ತಿರಲಿಲ್ಲ ಎಂದು ಮತ್ತೊಂದು ಪ್ರಶ್ನೆಗೆ ಪ್ರತಿಕ್ರಿಯಿಸಿದರು.

ಬಿಜೆಪಿಯಲ್ಲೇ ಉಳಿದುಕೊಳ್ಳುತ್ತೀರಾ ಎಂಬುದಕ್ಕೆ ಪ್ರತಿಕ್ರಿಯಿಸಿ, ಕಾಲಾಯ ತಸ್ಮೈ ನಮಃ ಎಂದರು. ಸಿದ್ದರಾಮಯ್ಯನವರು ಗೆದ್ದೇ ಗೆಲ್ಲುತ್ತೇವೆ ಎಂದು ಹೇಳುತ್ತಿದ್ದಾರೆ ಎಂಬುದಕ್ಕೆ ಪ್ರತಿಕ್ರಿಯಿಸಿ, ಗೆದ್ದೇ ಗೆಲ್ಲುತ್ತೇವೆ ಎಂಬುದು ನಮ್ಮ ಅಹಂಕಾರವಾಗಲಿದೆ. ಮತದಾರ ಗೆಲ್ಲಿಸುತ್ತಾನೆ ಎಂಬುದು ಪ್ರೀತಿ–ವಿಶ್ವಾಸದ ಸಂಕೇತ ಎಂದರು.


ಟಿಕೆಟ್ ಸಿಗುವಲ್ಲಿ ದೇವೇಗೌಡರ ಪಾತ್ರದ ಬಗ್ಗೆ ಯದುವೀರರ ಜಾಣ್ಮೆ ಉತ್ತರ

ಮೈಸೂರು,ಏ.3(ಪಿಎಂ)– ತಮಗೆ ಮೈಸೂರು–ಕೊಡಗು ಲೋಕಸಭಾ ಕ್ಷೇತ್ರದ ಬಿಜೆಪಿ ಟಿಕೆಟ್ ದೊರೆಯುವಲ್ಲಿ ಮಾಜಿ ಪ್ರಧಾನಿ ಹೆಚ್.ಡಿ.ದೇವೇಗೌಡರ ಪಾತ್ರ ಇತ್ತೇ ಎಂಬುದಕ್ಕೆ ಪ್ರತಿಕ್ರಿಯಿಸಿದ ಯದುವೀರ ಕೃಷ್ಣದತ್ತ ಚಾಮರಾಜ ಒಡೆಯರ್, ಆ ರೀತಿಯ ಯಾವುದೇ ಬೆಳವಣಿಗೆ ಆಗಿಲ್ಲ ಎಂದು ಹೇಳಿದರು.

ಎಂಎಲ್‌ಸಿ ವಿಶ್ವನಾಥ್ ಅವರನ್ನು ಬುಧವಾರ ಭೇಟಿ ಮಾಡಿದ ಸಂದರ್ಭದಲ್ಲಿ ಮಾಧ್ಯಮದವರಿಗೆ ಅವರು ಪ್ರತಿಕ್ರಿಯೆ ನೀಡಿದರು. ಹೀಗೆ ಹೇಳುವ ಮೂಲಕ ಕಾಂಗ್ರೆಸ್ಸಿಗರ ಹೇಳಿಕೆಯನ್ನು ತಳ್ಳಿ ಹಾಕಿದರು.

ಯದುವೀರ್ ಅವರು ಯಾರಿಗೂ ಅಂತಹ ಪರಿಚಯ ಇಲ್ಲವೆಂದು ಕಾಂಗ್ರೆಸ್‌ನವರು ಹೇಳುತ್ತಿದ್ದಾರೆ ಎಂಬ ಬಗ್ಗೆ ಪ್ರತಿಕ್ರಿಯಿಸಿ, ಕಳೆದ 9 ವರ್ಷಗಳಿಂದ ಮೈಸೂರು ಮತ್ತು ಕೊಡಗು ಜನ ನನ್ನನ್ನು ನೋಡಿದ್ದಾರೆ. ಹಲವಾರು ಕಾರ್ಯಕ್ರಮಗಳಲ್ಲಿ ಭಾಗಿಯಾಗಿದ್ದೇನೆ. ಜೊತೆಗೆ ಇಡೀ ಕರ್ನಾಟಕದಲ್ಲಿಯೂ ಎಷ್ಟೋ ಕಾರ್ಯಕ್ರಮಗಳಲ್ಲಿ ಜನ ನನ್ನನ್ನು ನೋಡಿದ್ದು, ನನ್ನ ಪರಿಚಯವಿದೆ ಎಂದರು.

> "ಮಹಾರಾಜರು ಎಲ್ಲಾ ಸಮುದಾಯಗಳಿಗೂ ನ್ಯಾಯ ಕೊಟ್ಟಿದ್ದಾರೆ. ಬಡವರು, ರೈತರ ಶ್ರೇಯೋಭಿವೃದ್ಧಿಗೆ ಶ್ರಮಿಸಿದ್ದಾರೆ. ಹಾಗಾಗಿ ಯದುವೀರರಿಗೆ ಪಕ್ಷಾತೀತವಾಗಿ ಬೆಂಬಲ ನೀಡಬೇಕೆಂದು ಎ.ಹೆಚ್.ವಿಶ್ವನಾಥ್ ಅರ್ಥಪೂರ್ಣವಾಗಿ ಹೇಳಿದ್ದಾರೆ. ಇದು ನಮ್ಮ ಅಭ್ಯರ್ಥಿ ಯದುವೀರರಿಗೆ ದೊಡ್ಡ ಶಕ್ತಿ ಕೊಟ್ಟಂತಾಗಿದೆ. ಯದುವೀರರು ದೊಡ್ಡ ಅಂತರದಲ್ಲಿ ಗೆಲ್ಲುತ್ತಾರೆ ಎಂಬ ಸಂಪೂರ್ಣ ವಿಶ್ವಾಸವು ನನಗೆ ಮತ್ತು ನಮ್ಮ ಕಾರ್ಯಕರ್ತರು ಇಬ್ಬರಿಗೂ ಇದೆ.
> –ಬಿ.ವೈ.ವಿಜಯೇಂದ್ರ



ಎಂ. ಲಕ್ಷ್ಮಣನ ಒಕ್ಕಲಿಗ ಪ್ರಮಾಣಪತ್ರ ಮುಕ್ತ ವಿವಿಯಲ್ಲಿ ಸಿಗುವ ಪ್ರಮಾಣ ಪತ್ರವೇ?...!

ಒಕ್ಕಲಿಗ ಕಾರ್ಡ್ ಪ್ಲೇ ಬಗ್ಗೆ ಸಂಸದ ಪ್ರತಾಪ್ ಸಿಂಹ ಗೇಲಿ

ಮೈಸೂರು, ಏ.3(ಬಿಎಲ್‌ಯು)– ಕಾಂಗ್ರೆಸ್ ಅಭ್ಯರ್ಥಿ ಲಕ್ಷ್ಮಣ ನಾನು ಒಕ್ಕಲಿಗ ಎಂದು ಪ್ರಮಾಣ ಪತ್ರ ಹಿಡಿದುಕೊಂಡು ಬಂದಿದ್ದು, ಇದು ಕರ್ನಾಟಕ ಮುಕ್ತ ವಿಶ್ವವಿದ್ಯಾನಿಲಯ (ಕೆಎಸ್‌ಓಯು)ದಲ್ಲಿ ಸಿಗುವ ಪ್ರಮಾಣ ಪತ್ರವೇ ಎಂದು ಸಂಸದ ಪ್ರತಾಪ್ ಸಿಂಹ ಗೇಲಿ ಮಾಡಿದ್ದಾರೆ.



ಮೈಸೂರಿನ ಸಿದ್ಧಾರ್ಥನಗರದ ನೂತನ ಜಿಲ್ಲಾಧಿಕಾರಿ ಕಚೇರಿಯಲ್ಲಿ ಇಂದು ಮೈಸೂರು–ಕೊಡಗು ಲೋಕಸಭಾ ಕ್ಷೇತ್ರದ ಬಿಜೆಪಿ ಅಭ್ಯರ್ಥಿ ಯದುವೀರ್ ನಾಮಪತ್ರ ಸಲ್ಲಿಸಿದ ನಂತರ ಪತ್ರಕರ್ತರ ಜೊತೆ ಮಾತನಾಡಿದ ಅವರು, ಒಕ್ಕಲಿಗರನ್ನು ಇಷ್ಟು ದಿನ ತುಚ್ಛವಾಗಿ ಬೈಯ್ದು, ಹೊಲಸು ಬಾಯಿಯ ವ್ಯಕ್ತಿ ಈಗ ಕಾಂಗ್ರೆಸ್ ಅಭ್ಯರ್ಥಿಯಾಗಿದ್ದಾರೆ ಎಂದು ಟೀಕಿಸಿದರು.

ಒಕ್ಕಲಿಗರು ಅಂದರೆ ನೇರವಂತಿಕೆ, ಗಡಸು ಸ್ವಭಾವ ಇರುತ್ತದೆ. ಆದರೆ ಕಾಂಗ್ರೆಸ್ ಅಭ್ಯರ್ಥಿ ಲಕ್ಷ್ಮಣನಿಗೆ ಇದರಲ್ಲಿ ಯಾವುದಾದರೊಂದು ಗುಣ ಲಕ್ಷಣ ಇದೆಯೇ ಎಂದು ಪ್ರಶ್ನಿಸಿದರು.

ಚುನಾವಣೆಯಲ್ಲಿ ಗೆಲ್ಲಲು ಮೊದಲು ಒಳ್ಳೆಯ ಅಭ್ಯರ್ಥಿ ಇರಬೇಕು. ಆದ ಕಾರಣ ಮೊದಲು ಒಳ್ಳೆಯ ಅಭ್ಯರ್ಥಿಯನ್ನು ಕಣಕ್ಕಿಳಿಸಿ.

ನಾಮಪತ್ರ ಸಲ್ಲಿಸಲು ಇನ್ನು ಒಂದು ದಿನ ಬಾಕಿ ಇರುವ ಕಾರಣ ಈ ಕೆಲಸ ಮಾಡಿ. ತರುವಾಯ ಗೆಲ್ಲುವುದಕ್ಕೆ ಒಕ್ಕಲಿಗ ಕಾರ್ಡ್ ಪ್ಲೇ ಮಾಡುವಿರಂತೆ ಎಂದು ಸಲಹೆ ನೀಡಿದರು.

ದೇವೇಗೌಡರಿಗೆ ನಾಯಕರನ್ನು ಬೆಳೆಸಿ ಗೊತ್ತಿದೆಯೇ ಹೊರತು, ತುಳಿಯುವುದು ಗೊತ್ತಿಲ್ಲ

ಮಾಜಿ ಪ್ರಧಾನಮಂತ್ರಿ ಹೆಚ್.ಡಿ.ದೇವೇಗೌಡರಿಗೆ ನಾಯಕರನ್ನು ಬೆಳೆಸಿ ಗೊತ್ತಿದೆಯೇ ಹೊರತು, ತುಳಿಯುವುದು ಗೊತ್ತಿಲ್ಲ ಎಂದು ಸಂಸದ ಪ್ರತಾಪ್ ಸಿಂಹ ಹೇಳಿದರು. ಹೆಚ್.ಡಿ.ದೇವೇಗೌಡರೇ ಪ್ರತಾಪ್ ಸಿಂಹರಿಗೆ ಟಿಕೆಟ್ ತಪ್ಪಿಸಿದ್ದು ಎಂಬ ಸಚಿವ ವೆಂಕಟೇಶ್ ಹೇಳಿಕೆಗೆ ತಿರುಗೇಟು ನೀಡಿದ ಅವರು, ನಿಮ್ಮನ್ನು ರಾಜಕೀಯವಾಗಿ ಬೆಳೆಸಿ, ಶಕ್ತಿ ತುಂಬಿದ ದೇವೇಗೌಡರ ಬಗ್ಗೆ ಅನ್ನ ತಿನ್ನುವ ಬಾಯಲ್ಲಿ ಹೀಗೆಲ್ಲಾ ಮಾತನಾಡಬೇಡಿ ವೆಂಕಟೇಶಣ್ಣ. ಇಂತಹ ನಿಮ್ಮ ಹೇಳಿಕೆಗಳಿಂದ ನಿಮ್ಮ ಮೇಲೆ ಇದ್ದ ಗೌರವ ಮರೆಯಾಗಿದೆ ಎಂದು ಪ್ರತಾಪ್ ಸಿಂಹ ಕಿಡಿಕಾರಿದರು.

ಬಿಜೆಪಿ ಟಿಕೆಟ್ ಹಂಚಿಕೆ ಸಂದರ್ಭದಲ್ಲಿ ನಾನು ದೇವೇಗೌಡರನ್ನು ಭೇಟಿ ಮಾಡಲು ಅವರ ಮನೆಗೆ ಹೋಗಿದ್ದೆ. ಆ ಸಮಯದಲ್ಲಿ ನಿಖಿಲ್ ಕುಮಾರಸ್ವಾಮಿ ಕೂಡ ಇದ್ದರು. ಆ ವೇಳೆ ಒಂದು ಗಂಟೆ ಕಾಲ ಕಾದು ಅಮಿತ್ ಶಾ ಜೊತೆ ಫೋನ್‌ನಲ್ಲಿ ಮಾತನಾಡಿ, ನನಗೆ ಟಿಕೆಟ್ ನೀಡುವಂತೆ ಶಿಫಾರಸು ಮಾಡಿದರು ಎಂದು ತಿಳಿಸಿದರು. ನನಗೆ ಟಿಕೆಟ್ ನೀಡುವಂತೆ ಶಿಫಾರಸು ಮಾಡಿದ ದೇವೇಗೌಡರು, ಟಿಕೆಟ್ ತಪ್ಪಿಸುತ್ತಾರೆಯೇ ಎಂದು ಪ್ರಶ್ನಿಸಿದ ಪ್ರತಾಪ್ ಸಿಂಹ, ಸಚಿವ ವೆಂಕಟೇಶ್ ಇನ್ನು ಮುಂದಾದರೂ ಇಂತಹ ಹೇಳಿಕೆ ಕೊಡುವುದನ್ನು ನಿಲ್ಲಿಸಬೇಕು ಎಂದು ಮತ್ತೊಮ್ಮೆ ಸಲಹೆ ನೀಡಿದರು.

ಸಿದ್ದರಾಮಯ್ಯ ಬಗ್ಗೆ ನನಗೆ ವೈಯಕ್ತಿಕವಾಗಿ ಯಾವುದೇ ದ್ವೇಷವಿಲ್ಲ. ಸೈದ್ಧಾಂತಿಕ ಭಿನ್ನಾಭಿಪ್ರಾಯಗಳಿವೆ ಅಷ್ಟೇ ಎಂದು ಪ್ರತಾಪ್ ಸಿಂಹ ಸ್ಪಷ್ಟಪಡಿಸಿದರು.

ದಲಿತರು, ಬಡವರು, ಹಿಂದುಳಿದವರು, ಅಲ್ಪಸಂಖ್ಯಾತರು, ಮಹಿಳೆಯರು

ಬಿಜೆಪಿ ಕಡೆ ತಲೆ ಹಾಕಬೇಡಿ

- ಮುಖ್ಯಮಂತ್ರಿ ಸಿದ್ದರಾಮಯ್ಯ ಕಿವಿಮಾತು
- ಜಾತಿ ವ್ಯವಸ್ಥೆ ಇರೋವರೆಗೂ ಮೀಸಲಾತಿ ಇರಲೇಬೇಕು
- ಮೈಸೂರು ಕಾಂಗ್ರೆಸ್ ಕಚೇರಿಯಲ್ಲಿ ಪರಿಶಿಷ್ಟ ಜಾತಿ, ಅಲ್ಪಸಂಖ್ಯಾತ ಮುಖಂಡರ ಸಭೆ; ಪಕ್ಷ ಸೇರ್ಪಡೆ ಕಾರ್ಯಕ್ರಮ

ಮೈಸೂರು, ಏ.3(ಎಂಕೆ)– ಧರ್ಮ, ಜಾತಿ ಮತ್ತು ಭಾಷೆಯ ಆಧಾರದ ಮೇಲೆ ಜನರನ್ನು ವಿಂಗಡಣೆ ಮಾಡುವ ಬಿಜೆಪಿ, ಕೇವಲ ಕಮ್ಯೂನಲ್ ಪಾರ್ಟಿಯಷ್ಟೇ ಎಲ್ಲಾ ವರ್ಗದವರ ವಿರೋಧಿ ಪಕ್ಷವೂ ಆಗಿದೆ. ಬಿಜೆಪಿಯೊಂದಿಗೆ ಸೇರಿರುವ ಜೆಡಿಎಸ್ ಕೂಡ ಒಂದು ಕೋಮುವಾದಿ ಪಕ್ಷವಾಗಿದ್ದು, ದಲಿತರು, ಬಡವರು, ಹಿಂದುಳಿದ, ಅಲ್ಪಸಂಖ್ಯಾತರು ಹಾಗೂ ಮಹಿಳೆಯರು ಯಾವುದೇ ಕಾರಣಕ್ಕೂ ಬಿಜೆಪಿ ಮತ್ತು ಜೆಡಿಎಸ್ ಕಡೆ ತಲೆ ಕೂಡ ಹಾಕಬಾರದು ಎಂದು ಮುಖ್ಯಮಂತ್ರಿ ಸಿದ್ದರಾಮಯ್ಯ ಹೇಳಿದರು.

ನಗರದ ಜೆಎಲ್‌ಬಿ ರಸ್ತೆಯಲ್ಲಿರುವ ಕಾಂಗ್ರೆಸ್ ಕಚೇರಿಯಲ್ಲಿ ಪರಿಶಿಷ್ಟ ಜಾತಿ ಹಾಗೂ ಅಲ್ಪಸಂಖ್ಯಾತ ವಿಭಾಗದ ಮುಖಂಡರು, ಕಾರ್ಯಕರ್ತರ ಸಭೆ ಹಾಗೂ ಪಕ್ಷ ಸೇರ್ಪಡೆ ಕಾರ್ಯಕ್ರಮನ್ನುದ್ದೇಶಿಸಿ ಮಾತನಾಡಿದ ಅವರು, ನಮ್ಮದು ಜಾತ್ಯಾತೀತ ರಾಷ್ಟ್ರ. ಅನೇಕ ಜಾತಿ–ಧರ್ಮಗಳಿದ್ದು, ನಾವು ಜಾತ್ಯಾತೀತ ತತ್ವವನ್ನು ಒಪ್ಪಿಕೊಂಡಿದ್ದೇವೆ. ಮುಖ್ಯವಾಗಿ ನಾವೆಲ್ಲಾ ಮನುಷ್ಯರು. ವೈವಿಧ್ಯತೆಯಲ್ಲಿ ಏಕತೆಯನ್ನು ಕಾಣುತ್ತೇವೆ. ರಾಷ್ಟ್ರಕವಿ ಕುವೆಂಪು ಅವರು ಹೇಳಿದಂತೆ ನಮ್ಮದು ಸರ್ವಜನಾಂಗ ಶಾಂತಿಯ ತೋಟ ಎಂದರು.

ಬಿಜೆಪಿ ಎಂದಿಗೂ ಸಂವಿಧಾನ, ಸಾಮಾಜಿಕ ನ್ಯಾಯ ಹಾಗೂ ಮೀಸಲಾತಿ ವಿರೋಧಿ. ಎಲ್ಲಿಯವರೆಗೆ ಜಾತಿ ವ್ಯವಸ್ಥೆ ಇರುತ್ತದೋ ಅಲ್ಲಿಯವರೆಗೂ ಮೀಸಲಾತಿ ಇದ್ದೇ ಇರಬೇಕು ಎಂದು ಡಾ.ಬಿ.ಆರ್.ಅಂಬೇಡ್ಕರ್ ಅವರೇ ಹೇಳಿದ್ದಾರೆ. ಮೀಸಲಾತಿ ಎನ್ನುವುದು ಭಿಕ್ಷೆಯಲ್ಲ. ಅದು ಶೋಷಿತ ಸಮುದಾಯಗಳ ಹಕ್ಕು. ಸ್ವಾತಂತ್ರ್ಯ ಪೂರ್ವದಲ್ಲಿ ಓದುವ ಹಕ್ಕು ನಮಗೆ ಅಂದರೆ ಶೂದ್ರರಿಗೆ ಇತ್ತಾ? ಮಹಿಳೆಯರಿಗೆ ಇತ್ತಾ? ಪತಿ ಮೃತಪಟ್ಟ ತಕ್ಷಣ ಪತ್ನಿ ಕೂಡ ಬೆಂಕಿಗೆ ಆಹುತಿ ಆಗಬೇಕಿತ್ತು. ಇಂಥಾ ಮನುಸ್ಮೃತಿ ಪ್ರೇರಿತ ಅಮಾನವೀಯ ಪದ್ಧತಿ ರದ್ದಾಗಿದ್ದು ನಮ್ಮ ಸಂವಿಧಾನದಿಂದ. ಹೀಗಾಗಿ ಈ ಸಂವಿಧಾನ ಬದಲಾಯಿಸಿ ಮತ್ತೆ ಮನುಸ್ಮೃತಿ ತರಬೇಕು ಎನ್ನುವುದು ಬಿಜೆಪಿ ಹುನ್ನಾರ. ಇದನ್ನು ಸರಿಯಾಗಿ ಅರ್ಥ ಮಾಡಿಕೊಳ್ಳಿ ಎಂದು ಕರೆ ನೀಡಿದರು.


ಸೈದ್ಧಾಂತಿಕ ಸ್ಪಷ್ಟತೆ ಇರಬೇಕು: ಮೋದಿ ಪ್ರಧಾನಿಯಾದರೆ ದೇಶ ತೊರೆಯುತ್ತೇನೆ ಎಂದಿದ್ದ ದೇವೇಗೌಡರು ಈಗ ಮೋದಿಗೂ ತಮಗೂ ಅವಿನಾಭಾವ ಸಂಬಂಧ ಇದೆ ಎನ್ನುತ್ತಿದ್ದಾರೆ. ರಾಜಕಾರಣಿಯಾದವರಿಗೆ ಸೈದ್ಧಾಂತಿಕ ಸ್ಪಷ್ಟತೆ ಇರಬೇಕು. ಬಿಜೆಪಿ ಜೊತೆ ಸೇರಿರುವ ಜೆಡಿಎಸ್ ಕೂಡ ಒಂದು ಕೋಮುವಾದಿ ಪಾರ್ಟಿಯಾಗಿದ್ದು ಅವರಿಗೆ ಜಾತ್ಯಾತೀತ ಎಂದೇಳಿಕೊಳ್ಳುವ ನೈತಿಕತೆ ಇಲ್ಲ. ಜಾತ್ಯಾತೀತ ಎಂದುಕೊಂಡು ಆರ್‌ಎಸ್‌ಎಸ್ ಮತ್ತು ಬಿಜೆಪಿ ಸೇರಿಕೊಂಡಿದೆಯಲ್ಲಾ, ಇದನ್ನು ಟೀಕಿಸಬಾರದಾ? ಎಂದು ಲೇವಡಿ ಮಾಡಿದರು.

'ಜಾತ್ಯಾತೀತ' ಸೇರಿಸಿದ್ದು ನಾವೇ: ಜೆಡಿ(ಎಸ್)ಗೆ ಜಾತ್ಯಾತೀತ ಎಂದು ಸೇರಿಸಿದ್ದು ನಾವೇ. ಜನತಾದಳದಲ್ಲಿದ್ದ ಪ್ರಮುಖರ ಗುಂಪು ಬಿಜೆಪಿ ಜೊತೆ ಸೇರಿ ಸರ್ಕಾರ ರಚನೆ ಮಾಡಬೇಕು ಎಂದಾಗ ನಾವು ವಿರೋಧ ಮಾಡಿದೆವು. ಬಿಜೆಪಿ ಕೋಮುವಾದಿ ಪಕ್ಷ. ಹಾಗಾಗಿ ನಾವು ಬರಲ್ಲ ಎಂದು ನಾನು ದೇವೇಗೌಡರು, ಮಹದೇವಪ್ಪ ಸೇರಿದಂತೆ ಇನ್ನಿತರರು ಹೋಗಲ್ಲ ಎಂದು ತೀರ್ಮಾನ ಮಾಡಿದೆವು. ಆಗ ಜನತಾಳದಲ್ಲಿದ್ದವರು ಜೆಡಿಯು (ಜನತಾದಳ ಯುನೈಟೆಡ್) ಮಾಡಿಕೊಂಡು ಬಿಜೆಪಿ ಸೇರಿದರು. ನಾವು ಜನತಾದಳಕ್ಕೆ ಜಾತ್ಯಾತೀತ ಸೇರಿಸಿ ಜೆಡಿಎಸ್ ಎಂದು ಮಾಡಿದೆವು. ಜೆಡಿಎಸ್‌ನ ಸಂಸ್ಥಾಪಕ ಅಧ್ಯಕ್ಷನೂ ನಾನೇ ಆಗಿದ್ದೆ. ದೇವೇಗೌಡರು ರಾಷ್ಟ್ರೀಯ ಅಧ್ಯಕ್ಷರಾಗಿದ್ದರು ಎಂದು ಸ್ಮರಿಸಿದರು.

ಕೋಪ ಬರುತ್ತೆ: ಸಮಾಜವಾದಿ ಜನತಾ ಪಾರ್ಟಿಯಲ್ಲಿದ್ದ ದೇವೇಗೌಡರನ್ನು ಜನತಾದಳಕ್ಕೆ ಕರೆದುಕೊಂಡು ಬಂದಿದ್ದು, ರಾಮಕೃಷ್ಣ ಹೆಗಡೆಯವರು. ಆದರೆ ಅವರನ್ನೇ ಪಕ್ಷದಿಂದ ದೇವೇಗೌಡರು ಹೊರಹಾಕಿದರು. ದೇವೇಗೌಡರು ಹೇಗೆ ಪ್ರಧಾನಿಯಾದರು ಎಂಬ ವಿಚಾರ ಹೇಳೋದಕ್ಕೆ ಹೋಗಲ್ಲ. ಏಕೆಂದರೆ ದೇವೇಗೌಡರಿಗೆ ವಯಸ್ಸಾಗಿದೆ. ಅವರಿಗೆ ಬೇಗ ಕೋಪ ಬರುತ್ತೆ. ಈಗಾಗಲೇ ಸಿದ್ದರಾಮಯ್ಯನಿಗೆ ಗರ್ವ ಭಂಗ ಮಾಡ್ತಿನಿ ಎಂದಿದ್ದಾರೆ. ನನಗೆ ಗರ್ವನೇ ಇಲ್ಲ ಇನ್ನೂ ಭಂಗ ಎಲ್ಲಿಂದ ಮಾಡೋದು. ಈಗ ಕೋಮುವಾದಿಗಳೊಂದಿಗೆ ಸೇರಿಕೊಂಡಿದ್ದಾರೆ ಎಂದು ವ್ಯಂಗ್ಯವಾಡಿದರಲ್ಲದೆ ಜೆಡಿಎಸ್‌ನಿಂದ ನನ್ನನ್ನು ಹೊರಹಾಕಿದಾಗ ಬಿಜೆಪಿಯ ಕೆಲವರು ನನ್ನನ್ನು ರಾಷ್ಟ್ರಪತಿ, ಪ್ರಧಾನ ಮಂತ್ರಿ ಮಾಡ್ತೀನಿ ಬನ್ನಿ ಅಂದ್ರೂ ನಾನು ಕೋಮುವಾದಿ ಬಿಜೆಪಿ ಕಡೆ ತಲೆ ಹಾಕಲ್ಲ ಎಂದು ಸ್ಪಷ್ಟವಾಗಿ ಹೇಳಿದ್ದೆ ಎಂದರು.

ನಮ್ಮ ಸರ್ಕಾರ: ದಲಿತರ ಜನಸಂಖ್ಯೆಗೆ ಅನುಗುಣವಾಗಿ ಬಜೆಟ್‌ನಲ್ಲಿ ಹಣ ಮೀಸಲಿಡುವ ಕಾನೂನನ್ನು ಜಾರಿಗೆ ತಂದಿದ್ದು ಕಾಂಗ್ರೆಸ್. ಅಭಿವೃದ್ಧಿ ಹಣದಲ್ಲಿ ಶೇ 24.1 ರಷ್ಟು ಹಣ ಮೀಸಲಿಡಬೇಕು ಎನ್ನುವ ಕಾನೂನನ್ನು ಜಾರಿ ಮಾಡಿದ್ದು ನಮ್ಮ ಸರ್ಕಾರ. ಈ ಪ್ರಗತಿಪರ ಕಾನೂನನ್ನು ಇಡಿ ದೇಶದಲ್ಲಿ ಬಿಜೆಪಿಯ ಯಾವ ಸರ್ಕಾರವೂ ಜಾರಿ ಮಾಡಿಲ್ಲ. ಮಾಡಿರುವುದು ನಮ್ಮ ಕಾಂಗ್ರೆಸ್ ಸರ್ಕಾರ ಮಾತ್ರ. ಗುತ್ತಿಗೆಯಲ್ಲಿ ದಲಿತರಿಗೆ ಮೀಸಲಾತಿ ತಂದಿದ್ದು ನಮ್ಮ ಕಾಂಗ್ರೆಸ್ ಸರ್ಕಾರ. ಎಸ್‌ಸಿಪಿ/ಟಿಎಸ್‌ಪಿ ಕಾಯ್ದೆಯನ್ನು ಜಾರಿ ಮಾಡಿದ್ದು ಕಾಂಗ್ರೆಸ್ ಸರ್ಕಾರ. ಮಂಡಲ್ ವರದಿ, ಹಿಂದುಳಿದ ವರ್ಗಗಳಿಗೆ ಮೀಸಲಾತಿಯನ್ನು ವಿರೋಧಿಸಿದ್ದು ಇದೇ ಬಿಜೆಪಿ. ಹೀಗಾಗಿ ನಿಮ್ಮನ್ನು ಭಾವನಾತ್ಮಕವಾಗಿ ಕೆರಳಿಸಿ, ನಿಮ್ಮ ಬದುಕಿಗೆ ಕೊಳ್ಳಿ ಇಡುವವರ ಜತೆ ಸೇರದೆ, ಕಾಂಗ್ರೆಸ್ ಅಭ್ಯರ್ಥಿ ಎಂ.ಲಕ್ಷ್ಮಣ ಅವರನ್ನು ಗೆಲ್ಲಿಸಿ ಎಂದು ಕರೆ ನೀಡಿದರು.

ಸಮಾಜ ಕಲ್ಯಾಣ ಸಚಿವ ಹೆಚ್.ಸಿ. ಮಹದೇವಪ್ಪ, ಲೋಕೋಪಯೋಗಿ ಸಚಿವ ಸತೀಶ್ ಜಾರಕಿಹೊಳಿ, ರೇಷ್ಮೆ ಸಚಿವ ಕೆ.ವೆಂಕಟೇಶ್, ಕೆಪಿಸಿಸಿ ಕಾರ್ಯಾಧ್ಯಕ್ಷರಾದ ತನ್ವೀರ್ ಸೇಠ್, ಕಾಂಗ್ರೆಸ್ ನಗರಾಧ್ಯಕ್ಷ ಆರ್.ಮೂರ್ತಿ, ಜಿಲ್ಲಾಧ್ಯಕ್ಷ ಡಾ.ಬಿ.ಜೆ.ವಿಜಯ್‌ಕುಮಾರ್, ವಿಧಾನ ಪರಿಷತ್ ಸದಸ್ಯ ಡಾ.ತಿಮ್ಮಯ್ಯ, ಮಾಜಿ ಸಚಿವರಾದ ಎಂ.ಶಿವಣ್ಣ, ಬಿ.ಸೋಮಶೇಖರ್, ಮಾಜಿ ಶಾಸಕ ಭಾರತೀ ಶಂಕರ್, ಕರ್ನಾಟಕ ವಸ್ತುಪ್ರದರ್ಶನ ಪ್ರಾಧಿಕಾರದ ಅಧ್ಯಕ್ಷ ಅಯೂಬ್ ಖಾನ್, ಮೈಸೂರು–ಕೊಡಗು ಲೋಕಸಭಾ ಅಭ್ಯರ್ಥಿ ಲಕ್ಷ್ಮಣ, ಕಾಂಗ್ರೆಸ್ ಪರಿಶಿಷ್ಟ ಜಾತಿ ವಿಭಾಗದ ರಾಜ್ಯಾಧ್ಯಕ್ಷ ಆರ್.ಧರ್ಮಸೇನಾ, ಮೈಸೂರು ನಗರಾಧ್ಯಕ್ಷ ಕೆ.ರಮೇಶ್, ಹಿಂದುಳಿದ ವರ್ಗಗಳ ವಿಭಾಗದ ಜಿಲ್ಲಾಧ್ಯಕ್ಷ ಎನ್.ಆರ್. ನಾಗೇಶ್ ಮತ್ತಿತರರು ಉಪಸ್ಥಿತರಿದ್ದರು.



ಮೈಸೂರಿನ ಕಾಂಗ್ರೆಸ್ ಕಚೇರಿಯಲ್ಲಿ ಬುಧವಾರ ಮುಖ್ಯಮಂತ್ರಿ ಸಿದ್ದರಾಮಯ್ಯ ಅವರ ಸಮ್ಮುಖದಲ್ಲಿ ನಗರ ಪಾಲಿಕೆ ಮಾಜಿ ಸದಸ್ಯರು ಕಾಂಗ್ರೆಸ್ ಸೇರ್ಪಡೆಗೊಂಡರು. ಸಚಿವರಾದ ಡಾ.ಹೆಚ್.ಸಿ.ಮಹದೇವಪ್ಪ, ಸತೀಶ್ ಜಾರಕಿಹೊಳಿ, ಕೆ.ವೆಂಕಟೇಶ್, ಕೆಪಿಸಿಸಿ ಕಾರ್ಯಾಧ್ಯಕ್ಷ ತನ್ವೀರ್ ಸೇಠ್, ಲೋಕಸಭಾ ಅಭ್ಯರ್ಥಿ ಎಂ.ಲಕ್ಷ್ಮಣ ಮತ್ತಿತರರಿದ್ದರು.

ನಗರಪಾಲಿಕೆ ಮಾಜಿ ಸದಸ್ಯರು ಕಾಂಗ್ರೆಸ್ ಸೇರ್ಪಡೆ...

ಮುಖ್ಯಮಂತ್ರಿ ಸಿದ್ದರಾಮಯ್ಯ ಅವರ ಸಮ್ಮುಖದಲ್ಲಿ ಮೈಸೂರು ನಗರಪಾಲಿಕೆ ಮಾಜಿ ಸದಸ್ಯರಾದ ರೇಷ್ಮಾ ಭಾನು, ಸಾಹುದ್ ಖಾನ್, ಶಫಿ ಅಹಮದ್, ಶೋಭಾ ಮೋಹನ್, ರಫೀಕ್, ಮುಖಂಡ ಹರೀಶ್ ಕುಮಾರ್ ಹಾಗೂ ಬಿಎಸ್ಪಿಯಿಂದ ಗೆದ್ದು ಪಾಲಿಕೆ ಸದಸ್ಯರಾಗಿದ್ದ ಪಲ್ಲವಿ ಬೇಗಂ ಅಧಿಕೃತವಾಗಿ ಕಾಂಗ್ರೆಸ್ ಸೇರ್ಪಡೆಯಾದರು. ಈ ವೇಳೆ ಎಲ್ಲರಿಗೂ ಕಾಂಗ್ರೆಸ್ ಪಕ್ಷದ ಶಾಲು ಹೊದಿಸಿ, ಬಾವುಟ ನೀಡಿ ಅಭಿನಂದಿಸಿ, ಪಕ್ಷಕ್ಕೆ ಬರಮಾಡಿಕೊಳ್ಳಲಾಯಿತು.

ನಿಗದಿತ ಸಮಯಕ್ಕೆ ಬರ ಪರಿಹಾರದ ವರದಿ ಸಲ್ಲಿಸಿದ್ದೇವೆ

ಇದು ಸುಳ್ಳಾದರೆ ನಾನು ರಾಜೀನಾಮೆ ನೀಡ್ತೇನೆ; ಇಲ್ಲದಿದ್ದರೆ ಅಮಿತ್ ಷಾ ರಾಜೀನಾಮೆ ನೀಡ್ತಾರಾ...

ಕೇಂದ್ರ ಗೃಹ ಸಚಿವರಿಗೆ ಸಿಎಂ ಸಿದ್ದರಾಮಯ್ಯ ಬಹಿರಂಗ ಸವಾಲು

- ಸತ್ಯದ ತಲೆ ಮೇಲೆ ಹೊಡೆದಂತೆ ಸುಳ್ಳು ಹೇಳ್ತಾರೆ
- ಮೋದಿ, ಷಾ ಭೇಟಿ ಮಾಡಿದ್ರೂ ಪ್ರಯೋಜನವಾಗಿಲ್ಲ
- ನಮ್ಮ ಹಣ ನಮಗೆ ಕೊಡಲು ಮೀನಾಮೇಷ
- ಇಂತಹವರಿಗೆ ಮತ ಹಾಕಬೇಕೇ ನೀವೇ ಹೇಳಿ...

ಮೈಸೂರು, ಏ.3(ಬಿಎಲ್‌ಯು)–ಬರ ಪರಿಹಾರದ ಬಗ್ಗೆ ಕೇಂದ್ರ ಸರ್ಕಾರಕ್ಕೆ ನಿಗದಿತ ಸಮಯಕ್ಕೆ ವರದಿ ಕೊಟ್ಟಿದ್ದು, ಇದು ಸುಳ್ಳಾದರೆ ನಾನು ರಾಜೀನಾಮೆ ನೀಡುವೆ, ಇಲ್ಲದಿದ್ದರೆ ಕೇಂದ್ರ ಗೃಹ ಸಚಿವ ಅಮಿತ್ ಶಾ ರಾಜೀನಾಮೆ ನೀಡುವರೇ ಎಂದು ಮುಖ್ಯಮಂತ್ರಿ ಸಿದ್ದರಾಮಯ್ಯ ಬಹಿರಂಗ ಸವಾಲು ಹಾಕಿದ್ದಾರೆ.



ಮೈಸೂರಿನ ಚಾಮುಂಡಿಬೆಟ್ಟದ ತಪ್ಪಲಿನ ಸುತ್ತೂರು ಶಾಖಾ ಮಠದಲ್ಲಿ ಇಂದು ಪತ್ರಕರ್ತರ ಜೊತೆ ಮಾತನಾಡಿದ ಅವರು, ಬರ ಪರಿಹಾರ ಪಡೆಯುವ ಸಂಬಂಧ ರಾಜ್ಯ ಸರ್ಕಾರ ಕೇಂದ್ರಕ್ಕೆ ನಿಗದಿತ ಸಮಯಕ್ಕೆ ವರದಿ ನೀಡಲಿಲ್ಲ ಎಂಬ ಅಮಿತ್ ಷಾ ಆರೋಪಕ್ಕೆ ಸಿದ್ದರಾಮಯ್ಯ ಹೀಗೆ ತಿರುಗೇಟು ನೀಡಿದ್ದಾರೆ.

ಡಿಸೆಂಬರ್ ತಿಂಗಳಿನಿಂದ ಇಲ್ಲಿ ತನಕ ಹಲವು ಬಾರಿ ವರದಿ ಕೊಟ್ಟಿದ್ದೇನೆ. ಕೇಂದ್ರ ಬರ ಅಧ್ಯಯನ ತಂಡ ಕೂಡ ರಾಜ್ಯಕ್ಕೆ ಭೇಟಿ ನೀಡಿ ಮಾಹಿತಿ ಕಲೆ ಹಾಕಿ ಅವರು ಕೂಡ ಕೇಂದ್ರ ಸರ್ಕಾರಕ್ಕೆ ವರದಿ ಸಲ್ಲಿಸಿದ್ದಾರೆ. ಇದರ ಮಧ್ಯೆ ಖುದ್ದು ನಾನೇ ಪ್ರಧಾನಮಂತ್ರಿ ನರೇಂದ್ರ ಮೋದಿ ಹಾಗೂ ಅಮಿತ್ ಶಾ ಭೇಟಿ ಮಾಡಿ ಬರ ಪರಿಹಾರದ ಹಣ ನೀಡುವಂತೆ ಮನವಿ ಮಾಡಿದ್ದೇನೆ. ಡಿಸೆಂಬರ್ 23 ರಂದು ಸಭೆ ಕರೆದು ಅಂತಿಮ ತೀರ್ಮಾನ ಮಾಡುತ್ತೇವೆ ಎಂದರು. ಆದರೆ ಈ ತನಕ ಪರಿಹಾರ ನೀಡುವ ಬಗ್ಗೆ ಸಕಾರಾತ್ಮಕ ಪ್ರಕ್ರಿಯೆಗಳು ವ್ಯಕ್ತವಾಗಿಲ್ಲ ಎಂದು ಆಪಾದಿಸಿದರು. ನಾವು ವರದಿ ಕೊಟ್ಟಿರುವ ಬಗ್ಗೆ ದಾಖಲೆಗಳನ್ನು ಬಿಡುಗಡೆ ಮಾಡಿ ವರದಿ ಸಲ್ಲಿಕೆಯನ್ನು ಸಾಬೀತು ಮಾಡುತ್ತೇನೆ. ಆಗ ಅದು ಸುಳ್ಳಾದರೆ ನಾನು ರಾಜೀನಾಮೆ ನೀಡುತ್ತೇನೆ. ಇಲ್ಲದಿದ್ದರೆ ಅಮಿತ್ ಷಾ ರಾಜೀನಾಮೆ ನೀಡುವರೇ ಎಂದು ಸಿದ್ದರಾಮಯ್ಯ ಸವಾಲು ಹಾಕಿದರು.


ಸತ್ಯದ ತಲೆ ಮೇಲೆ ಹೊಡೆದಂತೆ ಅಮಿತ್ ಷಾ ಸುಳ್ಳು ಹೇಳುತ್ತಿದ್ದಾರೆ. ಒಬ್ಬ ಕೇಂದ್ರ ಸಚಿವರಾಗಿ ಅದ್ಹೇಗೆ ಸುಳ್ಳು ಹೇಳುತ್ತಿದ್ದಾರೋ ಎಂದು ಆಶ್ಚರ್ಯದಿಂದ ಪ್ರಶ್ನಿಸಿದ ಸಿದ್ದರಾಮಯ್ಯ, ಈ ಕಾರಣದಿಂದಲೇ ನಾವು ಕೇಂದ್ರ ಸರ್ಕಾರಕ್ಕೆ ಕೊಟ್ಟ ಬರ ಪರಿಹಾರದ ವರದಿ ಸೇರಿದಂತೆ ಹಲವು ದಾಖಲಾತಿಗಳನ್ನು ಸುಪ್ರೀಂ ಕೋರ್ಟ್‌ಗೆ ನೀಡಿದ್ದೇವೆ. ಪರಿಹಾರದ ಹಣ ಕೊಡಿಸುವಂತೆ ಮನವಿ ಮಾಡಿದ್ದೇವೆ ಎಂದು ತಿಳಿಸಿದರು.

ಎನ್‌ಡಿಆರ್‌ಎಫ್ ನಿಯಮದ ಪ್ರಕಾರ ಬರ ಪರಿಸ್ಥಿತಿಯಲ್ಲಿ ಕೇಂದ್ರ ಸರ್ಕಾರ ರಾಜ್ಯಕ್ಕೆ ಪರಿಹಾರದ ಹಣ ನೀಡಬೇಕು. ಎನ್‌ಡಿಆರ್‌ಎಫ್ ಹಣ ಕೇಂದ್ರ ಸರ್ಕಾರದ ಹಣವಲ್ಲ, ನಮ್ಮ ರಾಜ್ಯ ಸರ್ಕಾರದ ಹಣ. ಇದರಲ್ಲಿ ಇಂತಿಷ್ಟು ಹಣ ಇರಬೇಕೆಂದು 15ನೇ ಹಣಕಾಸು ಆಯೋಗ ಕೂಡ ಶಿಫಾರಸು ಮಾಡಿದೆ. ಅದರಂತೆ ಅತಿವೃಷ್ಟಿ ಹಾಗೂ ಅನಾವೃಷ್ಟಿ ಸಮಯದಲ್ಲಿ ಎನ್‌ಡಿಆರ್ ಎಫ್ ಫಂಡ್‌ನಿಂದ ಹಣ ನೀಡಬೇಕು. ಆದರೆ ಕೇಂದ್ರ ಸರ್ಕಾರ ರಾಜ್ಯಗಳಿಗೆ ಹಣ ನೀಡದೆ ಹೀಗೆ ಸತಾಯಿಸುತ್ತಿದೆ ಎಂದು ಆಕ್ರೋಶ ವ್ಯಕ್ತಪಡಿಸಿದರು.

ಬರ ಪರಿಹಾರದ ಹಣ ನೀಡುವಂತೆ ಕಳೆದ 5 ತಿಂಗಳಿನಿಂದ ಹಲವು ವರದಿ ಕೊಟ್ಟು, ಪ್ರಧಾನಿ, ಗೃಹ ಸಚಿವರನ್ನು ಭೇಟಿ ಮಾಡಿದ್ದರೂ ಬಿಡಿಗಾಸು ಹಣ ನೀಡಿಲ್ಲ. ಇಂತಹವರಿಗೆ ಮತ ಹಾಕದೆ, ಜನರು ಬುದ್ಧಿ ಕಲಿಸಬೇಕು ಎಂದು ಸಿದ್ದರಾಮಯ್ಯ ಸಲಹೆ ನೀಡಿದರು.

ಒಕ್ಕಲಿಗರ ಬಗ್ಗೆ ಸಿದ್ದರಾಮಯ್ಯಗೆ ದಿಢೀರ್ ಪ್ರೀತಿ ಬಂದಿದೆ

- ಚುನಾವಣೆ ನಂತರ ಜಾತಿಗಣತಿ ವರದಿ ಬಿಡುಗಡೆ ಖಚಿತ
- ಜೆಡಿಎಸ್ ಸಂಘಟನೆಗೆ ಸಿದ್ದರಾಮಯ್ಯ ಏನೂ ಮಾಡಿಲ್ಲ
- ಇವರಂತೆ ನಾವು ಗರ್ವದ ಮಾತಾಡಲ್ಲ
- ಚುನಾವಣೆ ನಂತರ ಕಾಂಗ್ರೆಸ್ ಉಳಿವು ಕಷ್ಟ



ಮೈಸೂರು, ಏ.3(ಬಿಎಲ್‌ಯು)– ಒಕ್ಕಲಿಗರ ಬಗ್ಗೆ ಸದಾ ಅಗೌರವದಿಂದ ಮಾತನಾಡುತ್ತಿದ್ದ ಮುಖ್ಯಮಂತ್ರಿ ಸಿದ್ದರಾಮಯ್ಯರಿಗೆ ಈಗ ಒಕ್ಕಲಿಗರ ಬಗ್ಗೆ ದಿಢೀರ್ ಪ್ರೀತಿ ಬಂದಿದೆ ಎಂದು ಮಾಜಿ ಮುಖ್ಯಮಂತ್ರಿ ಹೆಚ್.ಡಿ.ಕುಮಾರಸ್ವಾಮಿ ಲೇವಡಿ ಮಾಡಿದ್ದಾರೆ.

ಮೈಸೂರಿನ ರ‍್ಯಾಡಿಸನ್ ಬ್ಲೂ ಹೋಟೆಲ್‌ನಲ್ಲಿ ಇಂದು ಪತ್ರಕರ್ತರ ಜೊತೆ ಮಾತನಾಡಿದ ಅವರು, ಮೈಸೂರಿನಲ್ಲಿ ನಿನ್ನೆ ಒಕ್ಕಲಿಗ ಸಮುದಾಯದ ಬಗ್ಗೆ ಸಿದ್ದರಾಮಯ್ಯ ಪ್ರೀತಿಯ ಮಾತನಾಡಿದ್ದಾರೆ. ಅದ್ಹೇಗೆ ಒಕ್ಕಲಿಗರ ಬಗ್ಗೆ ಇಷ್ಟೊಂದು ದಿಢೀರ್ ಪ್ರೀತಿ ಬಂದಿದೆ ಎಂದು ಪ್ರಶ್ನಿಸಿದರು.

ಪ್ರತಿದಿನ ಜಾತಿ ರಾಜಕಾರಣ ಮಾಡುತ್ತಾರೆ. ಆದರೆ ಜನರು ಇದನ್ನು ಸೂಕ್ಷ್ಮವಾಗಿ ಗಮನಿಸುತ್ತಿದ್ದು, ತಕ್ಕ ಪಾಠ ಕಲಿಸುತ್ತಾರೆ ಎಂದು ಎಚ್ಚರಿಸಿದರು.

ಜಾತಿಗಣತಿ ಕುರಿತಂತೆ ಕಾಂತರಾಜು ವರದಿಯನ್ನು ಈಗ ಬಿಡುಗಡೆ ಮಾಡಿದರೆ ಕಾಂಗ್ರೆಸ್ ಸರ್ವನಾಶವಾಗುತ್ತದೆ ಎಂಬ ಕಾರಣದಿಂದ ಚುನಾವಣೆ ಮುಗಿದ ನಂತರ ಬಿಡುಗಡೆ ಮಾಡಲು ಉದ್ದೇಶಿಸಿದ್ದಾರೆ.

ಕಳೆದ ಬಾರಿಯ ಚುನಾವಣೆಯಲ್ಲಿ ಹಾಸನದಲ್ಲಿ ನಾನು ಪ್ರಚಾರ ಮಾಡದಿದ್ದರೆ ಪ್ರಜ್ವಲ್ ಸೋಲುತ್ತಿದ್ದರೆಂಬ ಸಿದ್ದರಾಮಯ್ಯ ಹೇಳಿಕೆಗೆ ಕಿಡಿಕಾರಿದ ಕುಮಾರಸ್ವಾಮಿ, ಬೆಂಗಳೂರು ಗ್ರಾಮಾಂತರದಲ್ಲಿ ನಾನು ಪ್ರಚಾರ ಮಾಡದಿದ್ದರೆ, ಕೆಲಸ ಮಾಡದಿದ್ದರೆ ಡಿ.ಕೆ.ಸುರೇಶ್ ಸೋಲುತ್ತಿದ್ದರು ಎಂದು ಟಾಂಗ್ ನೀಡಿದರು.

ನಾನು ಈ ತನಕ ಪಾಲಿಸಿಕೊಂಡು ಬಂದ ಮೈತ್ರಿಯ ಧರ್ಮವನ್ನು ಸಿದ್ದರಾಮಯ್ಯ ಟೀಕಿಸುತ್ತಾರೆ. ಆದರೆ ಇದೂವರೆಗೆ ನಾವು ಮೈತ್ರಿ ಧರ್ಮ ಪಾಲಿಸಿಕೊಂಡು ಬಂದಿದ್ದೇವೆ. ಇಲ್ಲದಿದ್ದರೆ ಒಂದು ಸ್ಥಾನವನ್ನು ಅವರು ಗೆಲ್ಲಲು ಸಾಧ್ಯವಾಗುತ್ತಿರಲಿಲ್ಲ ಎಂದು ತಿರುಗೇಟು ನೀಡಿದರು.

ಕಾಂಗ್ರೆಸ್ ಜೊತೆಗಿನ ಮೈತ್ರಿ ಧರ್ಮ ಪಾಲನೆ ಮಾಡದಿದ್ದರೆ ಅಂದು ಬೆಂಗಳೂರು ಗ್ರಾಮಾಂತರದಲ್ಲಿ ಬಿಜೆಪಿಯೇ ಗೆಲ್ಲುತ್ತಿತ್ತು. ಆದರೆ ನಮ್ಮ ಭದ್ರಕೋಟೆಗೆ ಕಾಂಗ್ರೆಸ್ ನುಗ್ಗಲು ನಾನೇ ಅವಕಾಶ ಮಾಡಿಕೊಟ್ಟೆ ಎಂದು ಬೇಸರ ವ್ಯಕ್ತಪಡಿಸಿದರು.

ಸಮ್ಮಿಶ್ರ ಸರ್ಕಾರದ ಅವಧಿಯಲ್ಲಿ ಕೆಲವರು ಬಿಜೆಪಿ ತೊರೆಯಲು ಇವರೇ ಕಾರಣಕರ್ತರಾಗಿದ್ದರು. ಸಿದ್ಧೌಷಧ ಇಟ್ಟುಕೊಂಡು ಚಿತಾವಣೆ ಮಾಡಿದರು. ಆದರೆ ಇದನ್ನೆಲ್ಲಾ ಮರೆಮಾಚಿ ಗರ್ವದ ಮಾತನ್ನಾಡುತ್ತಾರೆ. ಇಷ್ಟೆಲ್ಲಾ ತಪ್ಪುಗಳನ್ನು ಮಾಡಿ ಇವರಂತೆ ನಾವು ತೋಳು, ಭುಜ ತಟ್ಟಿ ಗರ್ವದ ಮಾತನಾಡುವುದಿಲ್ಲ ಎಂದ ಕುಮಾರಸ್ವಾಮಿ ಹೇಳಿದರು.

ಸಿದ್ದರಾಮಯ್ಯ ನಮ್ಮ ಭವಿಷ್ಯದ ಬಗ್ಗೆ ಮಾತನಾಡುವುದಿರಲಿ, ಪಾರ್ಲಿಮೆಂಟ್ ಚುನಾವಣೆ ನಂತರ ಕಾಂಗ್ರೆಸ್ ಪಕ್ಷ ಉಳಿಯುವುದೇ ಕಷ್ಟ, ಸರ್ಕಾರದಲ್ಲಿ ಅಧಿಕಾರಕ್ಕಾಗಿ ಪೈಪೋಟಿ ಎದುರಾಗಿ ಮೂವರು ಉಪ ಮುಖ್ಯಮಂತ್ರಿ ಸ್ಥಾನ ಕೇಳುತ್ತಾರೆ ಎಂದರು.

ಸಿದ್ದರಾಮಯ್ಯ ಕಣ್ಣಲ್ಲಿ ಕೃತಕ ಕಣ್ಣೀರು ಬರುತ್ತೆ

ಸಿದ್ದರಾಮಯ್ಯ ಕಣ್ಣಲ್ಲಿ ಕೃತಕ ನೀರು ಬಂದರೆ, ನಮ್ಮ ಕಣ್ಣಲ್ಲಿ ಭಾವನಾತ್ಮಕ ಕಣ್ಣೀರು ಬರುತ್ತದೆ ಎಂದು ಮಾಜಿ ಮುಖ್ಯಮಂತ್ರಿ ಹೆಚ್.ಡಿ.ಕುಮಾರಸ್ವಾಮಿ ಹೇಳಿದರು. ನಮ್ಮ ಹೃದಯದಿಂದ ಬರುವ ಕಣ್ಣೀರಿನ ಬಗ್ಗೆ ಸಿದ್ದರಾಮಯ್ಯ ಟೀಕೆ ಮಾಡುತ್ತಾರೆ. ಅವರು ತಾವು ಕೃತಕ ಕಣ್ಣೀರು ಸುರಿಸುತ್ತಾರೆ ಎಂಬುವುದು ಜನತೆಗೆ ತಿಳಿದಿದೆ. ಇವರಂತೆ ನಾನು ರಾಜಕೀಯ ತೆವಲಿಗೆ ಮಾತನಾಡುವುದಿಲ್ಲ ಎಂದರು.

ಈಗ ಮುಖ್ಯಮಂತ್ರಿ ಹುದ್ದೆಯ ಜೊತೆಗೆ ಸಿದ್ದರಾಮಯ್ಯ ಜ್ಯೋತಿಷಿ ಕೂಡ ಆಗಿದ್ದಾರೆ. ಜ್ಯೋತಿಷ್ಯ ಹೇಳುವುದನ್ನು ಕಲಿತಿದ್ದಾರೆ. ಆದ ಕಾರಣ ಕಾಂಗ್ರೆಸ್ 20 ಸ್ಥಾನದಲ್ಲಿ ಗೆಲ್ಲುತ್ತದೆ ಎಂದು ಭವಿಷ್ಯ ಹೇಳುತ್ತಾರೆ ಎಂದು ಗೇಲಿ ಮಾಡಿದರು.

ಜೆಡಿಎಸ್ ಪಕ್ಷ ಕಟ್ಟಿ ಬೆಳೆಸಿದ್ದು ನಾನು ಎಂಬ ಸಿದ್ದರಾಮಯ್ಯ ಹೇಳಿಕೆಗೆ ಅವರನ್ನು ತೀವ್ರ ತರಾಟೆಗೆ ತೆಗೆದುಕೊಂಡ ಕುಮಾರಸ್ವಾಮಿ, ಆಗ ಸಾಲ ಮಾಡಿ ಜೆಡಿಎಸ್ ಪಕ್ಷ ಕಟ್ಟಿರುವುದು ನಾನು. ಪೆಂಡಾಲ್ ಹಾಕಿ, ವೇದಿಕೆ ಹಾಕಿದ್ದು ನಾವು, ಆದರೆ ಸಿದ್ದರಾಮಯ್ಯ ಬಂದು ಭಾಷಣ ಮಾಡಿ ಹೋಗುತ್ತಿದ್ದರು. ಜೆಡಿಎಸ್ ಸಂಘಟನೆಗಾಗಿ ಸಿದ್ದರಾಮಯ್ಯ ಯಾವತ್ತೂ ಸಾಲ ಮಾಡಿಲ್ಲ ಎಂದು ತಿರುಗೇಟು ನೀಡಿದರು. ಜೀವನದುದ್ದಕ್ಕೂ ಸಿದ್ದರಾಮಯ್ಯ ಹೆಚ್.ಡಿ.ದೇವೇಗೌಡರು ಹಾಗೂ ಜನತಾದಳದ ಬಗ್ಗೆ ಭಜನೆ ಮಾಡಿಕೊಂಡು ಬಂದವರು. ಈಗಲೂ ಅದನ್ನೆ ಮುಂದುವರೆಸಿದ್ದಾರೆ. ಅವರ ಭಜನೆ ಇನ್ನು ದೂರವಾಗಿಲ್ಲ ಎಂದು ಲೇವಡಿ ಮಾಡಿದರು.

ಹಲೋ ಅಪ್ಪಾ ಎಂಬ ಸಿದ್ದರಾಮಯ್ಯ ಪುತ್ರ ಯತೀಂದ್ರನ ಮಾತನ್ನು ಅಣಕಿಸಿದ ಕುಮಾರಸ್ವಾಮಿ, ನನ್ನ ರಾಜಕಾರಣದ ಅವಧಿಯಲ್ಲಿ ಈ ತನಕ ನನ್ನ ಮಗ ಮೂಗು ತೂರಿಸಿಲ್ಲ. ಇವರಂತೆ ನನ್ನ ಮಗನನ್ನು ಆಶ್ರಯ ಕಮಿಟಿ ಸದಸ್ಯನಾಗಿ ಮಾಡಲಿಲ್ಲ ಎಂದು ಟಾಂಗ್ ನೀಡಿದರು.

ಕ್ಯಾಟರಿಂಗ್ ಮಾಲೀಕರಿಂದ ಲಂಚ ಸ್ವೀಕಾರ: ಆರೋಗ್ಯ ಇಲಾಖೆ ಸಿಬ್ಬಂದಿ ಲೋಕಾಯುಕ್ತ ಬಲೆಗೆ

ಮೈಸೂರು, ಏ.3(ಎಂಕೆ)– ಕ್ಯಾಟರಿಂಗ್‌ವೊಂದರ ಮಾಲೀಕರಿಂದ ಲಂಚ ಪಡೆಯುವಾಗ ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಇಲಾಖೆ ತರಬೇತಿ ಕೇಂದ್ರದ ಎಫ್‌ಡಿಎ ಮೈಸೂರು ಲೋಕಾಯುಕ್ತ ಅಧಿಕಾರಿಗಳ ಬಲೆಗೆ ಬಿದ್ದಿದ್ದಾರೆ.



ನಗರದ ಮೇಟಗಳ್ಳಿಯಲ್ಲಿರುವ ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಇಲಾಖೆ ತರಬೇತಿ ಕೇಂದ್ರದ ಶಿಬಿರಾರ್ಥಿಗಳಿಗೆ 5,16,000 ರೂ. ಊಟದ ಟೆಂಡರ್ ಬಿಲ್ ಮಾಡಿಸಲು ವಿನಾಯಕ ಕ್ಯಾಟರಿಂಗ್‌ನ ಮಾಲೀಕ ಶಿವನಾಗ ಎಂಬುವರ ಬಳಿ ತರಬೇತಿ ಕೇಂದ್ರದ ಎಫ್‌ಡಿಎ(ಪ್ರಥಮ ದರ್ಜೆ ಸಹಾಯಕ) ಮಹೇಶ್, 80 ಸಾವಿರ ಲಂಚಕ್ಕೆ ಬೇಡಿಕೆ ಇಟ್ಟಿದ್ದು, ಏ.2 ರಂದು 50 ಸಾವಿರ ರೂ. ಲಂಚ ಸ್ವೀಕರಿಸುವಾಗ ಲೋಕಾಯುಕ್ತ ಪೊಲೀಸರಿಗೆ ಸಿಕ್ಕಿಬಿದ್ದಿದ್ದಾರೆ. ಮೈಸೂರು ಲೋಕಾಯುಕ್ತ ಪೊಲೀಸ್ ಅಧೀಕ್ಷಕ ವಿ.ಜೆ.ಸಜೀತ್, ಡಿವೈಎಸ್‌ಪಿ ಕೃಷ್ಣಯ್ಯ ನೇತೃತ್ವದಲ್ಲಿ ಲೋಕಾಯುಕ್ತ ಪೊಲೀಸ್ ಠಾಣೆ ಪೊಲೀಸ್ ನಿರೀಕ್ಷಕರಾದ ಜಯರತ್ನ, ಉಮೇಶ್, ಸಿಬ್ಬಂದಿಗಳಾದ ಲೋಕೇಶ್, ರಮೇಶ್, ಹೆಚ್.ಎನ್.ಗೋಪಿ, ಪ್ರಕಾಶ್, ಮೋಹನ್‌ಗೌಡ, ವೀಣಾ, ಆಶಾ ಕಾರ್ಯಾಚರಣೆಯಲ್ಲಿ ಭಾಗವಹಿಸಿದ್ದರು.

ಇಂದು ನಾಮಪತ್ರ ಸಲ್ಲಿಕೆಗೆ ಕಡೇ ದಿನ

- ಈಗಾಗಲೇ ಘಟಾನುಘಟಿಗಳು ನಾಮಪತ್ರ ಸಲ್ಲಿಕೆ
- ಮಂಡ್ಯದಿಂದ ಮಾಜಿ ಸಿಎಂ ಕುಮಾರಸ್ವಾಮಿ ನಾಮಪತ್ರ

ಬೆಂಗಳೂರು, ಏ.3(ಕೆಎಂಶಿ)–ರಾಜ್ಯದಲ್ಲಿ ಚುನಾವಣೆ ನಡೆಯಲಿರುವ ಮೊದಲ ಹಂತದ 14 ಲೋಕಸಭಾ ಕ್ಷೇತ್ರಗಳಿಗೆ ನಾಮಪತ್ರ ಸಲ್ಲಿಕೆಗೆ ನಾಳೆ, ಗುರುವಾರ ಕೊನೆಯ ದಿನ.

ಬುಧವಾರದಂದು ಅಭ್ಯರ್ಥಿಗಳು ದೊಡ್ಡ ಪ್ರಮಾಣದಲ್ಲಿ ನಾಮಪತ್ರ ಸಲ್ಲಿಸಿದ್ದಾರೆ. ರಾಜವಂಶಸ್ಥ ಯದುವೀರ್ ಕೃಷ್ಣದತ್ತ ಚಾಮರಾಜ ಒಡೆಯರ್ ಮೈಸೂರು–ಕೊಡಗು ಕ್ಷೇತ್ರದಿಂದ, ಕೇಂದ್ರ ಸಚಿವೆ ಶೋಭಾ ಕರಂದ್ಲಾಜೆ ಬೆಂಗಳೂರು ಉತ್ತರ, ಮಾಜಿ ಸಚಿವ ವಿ.ಸೋಮಣ್ಣ ತುಮಕೂರು ಕ್ಷೇತ್ರದಿಂದ ಬಿಜೆಪಿ ಅಭ್ಯರ್ಥಿಗಳಾಗಿ ನಾಮಪತ್ರ ಸಲ್ಲಿಸಿದ್ದಾರೆ.

ಸಚಿವ ಮಹದೇವಪ್ಪ ಅವರ ಪುತ್ರ ಸುನೀಲ್ ಬೋಸ್ ಚಾಮರಾಜನಗರ ಕ್ಷೇತ್ರದಿಂದ, ಮನ್ಸೂರ್ ಅಲಿ ಖಾನ್ ಬೆಂಗಳೂರು ಕೇಂದ್ರ, ಕೆಪಿಸಿಸಿ ವಕ್ತಾರ ಲಕ್ಷ್ಮಣ್ ಮೈಸೂರು–ಕೊಡಗು ಕ್ಷೇತ್ರದಿಂದ, ಬೆಂಗಳೂರು ಉತ್ತರ ಕ್ಷೇತ್ರದಿಂದ ಪ್ರೊ.ಎಂ.ವಿ. ರಾಜೀವ್‌ಗೌಡ ಕಾಂಗ್ರೆಸ್ ಅಭ್ಯರ್ಥಿಗಳಾಗಿ ನಾಮಪತ್ರ ಸಲ್ಲಿಸಿದವರಲ್ಲಿ ಸೇರಿದ್ದಾರೆ. ಏಪ್ರಿಲ್ 5 ರಂದು ನಾಮಪತ್ರ ಪರಿಶೀಲನೆ ನಡೆಯಲಿದ್ದು, ಏಪ್ರಿಲ್ 8 ರಂದು ನಾಮಪತ್ರ ಹಿಂಪಡೆಯಲು ಕೊನೆಯ ದಿನವಾಗಿದೆ.

ದೆಹಲಿ ಸಿಎಂ ಬಂಧನ ಪ್ರಶ್ನಿಸಿ ಅರ್ಜಿ: ತೀರ್ಪು ಕಾಯ್ದಿರಿಸಿದ ದೆಹಲಿ ಹೈಕೋರ್ಟ್

ನವದೆಹಲಿ: ರದ್ದಾಗಿರುವ ದೆಹಲಿ ಅಬಕಾರಿ ನೀತಿಗೆ ಸಂಬಂಧಿಸಿದ ಅಕ್ರಮ ಹಣ ವರ್ಗಾವಣೆ ಪ್ರಕರಣದಲ್ಲಿ ಜಾರಿ ನಿರ್ದೇಶನಾಲಯ(ಇಡಿ) ತಮ್ಮನ್ನು ಬಂಧಿಸಿದ ಕ್ರಮ ಪ್ರಶ್ನಿಸಿ ದೆಹಲಿ ಮುಖ್ಯಮಂತ್ರಿ ಅರವಿಂದ್ ಕೇಜ್ರಿವಾಲ್ ಅವರು ಸಲ್ಲಿಸಿದ್ದ ಅರ್ಜಿಯ ವಿಚಾರಣೆ ನಡೆಸಿದ ದೆಹಲಿ ಹೈಕೋರ್ಟ್, ಬುಧವಾರ ತೀರ್ಪು ಕಾಯ್ದಿರಿಸಿದೆ.

ಆಮ್ ಆದ್ಮಿ ಪಕ್ಷದ(ಎಎಪಿ) ರಾಷ್ಟ್ರೀಯ ಸಂಚಾಲಕ ಕೇಜ್ರಿವಾಲ್ ಅವರು ತಮ್ಮ ಬಂಧನ ಮತ್ತು ಇಡಿ ಕಸ್ಟಡಿಯನ್ನು ಪ್ರಶ್ನಿಸಿ ದೆಹಲಿ ಹೈಕೋರ್ಟ್ ಅರ್ಜಿ ಸಲ್ಲಿಸಿದ್ದರು. ಅರ್ಜಿಯ ವಿಚಾರಣೆ ನಡೆಸಿದ ಹೈಕೋರ್ಟ್ ಆದೇಶ ಕಾಯ್ದಿರಿಸಿದೆ. ಅರವಿಂದ್ ಕೇಜ್ರಿವಾಲ್ ಅವರನ್ನು ಕಳೆದ ಸೋಮವಾರ ದೆಹಲಿಯ ರೋಸ್ ಅವೆನ್ಯೂ ಕೋರ್ಟ್ 15 ದಿನಗಳ ಕಾಲ ನ್ಯಾಯಾಂಗ ಬಂಧನಕ್ಕೆ ಒಪ್ಪಿಸಿದೆ.

ವೆಂಕಟೇಶ್ ಯಾರ‍್ಯಾರಿಗೆ ಟೋಪಿ ಹಾಕವ್ರೆ ಗೊತ್ತಾ!

ಪಶು ಸಂಗೋಪನಾ ಸಚಿವ ವೆಂಕಟೇಶ್ ಯಾರ‍್ಯಾರಿಗೆ ಟೋಪಿ ಹಾಕಿದ್ದಾರೆ ಎಂಬುದು ಎಲ್ಲರಿಗೂ ಗೊತ್ತಿದೆ ಎಂದು ಮಾಜಿ ಮುಖ್ಯಮಂತ್ರಿ ಹೆಚ್.ಡಿ.ಕುಮಾರಸ್ವಾಮಿ ಟೀಕಿಸಿದರು.

ಹಾಲಿ ಸಂಸದ ಪ್ರತಾಪ್ ಸಿಂಹಗೆ ಹೆಚ್.ಡಿ.ದೇವೇಗೌಡರು ಬಿಜೆಪಿ ಟಿಕೆಟ್ ತಪ್ಪಿಸಿದ್ದಾರೆ ಎಂಬ ವೆಂಕಟೇಶ್ ಆರೋಪಕ್ಕೆ ಕಿಡಿಕಾರಿದ ಕುಮಾರಸ್ವಾಮಿ, ವೆಂಕಟೇಶ್ ನಮ್ಮ ನೆಂಟರು, ಜೊತೆಗೆ ನಮ್ಮ ಹಳೇ ಸ್ನೇಹಿತರು ಕೂಡ. ಆದರೆ 2004 ರಲ್ಲಿ ಮಂತ್ರಿ ಮಾಡಲಿಲ್ಲ ಅಂತ ಹೋದರು. ಇದನ್ನು ಮರೆಮಾಚಿ ಮಾತೆತ್ತಿದ್ದರೆ ಜೆಡಿಎಸ್‌ನಿಂದ ನಮ್ಮನ್ನು ಹೊರಹಾಕಿದರು ಎಂದು ಹೇಳುತ್ತಾರೆ ಎಂದರು.

ಜೆಡಿಎಸ್ ಪಕ್ಷದಿಂದ ಎಲ್ಲಾ ಉಪಯೋಗ ಪಡೆದಿದ್ದಾರೆ. ಆದರೆ ಜೆಡಿಎಸ್‌ಗೆ ಅವರ ಕೊಡುಗೆ ಏನೇನು ಇಲ್ಲ. ಇಲ್ಲಿ ಇದ್ದಷ್ಟು ದಿನ ರಾಜಕೀಯ ಲಾಭ ಪಡೆದಿದ್ದಾರೆ. ಈತನಕ ವೆಂಕಟೇಶ್ ಯಾರ‍್ಯಾರಿಗೆ ಟೋಪಿ ಹಾಕಿ ಹೋಗಿದ್ದಾರೆ ಎಂಬುದು ಎಲ್ಲರಿಗೂ ಗೊತ್ತಿದೆ ಎಂದು ಕುಮಾರಸ್ವಾಮಿ ತಿರುಗೇಟು ನೀಡಿದರು.

ಮತಗಟ್ಟೆ ಅಧಿಕಾರಿಗಳು ಬೂತ್ ಮಟ್ಟದ ಸೈನಿಕರು

● ಜವಾಬ್ದಾರಿಯಿಂದ ಕರ್ತವ್ಯ ನಿರ್ವಹಿಸಿ ● ಕಾರ್ಯಾಗಾರದಲ್ಲಿ ತಹಶೀಲ್ದಾರ್ ನವೀನ್ ಕುಮಾರ್ ಸೂಚನೆ



ಸೋಮವಾರಪೇಟೆ ಪಟ್ಟಣ ಪಂಚಾಯಿತಿ ಸಭಾಂಗಣದಲ್ಲಿ ಬುಧವಾರ ಹಮ್ಮಿಕೊಂಡಿದ್ದ ತರಬೇತಿ ಕಾರ್ಯಾಗಾರದಲ್ಲಿ ಭಾಗವಹಿಸಿದ್ದ ಮತಗಟ್ಟೆ ಅಧಿಕಾರಿಗಳು.

ಸಭೆಯಲ್ಲಿ ಚರ್ಚೆ

ಮಡಿಕೇರಿ ನಗರಸಭಾ ವ್ಯಾಪ್ತಿಯ ಎಲ್ಲಾ ಮತಗಟ್ಟೆ ಅಧಿಕಾರಿಗಳ ಸಭೆ ಬುಧವಾರ ನಡೆಯಿತು. 12ಡಿ, ಪಿಡಬ್ಲ್ಯುಡಿ ಮತದಾರರು ಹಾಗೂ ಮತಗಟ್ಟೆ ಕೇಂದ್ರಗಳ ಮೂಲ ಸೌಕರ್ಯಗಳು, ಸ್ವೀಪ್ ಕಾರ್ಯಕ್ರಮದ ಚಟುವಟಿಕೆ ಮುಂತಾದ ಚುನಾವಣೆಗೆ ಸಂಬಂಧಿಸಿದ ವಿಷಯಗಳ ಕುರಿತು ಚರ್ಚಿಸಲಾಯಿತು. ಸೂಚನೆಗಳನ್ನು ನೀಡಿ ಪ್ರಮುಖವಾಗಿ ಕಡಿಮೆ ಮತದಾನವಾಗಿರುವ ಬಗ್ಗೆ ಮತದಾರರಲ್ಲಿ ಜಾಗೃತಿ ಮತ್ತು ಅರಿವು ಮೂಡಿಸಿ ಶೇಕಡವಾರು ಮತದಾನದ ಪ್ರಮಾಣ ಲೋಕಸಭಾ ಸಾರ್ವತ್ರಿಕ ಚುನಾವಣೆಯಲ್ಲಿ ಹೆಚ್ಚಾಗಲು ಕರ್ತವ್ಯ ನಿರ್ವಹಿಸುವಂತೆ ನಿರ್ದೇಶನ ನೀಡಿ ತಿಳಿಸಲಾಯಿತು.

ಮಡಿಕೇರಿ, ಏ.3–ಸೋಮವಾರಪೇಟೆ ಪಟ್ಟಣ ಪಂಚಾಯಿತಿ ಸಭಾಂಗಣದಲ್ಲಿ ಬುಧವಾರ ಹಮ್ಮಿಕೊಂಡಿದ್ದ ತರಬೇತಿ ಕಾರ್ಯಾಗಾರದಲ್ಲಿ ಮತಗಟ್ಟೆ ಅಧಿಕಾರಿಗಳಿಗೆ ಸಂಪನ್ಮೂಲ ವ್ಯಕ್ತಿಗಳಿಂದ ಮಾಹಿತಿ ನೀಡಲಾಯಿತು.

ಸ್ವೀಪ್ ಅಂಗವಾಗಿ ಸೋಮವಾರಪೇಟೆ ತಾಲೂಕು ಆಡಳಿತ ಮತ್ತು ತಾಲೂಕು ಪಂಚಾಯಿತಿ ವತಿಯಿಂದ ಆಯೋಜಿಸಿದ್ದ ಕಾರ್ಯಾಗಾರದಲ್ಲಿ ತಹಶೀಲ್ದಾರ್ ನವೀನ್‌ಕುಮಾರ್ ಮಾತನಾಡಿ, ಮತಗಟ್ಟೆ ಅಧಿಕಾರಿಗಳು ಬೂತ್ ಮಟ್ಟದ ಸೈನಿಕರಿದ್ದಂತೆ. ಮತಗಟ್ಟೆಗಳಲ್ಲಿ ಕುಡಿಯುವ ನೀರು, ಶೌಚಾಲಯ, ಸಾರ್ವಜನಿಕರಿಗೆ ನೆರಳಿನ ವ್ಯವಸ್ಥೆ ಹಾಗೂ ವಿದ್ಯುತ್ ಸಂಪರ್ಕ ಸೇರಿದಂತೆ ಮೂಲ ಸೌಕರ್ಯಗಳ ಬಗ್ಗೆ ಹೆಚ್ಚು ಗಮನಹರಿಸಿ ಯಾವುದೇ ಸಮಸ್ಯೆಯಾಗದಂತೆ ನೋಡಿಕೊಳ್ಳುವಂತೆ ಸೂಚಿಸಿದರು.

ಮತದಾನ ಪವಿತ್ರವಾದ ಕಾರ್ಯವಾಗಿದ್ದು, ಜನರಿಗೆ ಧ್ವನಿಯನ್ನು ನೀಡುತ್ತದೆ. ಎಲ್ಲಾ ಜನಸಾಮಾನ್ಯರು ಮತ ಚಲಾಯಿಸುವ ಮೂಲಕ ಪ್ರಜಾಪ್ರಭುತ್ವವನ್ನು ಗಟ್ಟಿಗೊಳಿಸಬೇಕು. ಏ. 26 ರಂದು ಕಡ್ಡಾಯವಾಗಿ ಮತಗಟ್ಟೆ ಕೇಂದ್ರಕ್ಕೆ ಹೋಗಿ ಮತ ಚಲಾಯಿಸುವ ಮೂಲಕ ಸುಭದ್ರ ದೇಶವನ್ನಾಗಿ ನಿರ್ಮಿಸೋಣ. ಮತದಾನ ದಿನದಂದು ನಾವು ಸಮಯ ವ್ಯರ್ಥ ಮಾಡದೆ ಚುನಾವಣಾ ಆಯೋಗ ನಿಗದಿಪಡಿಸಿದ ದಾಖಲೆಗಳನ್ನು ತೆಗೆದುಕೊಂಡು ಹೋಗಿ ಮತ ಚಲಾಯಿಸಬೇಕು. ಈ ಕುರಿತು ಜನಸಾಮಾನ್ಯರಲ್ಲಿ ಅರಿವು ಮೂಡಿಸಬೇಕು ಎಂದರು.

ದೇಶ, ನಾಡು ಕಟ್ಟುವಲ್ಲಿ ಪ್ರತಿಯೊಬ್ಬರ ಮತ ಮುಖ್ಯವಾಗಿರುತ್ತದೆ. ಯಾರೊಬ್ಬರೂ ಮತದಾನ ಮಾಡಲು ನಿಷ್ಕಾಳಜಿ ತೋರಬಾರದು. ಚುನಾವಣೆ ಎಂಬುದು ಪ್ರಜಾಪ್ರಭುತ್ವದ ಹಬ್ಬವಾಗಿದೆ. ಯಾರು ಯಾವುದೇ ಆಸೆ ಆಮಿಷಕ್ಕೆ ಒಳಗಾಗದೆ ಖುಷಿಯಿಂದ ಮತ ಚಲಾಯಿಸಬೇಕೆಂದು ಹೇಳಿದರು.

ತಾಪಂ ಕಾರ್ಯನಿರ್ವಾಹಕಾಧಿಕಾರಿ ಭವಾನಿ ಶಂಕರ್ ಮಾತನಾಡಿ, ಚುನಾವಣಾ ಆಯೋಗದ ಸೀ ವಿಸಿಲ್ ಆ್ಯಪ್ ಅನ್ನು ಹೇಗೆ ಬಳಸಬೇಕು. ಅದರ ಬಗ್ಗೆ ಜನರಿಗೆ ಯಾವ ರೀತಿ ತಿಳಿಸಬೇಕು ಹಾಗೂ ಬೂತ್ ಮಟ್ಟದಲ್ಲಿ ವಹಿಸಬಹುದಾದ ಕರ್ತವ್ಯ ಮತ್ತು ಜವಾಬ್ದಾರಿಗಳ ಬಗ್ಗೆ ಮತಗಟ್ಟೆ ಅಧಿಕಾರಿಗಳಿಗೆ ಮಾಹಿತಿ ನೀಡಿದರು.

ಸಂಪನ್ಮೂಲ ವ್ಯಕ್ತಿ ಕೆ.ಪಿ.ಜಯಕುಮಾರ್ ಮಾತನಾಡಿ, ಬೂತ್ ಮಟ್ಟದಲ್ಲಿ ಹಾಡಿನ ಮೂಲಕ ಮತದಾರರಿಗೆ ಜಾಗೃತಿ ಮೂಡಿಸುವುದು ಹೇಗೆ? ಮತದಾರರ ಪಟ್ಟಿಯನ್ನು ಪರಿಷ್ಕರಣೆ ಮಾಡಿ ಖಾತರಿಪಡಿಸುವುದು. ಇವಿಎಂಗಳನ್ನು ಯಾವ ರೀತಿ ಬಳಸಬೇಕು ಎಂಬುದರ ಬಗ್ಗೆ ತಿಳಿಸಿದರು. ಕಾರ್ಯಾಗಾರದಲ್ಲಿ ಸಂಪನ್ಮೂಲ ವ್ಯಕ್ತಿಗಳಾದ ಶನಿವಾರಸಂತೆ ವಿಘ್ನೇಶ್ವರ ಮಹಿಳಾ ಕಾಲೇಜಿನ ಸಹಾಯಕ ಪ್ರಾಧ್ಯಾಪಕ ಎಸ್.ಎನ್. ಪೂವಯ್ಯ, ಗೌಡಳ್ಳಿ ಪ್ರೌಢಶಾಲೆ ಸಹಾಯಕ ಪ್ರಾಧ್ಯಾಪಕ ಕೆ.ಎಸ್.ಕಿರಣ್ ಕುಮಾರ್, ಕೊಡ್ಲಿಪೇಟೆ ಪಪೂ ಕಾಲೇಜಿನ ಪ್ರಾಧ್ಯಾಪಕ, ನೋಡಲ್ ಅಧಿಕಾರಿ ಶಿವಕುಮಾರ್, ಪಟ್ಟಣ ಪಂಚಾಯಿತಿ ಮುಖ್ಯಾಧಿಕಾರಿ ಲೋಕ ನಾಯಕ್, ಅಕ್ಷರ ದಾಸೋಹ ಸಹಾಯಕ ನಿರ್ದೇಶಕ ಕಾಳನಾಯಕ್ ಮತ್ತಿತರರು ಹಾಜರಿದ್ದರು.

ಗುರು–ಶಿಷ್ಯರ ಸಂಬಂಧ ಗಟ್ಟಿಯಾಗಬೇಕು



ಮಡಿಕೇರಿಯ ಜನರಲ್ ತಿಮ್ಮಯ್ಯ ಪಬ್ಲಿಕ್ ಶಾಲೆಯ ಬೆಳ್ಳಿ ಮಹೋತ್ಸವ ಸಮಾರೋಪದಲ್ಲಿ ಮಾಜಿ ಸಚಿವ ಎಂ.ಸಿ.ನಾಣಯ್ಯ ಮಾತನಾಡಿದರು.

ಮಡಿಕೇರಿ, ಏ.3– ಇಂದಿನ ತಾಂತ್ರಿಕ ಯುಗದಲ್ಲಿ ಗುರು–ಶಿಷ್ಯರ ಸಂಬಂಧ ಮರೆಯುವಂತ ಪರಿಸ್ಥಿತಿಯಾಗಿದ್ದು, ಶಾಲೆಗಳಲ್ಲಿ ಮೊದಲು ಗುರು–ಶಿಷ್ಯರ ಸಂಬಂಧ ಗಟ್ಟಿಯಾಗುವಂತೆ ಮಾಡಬೇಕೆಂದು ಮಾಜಿ ಸಚಿವ ಎಂ.ಸಿ.ನಾಣಯ್ಯ ಅಭಿಪ್ರಾಯ ವ್ಯಕ್ತಪಡಿಸಿದರು.

ನಗರದ ಜನರಲ್ ತಿಮ್ಮಯ್ಯ ಪಬ್ಲಿಕ್ ಶಾಲೆಯ ಬೆಳ್ಳಿ ಮಹೋತ್ಸವ ಸಮಾರೋಪ ಉದ್ಘಾಟಿಸಿ ಮಾತನಾಡಿದ ಅವರು, ಆರ್ಟಿಫಿಷಲ್ ಇಂಟಲಿಜೆಂಟ್ ತಂತ್ರಜ್ಞಾನ ಬಳಕೆ ಒಂದೆಡೆಯಾದರೆ ಮಕ್ಕಳಲ್ಲಿ ಮೊಬೈಲ್‌ಗಳ ಬಳಕೆ ಹೆಚ್ಚಾಗುತ್ತಿರುವುದು ವಿಷಾದನೀಯ. 25ನೇ ಸಂಭ್ರಮದಲ್ಲಿರುವ ಜನರಲ್ ತಿಮ್ಮಯ್ಯ ಶಾಲೆ ವೀರ ಸೇನಾನಿ ಜನರಲ್ ತಿಮ್ಮಯ್ಯ ಅವರ ಹೆಸರನ್ನು ಎಲ್ಲೆಡೆ ಅಜರಾಮರವಾಗಿರುವಂತೆ ಮಾಡುತ್ತಿದ್ದು, ಶಾಲೆ ಉತ್ತುಂಗಕ್ಕೆ ಏರಲೆಂದು ಆರೈಸಿದರು.

ಕಾಫಿ ಮಂಡಳಿ ಮಾಜಿ ಉಪಾಧ್ಯಕ್ಷ ನಡಿಕೇರಿಯಂಡ ಬೋಸ್ ಮಂದಣ್ಣ ಮಾತನಾಡಿ, ಜನರಲ್ ತಿಮ್ಮಯ್ಯ ಅವರ ಸೇವೆಯನ್ನು ಸ್ಮರಿಸಿದರು. ಹಿಂದಿನ ಇತಿಹಾಸವನ್ನು ಕಲಿಯುವ ಬದಲು ಬದುಕಿನಲ್ಲಿ ಶಿಸ್ತು ಸಂಯಮ ಹಾಗೂ ಭಾರತೀಯ ಸಂಸ್ಕೃತಿಯ ಕಲಿಕೆಗೆ ಹೆಚ್ಚಿನ ಒತ್ತು ನೀಡಬೇಕೆಂದರು.

ಮಡಿಕೇರಿ ಕೊಡವ ಸಮಾಜದ ಅಧ್ಯಕ್ಷ ಮಂಡುವಂಡ ಮುತ್ತಪ್ಪ ಮಾತನಾಡಿದರು.

ಇದೇ ಸಂದರ್ಭ ಮಾಜಿ ಸಚಿವ ಎಂ.ಸಿ. ನಾಣಯ್ಯ, ಕಾಫಿ ಮಂಡಳಿಯ ಮಾಜಿ ಉಪಾಧ್ಯಕ್ಷ ನಡಿಕೇರಿಯಂಡ ಬೋಸ್ ಮಂದಣ್ಣ ಶಾಲೆಯ ಬೆಳ್ಳಿ ಮಹೋತ್ಸವದ ಸ್ಮರಣ ಸಂಚಿಕೆ ಹಾಗೂ ಶಾಲಾ ವಾರ್ಷಿಕ ಸಂಚಿಕೆ ಬಿಡುಗಡೆಗೊಳಿಸಿದರು. ಶಾಲೆಯಲ್ಲಿ ಸೇವೆ ಸಲ್ಲಿಸಿದ ಹಾಗೂ ಸೇವೆ ಸಲ್ಲಿಸುತ್ತಿರುವ ಅಧ್ಯಕ್ಷರು, ಕಾರ್ಯಾಧ್ಯಕ್ಷರು, ಕರೆಸ್ಪಾಂಡೆಂಟ್, ನಿರ್ದೇಶಕರು, ಶಿಕ್ಷಕರು ಹಾಗೂ ಸಿಬ್ಬಂದಿಯನ್ನು ಸನ್ಮಾನಿಸಲಾಯಿತು. ವಿವಿಧ ಪಠ್ಯ ಹಾಗೂ ಪಠ್ಯೇತರ ವಿಷಯಗಳ ಸಾಧನೆಯ ವಿದ್ಯಾರ್ಥಿಗಳಿಗೆ ಬಹುಮಾನ ವಿತರಿಸಲಾಯಿತು.

ಮಡಿಕೇರಿ ಕೊಡವ ಸಮಾಜದ ಕಾರ್ಯಾಧ್ಯಕ್ಷ ಕೇಕಡ ವಿಜು ದೇವಯ್ಯ, ಸಂಚಾಲಕಿ ಕನ್ನಂಡ ಕವಿತಾ ಬೊಳ್ಳಪ್ಪ, ನಿರ್ದೇಶಕರಾದ ಕನ್ನಂಡ ಸಂಪತ್, ನಂದಿನೆರವಂಡ ದಿನೇಶ್, ಪುತ್ತರಿರ ಕರುಣ್ ಕಾಳಯ್ಯ, ನಂದಿನೆರವಂಡ ರವಿ ಬಸಪ್ಪ ಕಾಳಚಂಡ ಅಪ್ಪಣ್ಣ ಮೂವೆರ ಜಯರಾಂ, ಮಂಡಿರ ಸದಾಮುದ್ದಪ್ಪ, ಬೊಪ್ಪಂಡ ಸರಳಾ ಕರುಂಬಯ್ಯ, ಶಾಂತೆಯಂಡ ವಿಶಾಲ್ ಕಾರ್ಯಪ್ಪ, ಕಾಂಡೇರ ಲಲ್ಲುಕುಟ್ಟಪ್ಪ ಆಡಳಿತಾಧಿಕಾರಿಗಳಾದ ಮುಕ್ಕಾಟಿರ ಪ್ರೆಸ್ಸಿ ಚೌರಿರ ಕಾವೇರಿ ಪೂವಯ್ಯ, ಅಮ್ಮಾಟಂಡ ಪಾರ್ವತಿ ಅಪ್ಪಯ್ಯ ಹಾಜರಿದ್ದರು.

ಮಳೆಗಾಗಿ ತಲಕಾವೇರಿಯಲ್ಲಿ ವಿಶೇಷ ಪೂಜೆ



ಕಾವೇರಮ್ಮೆ ಕೊಡವ–ಅಮ್ಮ ಕೊಡವ ಹಿತರಕ್ಷಣಾ ಚಾರಿಟಬಲ್ ಟ್ರಸ್ಟ್ ವತಿಯಿಂದ ಮಳೆಗಾಗಿ ತಲಕಾವೇರಿಯ ತೀರ್ಥ ಕುಂಡಿಕೆಗೆ ವಿಶೇಷ ಪೂಜೆ ಸಲ್ಲಿಸಿ ಪ್ರಾರ್ಥಿಸಲಾಯಿತು.

ಮಡಿಕೇರಿ, ಏ.3– ಶ್ರೀ ಕಾವೇರಮ್ಮೆ ಕೊಡವ–ಅಮ್ಮ ಕೊಡವ ಹಿತರಕ್ಷಣಾ ಚಾರಿಟಬಲ್ ಟ್ರಸ್ಟ್ ವತಿಯಿಂದ ಬುಧವಾರ ಭಾಗಮಂಡಲ ಮತ್ತು ತಲಕಾವೇರಿಯಲ್ಲಿ ಮಳೆಗಾಗಿ ಪ್ರಾರ್ಥಿಸಿ ವಿಶೇಷ ಪೂಜೆ ಸಲ್ಲಿಸಲಾಯಿತು.

ಟ್ರಸ್ಟ್ ಅಧ್ಯಕ್ಷ ಎಂ.ಬಿ.ದೇವಯ್ಯ ಹಾಗೂ ಪ್ರಮುಖರು ಮೊದಲಿಗೆ ಭಾಗಮಂಡಲದ ತ್ರಿವೇಣಿ ಸಂಗಮಕ್ಕೆ ತೆರಳಿ ಪುಣ್ಯ ನೀರು ಪ್ರೋಕ್ಷಣೆ ಮಾಡಿದರು. ಬಳಿಕ ಶ್ರೀ ಭಗಂಡೇಶ್ವರ ಸನ್ನಿಧಿಗೆ ತೆರಳಿ ಪೂಜೆ ಸಲ್ಲಿಸಿದರು. ನಂತರ ಕಾವೇರಿ ಉಗಮ ಸ್ಥಾನ ತಲಕಾವೇರಿಗೆ ತೆರಳಿ ಕಾವೇರಿ ಮಾತೆಯ ತೀರ್ಥ ಕುಂಡಿಕೆಗೆ ವಿಶೇಷ ಪೂಜೆ ಸಲ್ಲಿಸಿ, ಮಳೆಗಾಗಿ ಪ್ರಾರ್ಥಿಸಿದರು.

ಕೊಡಗು ಜಿಲ್ಲೆ ಸೇರಿದಂತೆ ರಾಜ್ಯಾದ್ಯಂತ ತೀವ್ರ ಬರ ವ್ಯಾಪಿಸಿದೆ. ನದಿಗಳ ಸಹಿತ ನೀರಿನ ಮೂಲಗಳೆಲ್ಲ ಮಳೆಯಿಲ್ಲದೇ ಬತ್ತುತ್ತಿವೆ. ಇದರಿಂದ ಕೃಷಿಕರು ಮತ್ತು ಬೆಳೆಗಾರರು ಸಂಕಷ್ಟ ಎದುರಿಸುತ್ತಿದ್ದಾರೆ. ಈ ಹಿನ್ನೆಲೆಯಲ್ಲಿ ರಾಜ್ಯಾದ್ಯಂತ ಉತ್ತಮ ಮಳೆಯಾಗಿ ನಾಡಿನೆಲ್ಲೆಡೆ ಉಂಟಾಗಿರುವ ಕುಡಿಯುವ ನೀರಿನ ಸಮಸ್ಯೆ ನೀಗಿಸುವಂತೆ ಪ್ರಾರ್ಥಿಸಿದರು.

ಈ ಸಂದರ್ಭ ಸಂಘಟನೆಯ ಟ್ರಸ್ಟಿಗಳಾದ ಹಂಚೆಟ್ಟಿರ ಮನು ಮುದ್ದಪ್ಪ, ಪಾಸುರ ಕಾವೇರಪ್ಪ, ಎನ್.ಕೆ.ಅಯ್ಯಣ್ಣ, ಸೋಮಯ್ಯ, ಪಿ.ಎ.ನಂದ ಕುಮಾರ್ ಮತ್ತಿತರರು ಹಾಜರಿದ್ದರು.

ತ್ಯಾಜ್ಯ ಸುರಿಯುವವರ ಪತ್ತೆಗೆ ಕ್ಯಾಮರಾ ಅಳವಡಿಕೆ



ಎಲ್ಲೆಂದರಲ್ಲಿ ತ್ಯಾಜ್ಯ ಸುರಿಯುವವರ ಪತ್ತೆಗೆ ನಾಪೋಕ್ಲು ಗ್ರಾಮ ಪಂಚಾಯಿತಿಯಿಂದ ಕ್ಯಾಮರಾ ಅಳವಡಿಸುತ್ತಿರುವುದು.

ಮಡಿಕೇರಿ: ನಾಪೋಕ್ಲು ಸೇರಿದಂತೆ ವಿವಿಧ ಸಾರ್ವಜನಿಕ ಸ್ಥಳದ ಎಲ್ಲೆಂದರಲ್ಲಿ ತ್ಯಾಜ್ಯ ಸುರಿದು ಅಶುಚಿತ್ವ ಉಂಟು ಮಾಡುವವರ ವಿರುದ್ಧ ನಾಪೋಕ್ಲು ಗ್ರಾಮ ಪಂಚಾಯಿತಿ ಕಟ್ಟುನಿಟ್ಟಿನ ಕ್ರಮಕ್ಕೆ ಮುಂದಾಗಿದೆ.

ನಾಪೋಕ್ಲುವಿನ ಹಳೇ ತಾಲೂಕಿನಿಂದ ಕಾವೇರಿ ನದಿ ಸೇತುವೆ ವರೆಗೆ ರಸ್ತೆಯ ವಿವಿಧ ಕಡೆಗಳಲ್ಲಿ ಸಿಸಿ ಕ್ಯಾಮರಾ ಅಳವಡಿಸಿ, ತ್ಯಾಜ್ಯ ಸುರಿಯುವವರನ್ನು ಪತ್ತೆ ಹಚ್ಚಿ 5 ಸಾವಿರ ರೂ.ವರೆಗೆ ದಂಡ ವಿಧಿಸಲಾಗುವುದು ಎಂದು ಗ್ರಾಮ ಪಂಚಾಯಿತಿ ಎಚ್ಚರಿಕೆ ನೀಡಿದೆ.

ಪಂಚಾಯಿತಿ ವತಿಯಿಂದ ವಿವಿಧೆಡೆ ಪ್ರತಿದಿನ ಬೆಳಗ್ಗೆ ಕಸ ವಿಲೇವಾರಿ ವಾಹನ ತೆರಳುತ್ತಿದ್ದರೂ ಕೆಲವರು ಅಂಗಡಿ ಹಾಗೂ ಮನೆಗಳ ತ್ಯಾಜ್ಯವನ್ನು ಕಸ ವಿಲೇವಾರಿ ವಾಹನಕ್ಕೆ ನೀಡದೆ, ಸಾರ್ವಜನಿಕ ಸ್ಥಳದಲ್ಲಿ ಸುರಿಯುತ್ತಿದ್ದರು. ಇದನ್ನು ನಿಯಂತ್ರಿಸಲು ಪಂಚಾಯಿತಿ ತ್ಯಾಜ್ಯ ಸುರಿಯದಂತೆ ಎಚ್ಚರಿಕೆಯ ನಾಮಫಲಕವನ್ನು ಅಳವಡಿಸಿತ್ತು. ಹೀಗಿದ್ದರೂ ನಿಯಂತ್ರಣಕ್ಕೆ ಬಾರದ ಹಿನ್ನೆಲೆಯಲ್ಲಿ ಪಂಚಾಯಿತಿ ಸಭೆಯಲ್ಲಿ ತೀರ್ಮಾನಿಸಿದಂತೆ ಪಟ್ಟಣದ ಆಯಾ ಸ್ಥಳಗಳಲ್ಲಿ ಸಿಸಿ ಕ್ಯಾಮರಾ ಅಳವಡಿಸಿ ಕಟ್ಟುನಿಟ್ಟಿನ ಕ್ರಮಕ್ಕೆ ಮುಂದಾಗಿದೆ.

ನಾಪೋಕ್ಲುವಿನಲ್ಲಿ ಶುಚಿತ್ವ ಕಾಪಾಡುವ ನಿಟ್ಟಿನಲ್ಲಿ ಸಾರ್ವಜನಿಕರು ಕಸ ವಿಲೇವಾರಿ ವಾಹನಕ್ಕೆ ಮನೆ ಹಾಗೂ ಅಂಗಡಿಗಳ ತ್ಯಾಜ್ಯವನ್ನು ನೀಡಿ ಸಹಕರಿಸಬೇಕು. ಎಲ್ಲೆಂದರಲ್ಲಿ ತ್ಯಾಜ್ಯ ಹಾಕುವವರನ್ನು ಸಿಸಿ ಕ್ಯಾಮರಾ ದೃಶ್ಯಾವಳಿಗಳಿಂದ ಪತ್ತೆ ಹಚ್ಚಿ ಸೂಕ್ತ ಕ್ರಮ ಕೈಗೊಳ್ಳಲಾಗುವುದು ಎಂದು ಗ್ರಾಮ ಪಂಚಾಯಿತಿ ಎಚ್ಚರಿಕೆ ನೀಡಿದೆ.

ವಿರಾಜಪೇಟೆಯಲ್ಲಿ ಮುತ್ತಪ್ಪ ತೆರೆ ಮಹೋತ್ಸವ



ವಿರಾಜಪೇಟೆಯಲ್ಲಿ ಮುತ್ತಪ್ಪ ದೇವರ (ಕೋಲ) ತೆರೆ ಮಹೋತ್ಸವ ಆಚರಿಸಲಾಯಿತು.

ವಿರಾಜಪೇಟೆ, ಏ.3– ಇಲ್ಲಿನ ಅರಸು ನಗರದ ಶ್ರೀ ಮುತ್ತಪ್ಪ ದೇವಾಲಯದಲ್ಲಿ ಎರಡು ದಿನ ಶ್ರೀ ಮುತ್ತಪ್ಪ ದೇವರ (ಕೋಲ) ತೆರೆ ಮಹೋತ್ಸವವನ್ನು ವಿಜೃಂಭಣೆಯಿಂದ ಆಚರಿಸಲಾಯಿತು.

ಮೊದಲ ದಿನ ಗಣಪತಿ ಹೋಮ ಬಳಿಕ ದೇವಾಲಯದಲ್ಲಿ ವಿಶೇಷ ಪೂಜೆ ಹಾಗೂ ಧಾರ್ಮಿಕ ಕಾರ್ಯ ನಡೆಸಲಾಯಿತು. ಮುತ್ತಪ್ಪ ಹಾಗೂ ತಿರುವಪ್ಪನ ವೆಳ್ಳಾಟದ ನಂತರ ಅನ್ನಸಂತರ್ಪಣೆ ಏರ್ಪಡಿಸಲಾಯಿತು.

ಎರಡನೇ ದಿನ ಗುಳಿಗನ, ಮುತ್ತಪ್ಪ ಹಾಗೂ ತಿರುವಪ್ಪನ ತೆರೆ ಮಹೋತ್ಸವ ನಡೆಯಿತು. ನಗರ ಹಾಗೂ ಗ್ರಾಮೀಣ ಪ್ರದೇಶದಿಂದ ಹೆಚ್ಚಿನ ಭಕ್ತರು ಆಗಮಿಸಿದ್ದರು.

ಕರ್ನಾಟಕದಲ್ಲಿ ಮೋದಿ ಅಲೆ ಇಲ್ಲ

● 7 ಕೋಟಿ ಕನ್ನಡಿಗರಿಗೆ ಅನ್ಯಾಯ ● ಮುಖ್ಯಮಂತ್ರಿ ಸಿದ್ದರಾಮಯ್ಯ ಕಿಡಿನುಡಿ



ಚಾಮರಾಜನಗರದಲ್ಲಿ ಕಾಂಗ್ರೆಸ್ ಅಭ್ಯರ್ಥಿ ಸುನೀಲ್ ಬೋಸ್ ಪರ ಮುಖ್ಯಮಂತ್ರಿ ಸಿದ್ದರಾಮಯ್ಯ, ಉಪಮುಖ್ಯಮಂತ್ರಿ ಡಿ.ಕೆ. ಶಿವಕುಮಾರ್, ಗೃಹ ಸಚಿವ ಡಾ.ಜಿ.ಪರಮೇಶ್ವರ್ ರೋಡ್ ಶೋ ನಡೆಸಿದರು.

ಚಾಮರಾಜನಗರ, ಏ.3– ಕರ್ನಾಟಕದಲ್ಲಿ ಮೋದಿ ಅಲೆ ಇಲ್ಲ. ರಾಜ್ಯಕ್ಕೆ ಮೋದಿ ಏನನ್ನು ನೀಡಿಲ್ಲ. 7 ಕೋಟಿ ಕನ್ನಡಿಗರಿಗೆ ಅನ್ಯಾಯ ಮಾಡಿದ್ದಾರೆ ಎಂದು ಮುಖ್ಯಮಂತ್ರಿ ಸಿದ್ದರಾಮಯ್ಯ ಕಿಡಿಕಾರಿದರು.

ನಗರದಲ್ಲಿ ಬುಧವಾರ ಕಾಂಗ್ರೆಸ್ ಅಭ್ಯರ್ಥಿ ಸುನೀಲ್ ಬೋಸ್ ನಾಮಪತ್ರ ಸಲ್ಲಿಕೆಯ ಕಾಂಗ್ರೆಸ್ ಮುಖಂಡರು ಮತ್ತು ಕಾರ್ಯಕರ್ತರ ಬೃಹತ್ ಮೆರವಣಿಗೆಯಲ್ಲಿ ಮಾತನಾಡಿದ ಅವರು, ರಾಜ್ಯಕ್ಕೆ ಮೋದಿಯಿಂದ ಯಾವುದೇ ಕೊಡುಗೆ ಇಲ್ಲ. ಆದರೂ ರಾಜ್ಯದ ಬಿಜೆಪಿ ಮುಖಂಡರು ಅವರನ್ನು ಸಮರ್ಥಿಸಿಕೊಳ್ಳುತ್ತಿದ್ದಾರೆ. 10 ವರ್ಷ ಕೇಂದ್ರದಲ್ಲಿ ಆಡಳಿತ ನಡೆಸಿದ ಬಿಜೆಪಿ ನುಡಿದಂತೆ ನಡೆಯಲಿಲ್ಲ. ಸುಳ್ಳನ್ನು ಹೇಳಿ ಜನರಿಗೆ ಮೋಸ ಮಾಡಿದೆ. ಆದರೆ, ಕಾಂಗ್ರೆಸ್ ನುಡಿದಂತೆ ನಡೆದಿದೆ. 2013ರಲ್ಲಿ ರಾಜ್ಯದಲ್ಲಿ ನಮ್ಮ ಸರ್ಕಾರವಿದ್ದಾಗ ಎಲ್ಲಾ ಭರವಸೆಗಳನ್ನು ಈಡೇರಿಸಿತ್ತು ಎಂದರು.

ರಾಜ್ಯದಲ್ಲಿ ಬರಗಾಲವಿದ್ದೂ ಕೇಂದ್ರ ಸರ್ಕಾರ ಪರಿಹಾರ ನೀಡಲಿಲ್ಲ. ಕರ್ನಾಟಕವನ್ನು ಕಡೆಗಣಿಸಿ ಅನ್ಯಾಯ ಮಾಡುತ್ತಿದೆ. ಸಂವಿಧಾನ ಶಿಲ್ಪಿ ಡಾ.ಬಿ.ಆರ್. ಅಂಬೇಡ್ಕರ್ ಅವರ ಕನಸು ನನಸು ಮಾಡಲು ಹಾಗೂ ಸಂವಿಧಾನವನ್ನು ಉಳಿಸಲು ಕಾಂಗ್ರೆಸ್ ಬೆಂಬಲಿಸಬೇಕು ಎಂದು ಮನವಿ ಮಾಡಿದರು.

ಬಿಜೆಪಿ, ಜೆಡಿಎಸ್‌ಗೆ ಡಿಕೆಶಿ ಟಾಂಗ್

ತೆನೆ ಜಮೀನಿನಲ್ಲಿ, ಕಮಲ ಕೆರೆಯಲ್ಲಿ ಇದ್ದರೆ ಚೆನ್ನ, ಅದೇ ರೀತಿ ಕೈ ಲೋಕಸಭೆಯಲ್ಲಿ ಇದ್ದರೆ ಚೆನ್ನ ಎಂದು ಉಪಮುಖ್ಯಮಂತ್ರಿ ಡಿ.ಕೆ.ಶಿವಕುಮಾರ್ ಬಿಜೆಪಿ ಹಾಗೂ ಜೆಡಿಎಸ್ ಮೈತ್ರಿ ಕೂಟಕ್ಕೆ ಟಾಂಗ್ ನೀಡಿದರು. ರಾಜ್ಯ ಸರ್ಕಾರದ ಐದು ಗ್ಯಾರಂಟಿ ಯೋಜನೆಗಳು ಕಾಂಗ್ರೆಸ್ ಅಭ್ಯರ್ಥಿಯ ಕೈ ಹಿಡಿಯಲಿವೆ. ನಾನು ಮತ್ತು ಮುಖ್ಯಮಂತ್ರಿ ಮಾಡಿದ ಜನಪರ ಕೆಲಸಗಳನ್ನು ಪ್ರಧಾನಿ ನರೇಂದ್ರ ಮೋದಿ ಮಾಡಿಲ್ಲ ಎಂದರು.

3 ಲಕ್ಷದ ಅಂತರ ಗೆಲುವಿನ ವಿಶ್ವಾಸ

ಚಾಮರಾಜನಗರ ಲೋಕಸಭಾ ವ್ಯಾಪ್ತಿ 8 ವಿಧಾನಸಭಾ ಕ್ಷೇತ್ರಗಳ ಪೈಕಿಯಲ್ಲಿ 7ರಲ್ಲಿ ಕಾಂಗ್ರೆಸ್ ಶಾಸಕರಿದ್ದು, ಎಲ್ಲೆಡೆ ಪಕ್ಷದ ಅಭ್ಯರ್ಥಿಗೆ ಬೆಂಬಲ ವ್ಯಕ್ತವಾಗುತ್ತಿದೆ. ಹನೂರಿನಲ್ಲಿ ಮಾಜಿ ಶಾಸಕ ನರೇಂದ್ರ ಪಕ್ಷಕ್ಕೆ ಹೆಚ್ಚಿನ ಮತ ಕೊಡಿಸುವ ಭರವಸೆ ನೀಡಿದ್ದಾರೆ. ಹೀಗಾಗಿ ನಾವು 3 ಲಕ್ಷ ಅಂತರದಲ್ಲಿ ಜಯ ಗಳಿಸುತ್ತೇವೆ ಎಂದು ವಿಶ್ವಾಸ ವ್ಯಕ್ತಪಡಿಸಿದರು.

ಕ್ಷೇತ್ರದಲ್ಲಿ ಎರಡು ಬಾರಿ ಸಂಸದರಾಗಿದ್ದ ಆರ್.ಧ್ರುವನಾರಾಯಣ್ ಅವರು 2019ರಲ್ಲಿ ಸೋತಾಗಲೂ ಮನೆಯಲ್ಲಿ ಸುಮ್ಮನೇ ಕೂರಲಿಲ್ಲ. ಬದಲಿಗೆ ಕ್ಷೇತ್ರದಲ್ಲಿ ಸುತ್ತಾಡಿ ಜನರ ಸಮಸ್ಯೆಯನ್ನು ಆಲಿಸಿದರು. ಅವರ ಹಾದಿಯಲ್ಲಿ ಸುನೀಲ್ ಬೋಸ್ ಕೂಡ ಸಾಗಬೇಕು. ಧ್ರುವನಾರಾಯಣ್ ನಂಬರ್ ಒನ್ ಸಂಸದರಾಗಿದ್ದರು. ಅದೇ ರೀತಿಯ ಹೆಸರನ್ನು ಸುನೀಲ್ ಗಳಿಸಬೇಕು ಎಂದು ಕಿವಿಮಾತು ಹೇಳಿದರು.

ಗೃಹ ಸಚಿವ ಡಾ.ಜಿ.ಪರಮೇಶ್ವರ್ ಮಾತನಾಡಿ, ಕೇಂದ್ರ ಸರ್ಕಾರ ತನಿಖಾ ಸಂಸ್ಥೆಗಳಾದ ಐಟಿ, ಐಡಿ, ಸಿಬಿಐಗಳನ್ನು ದುರ್ಬಳಕೆ ಮಾಡಿಕೊಳ್ಳುತ್ತಿದೆ. ಇವುಗಳ ಮೂಲಕ ತಮ್ಮ ರಾಜಕೀಯ ವಿರೋಧಿಗಳನ್ನು ಬಗ್ಗು ಬಡಿಯುತ್ತಿದೆ ಎಂದು ಆರೋಪಿಸಿದರು.

ಲೋಕೋಪಯೋಗಿ ಸಚಿವ ಸತೀಶ್ ಜಾರಕಿಹೊಳಿ ಮಾತನಾಡಿ, ನಾವು 5 ಗ್ಯಾರಂಟಿ ಯೋಜನೆಗಳನ್ನು ಯಶಸ್ವಿಯಾಗಿ ಜಾರಿಗೊಳಿಸಿ ಮತ ಕೇಳುತ್ತಿದ್ದೇವೆ ಎಂದರು. ಸಚಿವರಾದ ಎಚ್.ಸಿ.ಮಹದೇವಪ್ಪ, ಕೆ.ವೆಂಕಟೇಶ್, ಶಾಸಕರಾದ ಸಿ.ಪುಟ್ಟರಂಗಶೆಟ್ಟಿ, ಎ.ಆರ್.ಕೃಷ್ಣಮೂರ್ತಿ, ಎಚ್.ಎಂ.ಗಣೇಶ ಪ್ರಸಾದ್, ಅನಿಲ್ ಚಿಕ್ಕಮಾದು, ಡಿ.ರವಿಶಂಕರ್, ದರ್ಶನ್ ಧ್ರುವನಾರಾಯಣ್, ಮಾಜಿ ಶಾಸಕರಾದ ಆರ್.ನರೇಂದ್ರ, ಜಿ.ಎನ್. ನಂಜುಂಡಸ್ವಾಮಿ, ಯತೀಂದ್ರ, ಮಾಜಿ ಸಂಸದ ಎಂ.ಶಿವಣ್ಣ, ಕಾಡಾಧ್ಯಕ್ಷ ಪಿ. ಮರಿಸ್ವಾಮಿ ಮುಂತಾದವರಿದ್ದರು.

ಕಾಂಗ್ರೆಸ್ ಕಟ್ಟಿಹಾಕುವ ಶಕ್ತಿ ಮತದಾರರಿಗೆ ಇದೆ

● ಬಿಜೆಪಿ ರಾಜ್ಯಾಧ್ಯಕ್ಷ ಬಿ.ವೈ.ವಿಜಯೇಂದ್ರ ಹೇಳಿಕೆ ● ನಗರದಲ್ಲಿ ಬೃಹತ್ ಮೆರವಣಿಗೆ



ಚಾ.ನಗರದಲ್ಲಿ ಬಿಜೆಪಿ ಅಭ್ಯರ್ಥಿ ಎಸ್.ಬಾಲರಾಜು ಪರ ಬಿ.ವೈ.ವಿಜಯೇಂದ್ರ ರೋಡ್ ಶೋ ನಡೆಸಿದರು.

ಚಾಮರಾಜನಗರ, ಏ.3– ರಾಜ್ಯದಲ್ಲಿ ಕಾಂಗ್ರೆಸ್ ಕಟ್ಟಿಹಾಕುವ ಶಕ್ತಿ ಮತದಾರರು ಹಾಗೂ ಬಿಜೆಪಿ–ಜೆಡಿಎಸ್ ಕಾರ್ಯಕರ್ತರಿಗೆ ಇದೆ ಎಂದು ಬಿಜೆಪಿ ರಾಜ್ಯಾಧ್ಯಕ್ಷ ಬಿ.ವೈ. ವಿಜಯೇಂದ್ರ ಹೇಳಿದರು.

ನಗರದಲ್ಲಿ ಬುಧವಾರ ನಡೆದ ಬಿಜೆಪಿ ಅಭ್ಯರ್ಥಿ ಎಸ್.ಬಾಲರಾಜು ಅವರ ನಾಮಪತ್ರ ಸಲ್ಲಿಯ ಬೃಹತ್ ಕಾರ್ಯಕರ್ತರ ಮೆರವಣಿಗೆಯಲ್ಲಿ ಮಾತನಾಡಿದ ಅವರು, ನನಗೆ ಮುಖ್ಯಮಂತ್ರಿ ಸಿದ್ದರಾಮಯ್ಯ ಅವರನ್ನು ಕಟ್ಟಿಹಾ ಕುವ ಶಕ್ತಿ ಇಲ್ಲ. ಆದರೆ, ರಾಜ್ಯದ ಜನತೆಗೆ ಕಾಂಗ್ರೆಸ್ ಕಟ್ಟಿ ಹಾಕುವ ಶಕ್ತಿ ಇದೆ. ಇದಕ್ಕೆ ಲೋಕಸಭಾ ಚುನಾವಣೆಯಲ್ಲಿ ತಕ್ಕ ಉತ್ತರವನ್ನು ರಾಜ್ಯದ ಜನತೆ ನೀಡಲಿದ್ದಾರೆ ಎಂದರು.

ಸಂಸದ ಶ್ರೀನಿವಾಸ ಪ್ರಸಾದ್ ಅವರನ್ನು ನಾನು ಭೇಟಿಯಾಗಿದ್ದೇನೆ. ಆದರೆ, ಶ್ರೀನಿವಾಸ ಪ್ರಸಾದ್ ನಾನು ರಾಜಕೀಯದಿಂದ ನಿವೃತ್ತಿಯಾಗುತ್ತಿದ್ದು, ಯಾರ ಪರವಾಗಿಯೂ ನಿಲ್ಲುವುದಿಲ್ಲ ಎಂದು ಹೇಳಿದ್ದಾರೆ. ಪ್ರಧಾನಿ ಮೋದಿ ಬಗ್ಗೆ ಅವರಿಗೆ ಒಳ್ಳೆಯ ಅಭಿಪ್ರಾಯವಿದೆ. ಅವರ ಅಳಿಯ ಹರ್ಷವರ್ಧನ್ ನಮ್ಮ ಜೊತೆ ಇದ್ದಾರೆ. ಮತ್ತೊಬ್ಬ ಅಳಿಯ ಮೋಹನ್ ಕೂಡ ನಮ್ಮೊಂದಿಗೆ ಇರಲಿದ್ದಾರೆ.
–ಬಿ.ವೈ.ವಿಜಯೇಂದ್ರ, ಬಿಜೆಪಿ ರಾಜ್ಯಾಧ್ಯಕ್ಷ

ಬಿಜೆಪಿ–ಜೆಡಿಎಸ್ ಮೈತ್ರಿ ಅಭ್ಯರ್ಥಿ ಎಸ್.ಬಾಲಾಜು ಮೃದುಸ್ವಭಾವದ ವ್ಯಕ್ತಿಯಾಗಿದ್ದು, ರಾಜಶೇಖರ್ ಅವರ ಶಿಷ್ಯರಾದ ಧ್ರುವನಾರಾಯಣ್‌ರಂತೆ ಇವರು ಕೂಡ ಅವರ ಶಿಷ್ಯರಾಗಿದ್ದು, ಧ್ರುವನಾರಾಯಣ್ ಅವರಂತೆ ಕ್ಷೇತ್ರದಲ್ಲಿ ಅಭಿವೃದ್ಧಿ ಕೆಲಸ ಮಾಡಲಿದ್ದಾರೆ.
–ಜಿ.ಟಿ.ದೇವೇಗೌಡ, ಶಾಸಕ

ಸಿದ್ದರಾಮಯ್ಯ ಸೇರಿದಂತೆ ಕಾಂಗ್ರೆಸ್‌ನ ನಾಯಕರು ಅಧಿಕಾರದ ಅಮಲಿನಲ್ಲಿ ಬಿಜೆಪಿಗೆ ಹೆಚ್ಚು ಸ್ಥಾನಗಳು ಬರುವುದಿಲ್ಲ ಎಂದು ಭ್ರಮೆಯಲ್ಲಿ ಇದ್ದಾರೆ. ಹೀಗಾಗಿ, ಅವರು ಏನು ಹೇಳುತ್ತಾರೆ ಎಂಬುದು ಮುಖ್ಯವಲ್ಲ. ರಾಜ್ಯದ ಜನರು ಏನು ಹೇಳುತ್ತಾರೆ ಎನ್ನುವುದು ಮುಖ್ಯ ಎಂದರು.

ಕಾಂಗ್ರೆಸ್‌ನ ಬಣ್ಣದ ಮಾತುಗಳಿಗೆ ಮೋಸ ಹೋಗಿದ್ದೇವೆ. ಮೂರನೇ ಬಾರಿಗೂ ಮೋದಿ ಅವರನ್ನು ಪ್ರಧಾನಿ ಮಾಡುವ ಸಲುವಾಗಿ ಬಿಜೆಪಿ–ಜೆಡಿಎಸ್ ಅಭ್ಯರ್ಥಿಗಳನ್ನು ಗೆಲ್ಲಿಸಬೇಕು ಎಂದು ರಾಜ್ಯದ ಯುವಕರು, ತಾಯಂದಿರು, ಬಡವರು, ರೈತರು, ಪ್ರಜ್ಞಾವಂತರು ಮಾತನಾಡುತ್ತಿದ್ದಾರೆ. ರಾಜ್ಯದ ಎಲ್ಲಾ 28 ಕ್ಷೇತ್ರಗಳಲ್ಲೂ ಬಿಜೆಪಿ–ಜೆಡಿಎಸ್ ಪರವಾದ ವಾತಾವರಣವಿದೆ ಎಂದು ಹೇಳಿದರು.

ಕೇಂದ್ರದಲ್ಲಿ ಎನ್‌ಡಿಎ ಮೈತ್ರಿಕೂಟ 400ಕ್ಕೂ ಹೆಚ್ಚು ಸ್ಥಾನಗಳನ್ನು ಗಳಿಸಿ, ನರೇಂದ್ರ ಮೋದಿ ಮತ್ತೆ ಪ್ರಧಾನಿಯಾಗಲಿದ್ದಾರೆ. ಚಾ.ನಗರದಲ್ಲಿ ಬಿಜೆಪಿ ಅಭ್ಯರ್ಥಿ ಲಕ್ಷಕ್ಕೂ ಹೆಚ್ಚು ಮತಗಳ ಅಂತರದಲ್ಲಿ ಗೆಲುವು ಸಾಧಿಸಲಿದ್ದಾರೆ. ರಾಜ್ಯದಲ್ಲಿ ಆಡಳಿತ ಪಕ್ಷ ಅಧಿಕಾರದ ಅಮಲಿನಲ್ಲಿ ಹಣ, ಹೆಂಡದ ಆಧಾರದಲ್ಲಿ ಗೆಲ್ಲುವ ಭ್ರಮೆಯಲ್ಲಿದೆ. ಆದರೆ, ಇಲ್ಲಿನ ಜನರು ಪ್ರಜ್ಞಾಂತರಿದ್ದಾರೆ. ಕಾಂಗ್ರೆಸ್‌ನವರನ್ನು ಭ್ರಮೆಯಿಂದ ಹೊರತರುವ ಕೆಲಸ ಮಾಡುತ್ತೇವೆ ಎಂದರು.

ಈ ವೇಳೆ ಬಿಜೆಪಿ ಜಿಲ್ಲಾಧ್ಯಕ್ಷ ನಿರಂಜನ್‌ಕುಮಾರ್, ರಾಜ್ಯ ಉಪಾಧ್ಯಕ್ಷ ಎನ್.ಮಹೇಶ್, ಮುಖಂಡರಾದ ರಾಮಚಂದ್ರ, ನಂಜುಂಡಸ್ವಾಮಿ ಇತರರು ಇದ್ದರು.

ಸುನೀಲ್ ಬೋಸ್ 7.84 ಕೋಟಿ ಆಸ್ತಿ ಒಡೆಯ



ಚಾಮರಾಜನಗರ: ಚಾಮರಾಜನಗರ ಮೀಸಲು ಲೋಕಸಭಾ ಕ್ಷೇತ್ರದ ಕಾಂಗ್ರೆಸ್ ಅಭ್ಯರ್ಥಿ ಸುನೀಲ್ ಬೋಸ್ ಒಟ್ಟು 7.84 ಕೋಟಿ ರೂ. ಆಸ್ತಿ ಹೊಂದಿದ್ದಾರೆ. ಆದರೆ, 5.56 ಕೋಟಿ ರೂ. ಸಾಲವಿದೆ.

ಬೋಸ್ ಮೈಸೂರಿನ ವಾಣಿ ವಿಲಾಸ ಮೊಹಲ್ಲಾದಲ್ಲಿ 2 ಕೋಟಿ ರೂ. ಮೌಲ್ಯದ ಮನೆಯಿದ್ದು, ಕೈಯಲ್ಲಿ 9.9 ಲಕ್ಷ ರೂ. ನಗದು ಹೊಂದಿದ್ದಾರೆ. ಎರಡು ಬ್ಯಾಂಕ್‌ಗಳಲ್ಲಿ 6.98 ಲಕ್ಷ ರೂ. ಉಳಿತಾಯ ಖಾತೆಯಲ್ಲಿದೆ. ಇವರ ಬಳಿ 38 ಲಕ್ಷ ರೂ. ಮೌಲ್ಯದ ಚಿನ್ನಾಭರಣ, 2 ಲಕ್ಷ ರೂ. ಮೌಲ್ಯದ ಬೆಳ್ಳಿ ವಸ್ತುಗಳಿವೆ.

ಇವರ ಚರಾಸ್ತಿ 3.53 ಕೋಟಿ ರೂ. ಮೌಲ್ಯದಾಗಿದ್ದು, ಸ್ಥಿರಾಸ್ತಿ 4.31 ಕೋಟಿ ರೂ. ಮೌಲ್ಯ ಹೊಂದಿದೆ. ನಂಜನಗೂಡು ತಾಲೂಕಿನ ಹದಿನಾರು ಗ್ರಾಮದಲ್ಲಿ 1.38 ಎಕರೆ ಭೂಮಿ ಹಾಗೂ ಎಲಚೆಗೆರೆ ಗ್ರಾಮದಲ್ಲಿ 19 ಗುಂಟೆ ಭೂಮಿಯನ್ನು ಹೊಂದಿದ್ದಾರೆ. ಒಟ್ಟು 7.84 ಕೋಟಿ ರೂ. ಮೌಲ್ಯದ ಆಸ್ತಿಗೆ ಒಡೆಯನಾಗಿದ್ದರೂ ಸುನೀಲ್ ಬೋಸ್ ಬಳಿ ಸ್ವಂತ ಕಾರಿಲ್ಲ.

42 ವರ್ಷದ ಬೋಸ್ ಪಿಯುಸಿ ವ್ಯಾಸಂಗ ಮಾಡಿದ್ದಾರೆ. ಇದೇ ಪ್ರಥಮ ಚುನಾವಣೆಯನ್ನು ಎದುರಿಸುತ್ತಿರುವ ಸುನೀಲ್ ಬೋಸ್ ವಿರುದ್ಧ 2017ರ ಚುನಾವಣೆ ಸಂದರ್ಭದಲ್ಲಿ ಸಾರ್ವಜನಿಕರಿಗೆ ಮಜ್ಜಿಗೆ ಮತ್ತು ಹಣ್ಣು ವಿತರಿಸಿ ನೀತಿ ಸಂಹಿತೆ ಉಲ್ಲಂಘಿಸಿದ ಪ್ರಕರಣ ನಂಜನಗೂಡು ಠಾಣೆಯಲ್ಲಿ ದಾಖಲಾಗಿದ್ದು, ನಂಜನಗೂಡು ಜೆಎಂಎಸಿ ನ್ಯಾಯಾಲಯದಲ್ಲಿ ಪ್ರಕರಣ ಬಾಕಿ ಇದೆ.

ಬಾಲರಾಜ್‌ಗಿಂತ ಪತ್ನಿಗೆ ಹೆಚ್ಚು ಸ್ಥಿರಾಸ್ತಿ



ಬಿಜೆಪಿ ಅಭ್ಯರ್ಥಿ ಎಸ್.ಬಾಲರಾಜ್ ಅವರಿಗಿಂತ ಅವರ ಪತ್ನಿ ಹೆಚ್ಚು ಸ್ಥಿರಾಸ್ತಿಯನ್ನು ಹೊಂದಿದ್ದಾರೆ. 58 ವರ್ಷದ ಎಸ್.ಬಾಲರಾಜ್ ಬಿಇ ಸಿವಿಲ್ ಇಂಜಿನಿಯರಿಂಗ್ ಪದವೀಧರರು. ಇವರ ಒಟ್ಟು ಚರಾಸ್ತಿ 17.3 ಲಕ್ಷ ರೂ. ಮೌಲ್ಯದಾಗಿದ್ದರೆ, ಪತ್ನಿಯ ಚರಾಸ್ತಿ ಮೌಲ್ಯ 56.74 ಲಕ್ಷ ರೂ. ಇದೆ.

ಇನ್ನು ಬಾಲರಾಜ್ ಅವರ ಸ್ಥಿರಾಸ್ತಿ 55 ಲಕ್ಷ ರೂ. ಮೌಲ್ಯದ್ದಾಗಿದ್ದು, ಪತ್ನಿ ವಿಮಲಾ ಅವರ ಸ್ಥಿರಾಸ್ತಿಯ ಮೌಲ್ಯ 2.10 ಕೋಟಿ ರೂ. ಆಗಿದೆ. ಒಟ್ಟಾರೆ ಎಸ್.ಬಾಲರಾಜು ಸ್ಥಿರಾಸ್ತಿ, ಚರಾಸ್ತಿಯಿಂದ ಒಟ್ಟು 82.74 ಲಕ್ಷ ರೂ. ಮೌಲ್ಯದ ಆಸ್ತಿ ಹೊಂದಿದ್ದಾರೆ. ಅವರ ಪತ್ನಿ ಹೆಸರಿನಲ್ಲಿ 2.66 ಕೋಟಿ ರೂ. ಮೌಲ್ಯದ ಒಟ್ಟು ಆಸ್ತಿ ಇದ್ದು, 42 ಲಕ್ಷ ರೂ. ಸಾಲವಿದೆ. ಇನ್ನು ಹಿರಿಯ ಪುತ್ರ ಹಿಮಾಂಶು ಹೆಸರಲ್ಲಿ 75 ಲಕ್ಷ ರೂ. ಮೌಲ್ಯದ ಮನೆ ಕೊಳ್ಳೇಗಾಲದಲ್ಲಿದೆ. ಇನ್ನು ಎರಡನೇ ಪುತ್ರನ ಹೆಸರಲ್ಲಿ 4 ಲಕ್ಷ ರೂ. ಮೌಲ್ಯದ ನಿವೇಶನವಿದೆ. ಬಾಲರಾಜ್ ವಿರುದ್ಧ ಯಾವುದೇ ಕ್ರಿಮಿನಲ್ ಪ್ರಕರಣಗಳಿಲ್ಲ.

ಸುನೀಲ್ ಬೋಸ್ ವಿರುದ್ಧ ಪೋಸ್ಟರ್



ಚಾಮರಾಜನಗರ, ಏ.3– ಕಾಂಗ್ರೆಸ್ ಅಭ್ಯರ್ಥಿ ಸುನೀಲ್ ಬೋಸ್ ವಿರುದ್ಧ ನಗರದಲ್ಲಿ ಬುಧವಾರ ಬೆಳಗ್ಗೆ ಕೆಲವೆಡೆ ಮರಳು ಮಾಫಿಯಾದ ಅನಭಿಷಿಕ್ತ ದೊರೆ ಗೋ ಬ್ಯಾಕ್ ಎಂಬ ಪೋಸ್ಟರ್‌ಗಳು ಕಂಡು ಬಂದವು.

ಮರಳು ಮಾಫಿಯಾದವರಿಗೆ ಮರಳಾಗಬೇಡಿ ಎಂಬ ಶೀರ್ಷಿಕೆಯಲ್ಲಿ ಮಂಗಳವಾರ ತಡರಾತ್ರಿ ಅಪರಿಚಿತರು ಪೋಸ್ಟರ್‌ಗಳನ್ನು ನಗರದ ಭುವನೇಶ್ವರಿ ವೃತ್ತ, ಜೋಡಿರಸ್ತೆ ಹಾಗೂ ಸಂತೆಮರಹಳ್ಳಿ ರಸ್ತೆಬದಿಗಳಲ್ಲಿ ಅಂಟಿಸಿದ್ದರು. ಪೋಸ್ಟರ್‌ಗಳಲ್ಲಿ ಹಸ್ತದ ಚಿಹ್ನೆಯನ್ನು ತಲೆಕೆಳಕಾಗಿ ಹಾಕಿ ಎಕ್ಸ್ ಮಾರ್ಕ್ ಬರೆಯಲಾಗಿದೆ. ನಂತರ ಪೊಲೀಸರು ಪೋಸ್ಟರ್‌ಗಳನ್ನು ತೆರವುಗೊಳಿಸಿದರು.

ದೂರು: ಈ ಸಂಬಂಧ ನಗರ ಪೊಲೀಸ್ ಠಾಣೆಯಲ್ಲಿ ಮೈಸೂರು ಗ್ರಾಮಾಂತರ ವಿಭಾಗ ಕಾಂಗ್ರೆಸ್‌ನ ಸಾಮಾಜಿಕ ಜಾಲತಾಣ ವಿಭಾಗದ ಹೇಮಂತ್ ಕುಮಾರ್ ದೂರು ಸಲ್ಲಿಸಿದ್ದಾರೆ. ಅಭ್ಯರ್ಥಿ ಸುನೀಲ್ ಬೋಸ್ ಅವರ ವ್ಯಕ್ತಿತ್ವ ಹರಣ ಮತ್ತು ಅಪಪ್ರಚಾರದ ಪೋಸ್ಟರ್ ಹಾಕಿರುವವರನ್ನು ಪತ್ತೆ ಹಚ್ಚಿ, ಕ್ರಮ ಕೈಗೊಳ್ಳಬೇಕೆಂದು ದೂರು ದಾಖಲಿಸಿದ್ದಾರೆ.

ಆರೋಪ ಸಾಬೀತು ಪಡಿಸಲಿ: ಈ ಕುರಿತು ನಗರದಲ್ಲಿ ಸುದ್ದಿಗಾರರಿಗೆ ಪ್ರತಿಕ್ರಿಯೆ ನೀಡಿದ ಸುನೀಲ್ ಬೋಸ್, ಬಿಜೆಪಿಯವರು ಹತಾಶರಾಗಿದ್ದಾರೆ. ನನ್ನ ಮೇಲಿನ ಪ್ರಕರಣ ಹೈಕೋರ್ಟ್‌ನಲ್ಲಿ ವಜಾಗೊಂಡು ಕ್ಲೀನ್ ಚಿಟ್ ಸಿಕ್ಕಿದೆ. ನಾನು ನಿರ್ದೋಷಿ ಎಂದು ತೀರ್ಪು ನೀಡಿದೆ. ನನ್ನ ಮೇಲಿನ ಆರೋಪ ಸಾಬೀತು ಮಾಡಿದರೆ ನಾಮಪತ್ರ ಸಲ್ಲಿಸುವುದಿಲ್ಲ ಎಂದು ಸವಾಲು ಹಾಕಿದರು. ಬಿಜೆಪಿಯವರಿಗೆ ಬೇರೆ ವಿಷಯಗಳಿಲ್ಲ. ಯಾರ ಮೇಲೂ ವೈಯಕ್ತಿಕ ಟೀಕೆ ಮಾಡಬಾರದೆಂದು ಚುನಾವಣಾ ಆಯೋಗವೇ ಹೇಳಿದೆ. ಪೋಸ್ಟರ್ ಅಂಟಿಸಿದರವರ ವಿರುದ್ಧ ಚುನಾವಣಾ ಆಯೋಗಕ್ಕೆ ದೂರು ನೀಡುತ್ತೇನೆ. ಇದು ಬಿಜೆಪಿಯವರ ಕೆಲಸ ಎಂದು ಆರೋಪಿಸಿದರು.

ವರ್ಗೀಕೃತ ಜಾಹೀರಾತು

ಪ್ರತಿ ಸೋಮವಾರ, ಗುರುವಾರ ಮತ್ತು ಶನಿವಾರ ರೂ. 600 + 30 ಮಾತ್ರ

ಜಾಹೀರಾತಿಗೆ ಸಂಪರ್ಕಿಸಿ 0821–2496522/23

GLN CONVENTION HALL
ಖಾಲಿ ಇದೆ
Date: 1-5-2024
9845129666
9606225582

ವೃದ್ಧಾಶ್ರಮ
ಹಿರಿಯ ಜೀವಗಳಿಗೆ, ಹಾಸಿಗೆ ಹಿಡಿದ ವೃದ್ಧರು, ಪಾರ್ಶ್ವವಾಯು ಪೀಡಿತರು, ಹಾಗೂ ಕೈಲಾಗದ ವಯೋ ವೃದ್ಧರನ್ನು ಮನೆಯಂತೆಯೇ ನೋಡಿಕೊಳ್ಳುತ್ತಿರುವ ಸಂಸ್ಥೆ ನಮ್ಮ ಮೈಸೂರಿನಲ್ಲಿ ಊಟ ವಸತಿಯೊಂದಿಗೆ ಇಚ್ಛೆಯುಳ್ಳವರು ಸಂಪರ್ಕಿಸಿ
9110455297

Janatha Trust
1 day free Beautician (demo class)
Naidunagar, Mysore.
Mob: 9380705968

SITE FOR SALE
40x30
Corner site, North-East facing, Vidhyashankar Nagara, Mysore.
Contact:
Mob: 9886577480

ಬೇಕಾಗಿದ್ದಾರೆ
ಕಾಲೇಜ್ ಹಾಗೂ ಅಪಾರ್ಟ್‌ಮೆಂಟ್‌ನಲ್ಲಿ ಕೆಲಸ ಮಾಡಲು ಸೆಕ್ಯೂರಿಟಿ ಗಾರ್ಡ್ಸ್ ಬೇಕಾಗಿದ್ದಾರೆ
ಸಂಬಳ: 11,000 ರಿಂದ 12,500
ವಯಸ್ಸು: 25 ರಿಂದ 50 ವರ್ಷಗಳು
ಸ್ಥಳ: ಆಲನಹಳ್ಳಿ, ಕೆ.ಆರ್. ಮೊಹಲ್ಲಾ ಮತ್ತು ಡಿ. ದೇವರಾಜ ಅರಸು ರಸ್ತೆ.
ಸಂಪರ್ಕಿಸಿ: 9019586857

ತಕ್ಷಣ ಬೇಕಾಗಿದ್ದಾರೆ
ಚಾಮರಾಜನಗರದ ಕೆಎಸ್ಎಂ ಅಮರ್‌ನಾಥ್ ಇನ್ಫ್ರಾಸ್ಟ್ರಕ್ಚರ್ ಪ್ರೈ.ಲಿಮಿಟೆಡ್‌ಗೆ ಗ್ಯಾಸ್ ವೆಲ್ಡರ್ ಮತ್ತು ಕಟರ್, ಫ್ಲಂಬರ್, ಫಿಟ್ಟಿಂಗ್ ವರ್ಕರ್ ಮತ್ತು ಫ್ಯಾಬ್ರಿಕೇಟರ್ ಕೆಲಸಗಳಿಗೆ ಅನುಭವವುಳ್ಳ ಅಭ್ಯರ್ಥಿಗಳು ತಕ್ಷಣ ಬೇಕಾಗಿದ್ದಾರೆ
ಸ್ಥಳ: ಅಮರ್‌ನಾಥ್ ಇನ್ಫ್ರಾಸ್ಟ್ರಕ್ಚರ್ ಪ್ರೈ.ಲಿಮಿಟೆಡ್ ಪಂಜಾಬ್ ನ್ಯಾಷನಲ್ ಬ್ಯಾಂಕ್ ಪಕ್ಕ, ಸಂತೇಮರಹಳ್ಳಿ ಸರ್ಕಲ್, ಚಾ.ನಗರ
ಕೂಡಲೇ ಸಂಪರ್ಕಿಸಿ 7406285734 7483007112

WANTED
COMPUTER TYPIST (Male / Female) FOR ADVOCATE OFFICE
Qualification: Typing - English & Kannada (Kan - Nudi / Baraha) in M.S. Word & Excel / Page Maker
9.30 am to 2 pm. Sunday: 10.30 to 3 pm. Salary: 10,000/- per month. For evening: (Male only). 6.30 pm to 11.30 pm. Salary: Rs. 10,000/- per month.
7349337469, 9448525072

Sri Murugan Pharma @ Vijayanagar 3rd Stage
REQUIRED STAFFS
Freshers and Experienced
Attractive Salary
Call: 99802 53762
Email: srimuruganpharmacy mysuru@gmail.com

ಬೇಕಾಗಿದ್ದಾರೆ
ಮೈಸೂರಿನ ಲಕ್ಷ್ಮೀಪುರಂನಲ್ಲಿ 24 ಗಂಟೆಗಳು, 10 ತಿಂಗಳ ಮಗುವನ್ನು ನೋಡಿಕೊಳ್ಳಲು
ಮಹಿಳೆ ಬೇಕಾಗಿದ್ದಾರೆ
ಸಂಪರ್ಕಿಸಿ:
9632866616

SRI BAIRAVESHWARA MANPOWER SERVICE
URGENT REQUIREMENT
Male / Female candidates
Age limit : 18 to 35
Qualification: 7th Pass / Fail, SSLC Pass / Fail, ITI Pass / Fail Diploma Pass / Fail, Any Degree Pass / Fail
Attractive Salary. Contact immediately
Mob: 99005-99740

40x66
Judicial Layout
West Facing, MUDA, Dattagalli
Price - 1.19 Cr
Near Christ Public School
8660105902

ಸಂಪು ಮತ್ತು ಟ್ಯಾಂಕ್ ಕ್ಲೀನಿಂಗ್
Mob: 8880558064

30x40
Dattagalli
MUDA, East Facing Site for Sale, Dattagalli,
Price - 88 Lakhs
Near Mangalya Sangam Choultry
8660105902

SITES for SALE
JP Nagar Ring Road
20 x 30 - 17 Lakhs,
30 x 40 - 33 Lakhs,
Near Gurur Bus Stop, Ramabainagar, Mysore.
DTCP approved (Corporation limits)
1.5 Kms from JP Nagar Ring Road
8660105902

Writer
ಬೇಕಾಗಿದ್ದಾರೆ
(Kushalnagar)
9448460668

ಹೊಸ ಮನೆ ಮಾರಾಟಕ್ಕಿದೆ ಹಾಗೂ ಸೈಟುಗಳು ಮಾರಾಟಕ್ಕಿದೆ
(ಮೂಡಾ ಅಪ್ರೂವಡ್) ಶ್ರೀನಗರ ಹಿಂಭಾಗ ಮತ್ತು ಶ್ರೀರಾಂಪುರ ರಿಂಗ್ ರೋಡ್ ಮೈಸೂರು
8050345574

ಬೇಕಾಗಿದ್ದಾರೆ
ಕಾರ್ಖಾನೆಯಲ್ಲಿ ಶಿಫ್ಟ್‌ಗಳಲ್ಲಿ ಕೆಲಸ ಮಾಡಲು ಸಹಾಯಕರು ಬೇಕಾಗಿದ್ದಾರೆ.
Salary: 17000/-
Benefits - Free Room
Timings: 12 Hours Shift
Location: Mysore
9513777350

ಉಚಿತ ತರಬೇತಿ
ಮನೆಯಿಂದಲೇ ಬಟ್ಟಲು ಸಾಂಬ್ರಾಣಿ ಮತ್ತು ಅಣಬೆ ತಯಾರಿಸಿ ನಮಗೆ ಮರಳಿಸಿ ಪ್ರತಿದಿನ 500 ರಿಂದ 800 ರೂ. ವರೆಗೆ ಗಳಿಸಿ.
ತರಬೇತಿಗಾಗಿ:
7406375196, 9880548596

ಬೇಕಾಗಿದ್ದಾರೆ
ಮೈಸೂರಿನ ಇಂಟೀರಿಯರ್ ಡಿಸೈನ್ ವುಡ್ ಫ್ಯಾಕ್ಟರಿಯಲ್ಲಿ ಕೆಲಸ ಮಾಡಲು ನುರಿತ ಕಾರ್ಪೆಂಟರ್‌ಗಳು, ಮೆಷಿನ್ ಆಪರೇಟರ್ಸ್, ಹೆಲ್ಪರ್ಸ್ ಬೇಕಾಗಿದ್ದಾರೆ.
9353125911

ಸುವರ್ಣ ಯಾತ್ರ
1) ಚಾರ್ಧಾಮ್ ಯಾತ್ರಾ ಯಮುನೋತ್ರಿ ಗಂಗೋತ್ರಿ, ಕೇದಾರನಾಥ್, ಬದ್ರಿನಾಥ್, ಹರಿದ್ವಾರ್, ಋಷಿಕೇಶ್, ದೆಹಲಿ, 22–5–24 & 12–6–24 13 ದಿನಗಳು
2) ನೇಪಾಳ ಪ್ರವಾಸ ಪಶುಪತಿನಾಥ ಅಯೋಧ್ಯ, ಮುಕ್ತಿನಾಥ, ಪೊಕ್ರ, ಕಟ್ಮಂಡು, ಮನೋಕಾಮನದೇವಿ 29–4–24 ಮತ್ತು 25–5–24, 9 ದಿನಗಳು.
3) ಕಾಶಿ ಪ್ರವಾಸ ಬಾಬಾ ವೈದ್ಯನಾಥ್ ಗಯಾ, ಬುದ್ಧ ಗಯಾ, ತ್ರಿವೇಣಿ ಸಂಗಮ ನೈಮಿಶಾರಣ್ಯ ಅಯೋಧ್ಯೆ 29–4–24 & 24–5–24 7 ದಿನಗಳು.
9019462508, 8660233673

25x40
Vidyaranyapuram
Semi-Commercial Site, West South Corner Old Demolish House for Sale, Price - 76 Lakhs
Near Apollo Pharmacy
8660105902

S.K. CONSTRUCTION
ಹೊಸ ಮನೆ ಕಟ್ಟ ಬೇಕೇ? ಚಿಂತೆ ಬೇಡ. ನಿಮ್ಮ ಕೈಗೆಟುಕುವ ಬೆಲೆಯಲ್ಲಿ ಅತಿ ಉತ್ತಮ ಗುಣಮಟ್ಟದಲ್ಲಿ Engineering Plan , 3D Elivation ಸಹಿತ ನಾವೇ Loan ಮಾಡಿ ನಿಮ್ಮ ಕನಸಿನ ಮನೆ ನಿರ್ಮಿಸಿ ಕೊಡುತ್ತೇವೆ.
9620528490

ಸೈಟ್ ಮಾರಾಟಕ್ಕಿದೆ
ಮುಡಾ ಅನುಮೋದಿತ ದಕ್ಷಿಣದಿಕ್ಕು 40x60 ಆರಾಧ್ಯ ಬಡಾವಣೆ, ವಿಜಯನಗರ 4ನೇ ಹಂತ, ಮೈಸೂರು
ಬೆಲೆ: 4250 Per Sqft
(Broker Excuse)
8050257887
8762705887

ಸೋಲಾರ್ ವಾಟರ್ ಹೀಟರ್
Solar Water Heater

ಸೇಲ್ಸ್, ಸರ್ವೀಸ್ ರಿಪೇರಿ, ಎಕ್ಸ್‌ಚೇಂಜ್ ಹಾಗೂ ಬಿಡಿ ಭಾಗಗಳಿಗಾಗಿ ಸಂಪರ್ಕಿಸಿ
Vinaykrishna
9611648636

ಸಂಪು ಮತ್ತು ಟ್ಯಾಂಕ್ ಕ್ಲೀನಿಂಗ್‌ಗಾಗಿ ಸಂಪರ್ಕಿಸಿ.
Mob: 9108566022



Solar Water Heater SALES & SERVICE
SUNZONE SOLAR SYSTEM
VM Double Road, Kuvempunagar, Mysuru
9845175443

ಮೊಬೈಲ್‌ನಲ್ಲಿ ಕೆಲಸ ವಾರದ ಸಂಬಳ
NO TARGET, TYPING WORK
ತಿಂಗಳಿಗೆ ರೂ.10,000 ರಿಂದ ರೂ.25,000 ಗಳಿಸಬಹುದು.
8884439666

ಸಂಪು ಮತ್ತು ಟ್ಯಾಂಕ್ ಕ್ಲೀನಿಂಗ್
Mob: 7204494854

ಶ್ರೀ ರಾಘವೇಂದ್ರ ಮೆಸ್
ಅಡುಗೆ ಕೆಲಸಕ್ಕೆ ಬೇಕಾಗಿದ್ದಾರೆ.
Boys and Girls PG
8th Cross, Near JSS Womens College, Saraswathipuram, Mysore
9986557226
9972520434

ಅರ್ಚಕರು ಬೇಕಾಗಿದ್ದಾರೆ
ಮಾರುತಿ ದೇವಸ್ಥಾನಕ್ಕೆ
Speech and Hearing Circle
ಬೋಗಾದಿ ಮೈಸೂರು
8073200346
7026346891

ವಿವಾಹ ಭಾಗ್ಯ
MRJ ಮ್ಯಾಟ್ರಿಮೋನಿ
ಎಲ್ಲಾ ಜಾತಿಯ ವಧು / ವರರಿಗಾಗಿ ಸಂಪರ್ಕಿಸಿ:
1) ಮೊದಲನೆ ಮದುವೆ
2) ಎರಡನೆ ಮದುವೆ
3) ವಿಧವೆ / ವಿದುರರು
FREE REGISTRATION
8904890413

ಬರವಣಿಗೆ ಕೆಲಸ
ಮನೆಯಿಂದಲೇ ಫಾರಂ ಭರ್ತಿಮಾಡುವ ಉದ್ಯೋಗ ಮಾಡಿ ಪ್ರತಿ 1 ಫಾರಂಗೆ 30 ರೂ.ಗಳನ್ನು ಪಡೆಯಿರಿ
9731891409

ಟ್ಯಾಂಕ್ ಮತ್ತು ಸೋಲಾರ್ ಸರ್ವೀಸ್
ಜರ್ಮನ್ ಟೆಕ್ನಾಲಜಿ ಬಳಸಿ ಸಂಪು, ಟ್ಯಾಂಕ್ ಮತ್ತು ಸೋಲಾರ್ ಸರ್ವೀಸ್ ಮಾಡಲಾಗುತ್ತದೆ.
Mob: 9008711654

MOBILE ರಿಪೇರಿ ಟ್ರೈನಿಂಗ್
18 ವರ್ಷದಿಂದ Mobile, Electrical, Electronics ಮತ್ತು Computer Hardware ರಿಪೇರಿ ಹೇಳಿಕೊಡುತ್ತಿರುವ ಏಕೈಕ ಸಂಸ್ಥೆಯಲ್ಲಿ ಶೀಘ್ರದಲ್ಲಿ ಹೊಸ ಬ್ಯಾಚ್ ಪ್ರಾರಂಭ. ಯಾವುದೇ ವಿದ್ಯಾರ್ಹತೆ ಹಾಗೂ ವಯೋಮಿತಿಯ ಅಗತ್ಯವಿಲ್ಲ. PG ವ್ಯವಸ್ಥೆಯು ಇರುತ್ತದೆ. ಕೂಡಲೇ ಸಂಪರ್ಕಿಸಿ:
SMM Institute,
ಶ್ರೀ ವೀರಭದ್ರೇಶ್ವರಸ್ವಾಮಿ ದೇವಸ್ಥಾನದ ಎದುರು, ದಳವಾಯಿ ಶಾಲೆಯ ರಸ್ತೆ, ಕೆಆರ್ ಮೊಹಲ್ಲಾ ಮೈಸೂರು.
Mob.: 9986926101

ಬೇಕಾಗಿದ್ದಾರೆ
ಗ್ರಾಫಿಕ್ ಡಿಸೈನರ್
Corel Draw & Photoshop ಕಲಿತಿರಬೇಕು
ಟಾಟಾ ಏಸ್ ಡ್ರೈವರ್
ಹೆಲ್ಪರ್ ಹುಡುಗರು
ಅಶೋಕ ರೋಡ್, ಮೈಸೂರು
Call: 97418 25653
0821-4267800

ಬೇಕಾಗಿದ್ದಾರೆ (JOB VACANCY)
ಮೈಸೂರು ಕೂರ್ಗಳ್ಳಿ ಇಂಡಸ್ಟ್ರಿಯಲ್ ಏರಿಯಾದಲ್ಲಿ ಎಕ್ಸೆಲ್ ಪಬ್ಲಿಕ್ ಶಾಲೆ ಹತ್ತಿರ ಇರುವ ಫರ್ನಿಚರ್ ಕಂಪನಿಗೆ, Carpenter (ಮರದ ಕೆಲಸ) 3 ಜನ ಎಲೆಕ್ಟ್ರಿಷಿಯನ್‌ಗೆ (Electrician) 3 ಜನ ಬೇಕಾಗಿದ್ದಾರೆ.
ಸಂಬಳ: 21000/–
ಸಂಪರ್ಕಿಸಿ: ಸಾಯಿ ಕೃಪ ಎಂಟರ್‌ಪ್ರೈಸಸ್
ಅಸ್ಮಾ: 9480842714
ಪ್ರಕಾಶ್: 7348833792

ತಕ್ಷಣ ಬೇಕಾಗಿದ್ದಾರೆ
TVS ಟಯೋಟಾ, ಬ್ರಿಟಾನಿಯಾ ಹಾರ್ಲಿಕ್ಸ್ Honda MNC ಕಂಪನಿಗಳಿಗೆ ನೇರವಾಗಿ 7th, 10th, PUC, ITI ಡಿಗ್ರಿ Diploma ದವರು 18000/– ರಿಂದ 60,000/– ವಸತಿಯೂಟವಿರುತ್ತದೆ.
9353185367

HOUSE FOR RENT
2 BHK ground floor, West facing in Agrahara.
Mob: 9071256559

FOR SALE
40x60
Site for sale
Bapuji Layout, Dattagalli.
Call: 9880273834

ಶ್ರೀ ಮಹಾಲಕ್ಷ್ಮೀ ಟ್ರಾವೆಲ್ಸ್
28–4: ನೇಪಾಳ ಮುಕ್ತಿನಾಥ, ಪಶುಪತಿನಾಥ್, ಕಠ್ಮಂಡು, ಪೋಕ್ರ, ಲುಂಬಿನಿ. 14–5: ಕಾಶಿ, ಗಯಾ, ಪ್ರಯಾಗ್‌ರಾಜ್, ಅಯೋಧ್ಯೆ. 21–5: ಚಾರ್‌ಧಾಮ್ ಯಾತ್ರೆ, ಕೇದಾರ್‌ನಾಥ್, ಬದರಿನಾಥ್, ಗಂಗೋತ್ರಿ, ಯಮುನೋತ್ರಿ 11–7: ಅಮರ್‌ನಾಥ್ ಯಾತ್ರೆ, ಶ್ರೀನಗರ, ಗುಲ್‌ಮಾರ್ಗ್, ಸೋನ್‌ಮಾರ್ಗ್.
9591017782, 9964527782

ಬೇಕಾಗಿದ್ದಾರೆ
ಕೈಗಾರಿಕಾ ಪ್ರದೇಶ, ಯಾದವಗಿರಿ, ಮೈಸೂರು.
ಮಹಿಳೆಯರು: 10,000.
ಹುಡುಗರು: 15,000.
ಕೆಲಸದ ಸಮಯ: 9 ರಿಂದ 6.30
Mob: 9448664411

ಕಳೆದಿದೆ
ಅಶ್ವಿನ್ ಚೇತನ್ ಜೋಸೆಫ್ ಪೈಸ್, ನಂ. 699, 5ನೇ ಮೇನ್, ಕೆಸರೆ 3ನೇ ಹಂತ, ಮೈಸೂರು. ದಿನಾಂಕ: 2-4-2024 ರುದು ನನ್ನ ತಾಯಿಯಾದ ಸೆಲಿನ್ ಪೈಸ್ ಹೆಸರಿನಲ್ಲಿರುವ ಮೈಸೂರು ತಾಲ್ಲೂಕು, ಕಸಬಾ ಹೋಬಳಿ, ಕೆಸರೆ ಗ್ರಾಮದ ಸರ್ವೆ ನಂ. 452 ರಲ್ಲಿ 30x40 ಅಡಿಗಳ ನಿವೇಶನದ ಸಂಖ್ಯೆ 4862ರ ಕ್ರಯ ಪತ್ರ (Sale Deed) Document No. 2583/92-93 ಕಳೆದುಹೋಗಿದೆ. ಸಿಕ್ಕಿದವರು ಸಂಪರ್ಕಿಸಿ:
Mob: 72044 07494

WANTED
Accountant
Male / Female, Age 25 to 40
Salary Rs.10,000/- to Rs.12000/-
Janapriya Home Appliances
Jayanagar, Mysore-14
9845 668800
93793 55559

N/W ಕಾರ್ನರ್ ಸೈಟು ಮಾರಾಟಕ್ಕಿದೆ
(ರೇರಾ ಅಪ್ರೂವಡ್) DTCP A ಖಾತೆ 27x40 15 ಲಕ್ಷಗಳು TVS ಫ್ಯಾಕ್ಟರಿ ಹತ್ತಿರ, ಮೈಸೂರು
9742198093

Nammane Construction Pvt. Ltd.
SITE FOR SALE
At prime location in Mysore.
20x30, 30x40, 30x50
At affordable price.
9972825343, 8095996669

WANTED SITES
@ Dattagalli, Devanur, Vijayanagar, Yelwala, Mysore-Bannur Road, T.N. Pura Road.
Quick Regn.
95388-39926

WANTED
Teaching staff
for reputed institution (Experience preferred) for all subjects. Transport facilties available. Drop your resume through WhatsApp Contact No.
8971577685 / 9980631121

WANTED
RESIDENTIAL / REGULAR TEACHER IN ALL SUBJETS
Prestigious CBSE School in Mysore City.
Interested candidates contact:
9483508822 & 6361711308
Email: supremepublicschool.sps@gmail.com

FOR SALE
30x50 Newly Constructed House for sale, East facing, 3 BHK near J.P. Nagar Ring Road.
9611537157 / 9986919694

ಬೇಕಾಗಿದ್ದಾರೆ
ಟೆಲಿಕಾಲಿಂಗ್ ಮಾಡಲು ಹುಡುಗಿಯರು ಬೇಕಾಗಿದ್ದಾರೆ (ಕನ್ನಡ ಮಾತನಾಡಬಲ್ಲವರು)
ಸ್ಥಳ: ಚಾಮುಂಡಿಪುರಂ ಮತ್ತು ಎನ್.ಆರ್.ಮೊಹಲ್ಲಾ ಸಂಬಳ: 10000/–
Team Leader ಬೇಕಾಗಿದ್ದಾರೆ
ಕಂಪ್ಯೂಟರ್ ಜ್ಞಾನವುಳ್ಳವರು
ಸಂಬಳ–12000/–
8150005111

ಬೇಕಾಗಿದ್ದಾರೆ
ಮೈಸೂರು ಹೆಬ್ಬಾಳಿನ ಕಂಪನಿಯಲ್ಲಿ ಕೆಲಸ ಮಾಡಲು ಹುಡುಗರು, ಹುಡುಗಿಯರು, ಗಂಡಸರು, ಹೆಂಗಸರು, ಟೈಲರುಗಳು ಮತ್ತು ಹೆಲ್ಪರ್‌ಗಳು
ಐಟಿಐ (ITI) ಆದವರು ಬೇಕಾಗಿದ್ದಾರೆ.
ESI & PF ವಾರದ ರಜೆ ಇರುತ್ತದೆ.
7795285485
8105249880

WANTED
- TYPIST
- INSURANCE EXECUTIVE
- PHARMACIST

Mob: 9972982665
Bhanavi Hospital

20X30 NEWLY CONSTRUCTION HOUSE FOR SALE
West facing, North door.
G+2, 3 BHK, Dattagalli.
9900251194 / 9738884777

WANTED CAPTAINS
Male / Female
Full time / Part time
Contact:
Bopy's Bar & Restaurant
Hunsur Road, Mysore.
Mob: 9606632166

FOR RENT
1) First Floor - 4 BHK: (18 Squares)
2) Second Floor, 4 BHK: (18 Squares)
Suitable for PG, Recreation Club, No. 1555, Vijayanagar 2nd Stage, Near Canara Bank, H.T. Double Road.
Contact Mob: 9663604699

Free Beautician Course
(Only products charges)
Contact:
Mob: 9901257056

ಉಚಿತ ಭವಿಷ್ಯ ಶಾಶ್ವತ ಪರಿಹಾರ
ಶ್ರೀ ಸಾಯಿ ಕೃಷ್ಣ ಜ್ಯೋತಿಷ್ಯಾಲಯ
ಪಂ|| ಕೃಷ್ಣ ಪ್ರಸಾದ್
ಮನೆಯಲ್ಲಿ ಅಶಾಂತಿ ಸತಿಪತಿ ಕಲಹ ಸಾಲಬಾದೆ, ದಾಂಪತ್ಯ ಸಮಸ್ಯೆ ಭೂಮಿವಶ ಸ್ತ್ರೀಪುರುಷ, ಶತ್ರುಕಾಟ, ಕೋರ್ಟ್‌ಕೇಸ್, ಲೈಂಗಿಕ ಸಮಸ್ಯೆ, ನೀವು ಬೇರೆ ಜ್ಯೋತಿಷ್ಯರಲ್ಲಿ ಹಣ ನಮ್ಮದಿ ವಿಶ್ವಾಸ ಕಳೆದುಕೊಂಡಿದ್ದಲ್ಲಿ ನಿಮ್ಮ ಜೀವನದ ಯಾವುದೇ ಗುಪ್ತ ಸಮಸ್ಯೆ ಇದ್ದರೂ ಕೊಳ್ಳೇಗಾಲದ 500 ವರ್ಷದ ಪ್ರಾಚೀನ ಕಾಲದ ಯಂತ್ರ ವಿದ್ಯೆ 9 ದಿನದಲ್ಲಿ ಶಾಶ್ವತ ಪರಿಹಾರ ಶತಸಿದ್ಧ
9535161120

ಅಡುಗೆ ಹೆಲ್ಪರ್ ಬೇಕಾಗಿದ್ದಾರೆ
ಹಾಸ್ಟೆಲ್‌ನಲ್ಲಿ ಅಡುಗೆ ಹೆಲ್ಪರ್ ಕೆಲಸಕ್ಕೆ ಹುಡುಗರು ಬೇಕಾಗಿದ್ದಾರೆ. ಸಂಬಳ: 10000 ಊಟ, ವಸತಿ ಉಚಿತ. ಸ್ಥಳ: ಸುಳ್ಯ
9902176566

The Creative Tales Summer Camp
From April 10 - May 10
Venue: Rajarajeshwari Nagar, BEML Layout, Bogadi 2nd Stage.
Activities: Music, Shloka, Art & Craft, Clay Modelling, Candle Making and much more.
Fees: Rs. 2,000/-
Contact: 9108647168

FOR SALE
1. 20x30, 30x40, 30x50 Near Defence Apartments, HD Kote Road
2. 30x50 Near Varuna Lake
3. 2&3 BHK Flats at Ramkrishna Nagar
4. 100x100 Farm House @ KRS Back Water Attach 20L
5. 40x72, 35x45 House Vidyaranyapuram
6. 20x30 House Giridarshini Layout
7. 30x45 New House Near JP Nagar

PRAKRUTHI PROPERTIES
95386 90359, 90359 90359

ಬಾಡಿಗೆಗೆ
ಚಾಲ್ತಿಯಲ್ಲಿರುವ ಬೇಕರಿ ಎಲ್ಲಾ ಸಲಕರಣೆಯೊಂದಿಗೆ ಆರ್.ಟಿ.ಆರ್. ಕಾಂಪ್ಲೆಕ್ಸ್ ವಿದ್ಯಾರಣ್ಯಪುರಂ ಮೈಸೂರು–08 (ಬುಕ್‌ಸ್ಟೋರ್‌ಗೆ ಕೆಲಸಕ್ಕೆ ಹುಡುಗರು ಬೇಕಾಗಿದ್ದಾರೆ)
9980135125

FOR SALE
600 Sqft Commercial Property with Building for Sale attached to Kaveri Circle Hebbal Mysore
9901994830

ಸ್ಟಾರ್ ಮ್ಯಾರೇಜಸ್
ಎಲ್ಲಾ ಜನಾಂಗದ ವಧು–ವರರು ವಿದುರರು–ವಿಧವೆಯರು ಹಾಗೂ ವಿಚ್ಛೇದಿತರು
ಸಂಪರ್ಕಿಸಿ:
8197607559

ಉತ್ತಮ ತಳಿಯ ಹಸುಗಳು ಮಾರಾಟಕ್ಕೆ ದೊರೆಯುತ್ತವೆ.
ಗೀರ್, ಹೆಚ್ ಎಫ್, ಜರಸೀ, ಇತ್ಯಾದಿ ತಳಿಯ ಹಸುಗಳು ಮಾರಾಟಕ್ಕೆ ದೊರೆಯುತ್ತದೆ.
ಸಂಪರ್ಕಿಸಿ: ಉಮಕಾಂತ ಮಿತ್ರ, ಮಹಾರಾಜ ಪೂಜಾರಿ ಫಿಶ್ ಲ್ಯಾಂಡ್ ಹತ್ತಿರ, ಕಳಸವಾಡಿ, ಮೈಸೂರು–ಬೆಂಗಳೂರು ಹೈವೆ
9388159977

ಅನುಬಂಧ ಮ್ಯಾರೇಜಸ್
ವಧುವರರನ್ನು ಹುಡುಕಲು ಸಹಾಯ ಬೇಕೇ? ನಮಗೆ ಕರೆ ಮಾಡಿ
6361740552

Montessori Teachers WANTED
MYSORE
9739606258
9739548823

Office ಕೆಲಸಕ್ಕೆ
21 ಯುವತಿಯರು ತಕ್ಷಣ Office ಕೆಲಸಕ್ಕೆ ಬೇಕಾಗಿದ್ದಾರೆ
ಸ್ಥಳ: ಮೇಟಗಳ್ಳಿ,
Time : 9.30 am 6.00pm
ಭಾನುವಾರ ರಜೆ
(JOB-Telecaling)
ಸಿಂಧು: 9008793561

HOUSE FOR LEASE
at Vijayanagar 4th Stage, Near NPS School 2 BHK in the 1st Floor with 2 Sit Outs Coverd Car Parking Facilities available East facing building with North end Main door
9686456679
9480792529

ಬೇಕಾಗಿದ್ದಾರೆ
1) ಸೆಕ್ಯೂರಿಟಿ ಗಾರ್ಡ್‌ಗಳು
ಸ್ಥಳ: 1) ದಟ್ಟಗಳ್ಳಿ 2) ಸರಸ್ವತಿಪುರಂ 3) ಹೆಬ್ಬಾಳ್ 4) ಸಿಟಿ ಸುತ್ತಮುತ್ತ 12 ಗಂಟೆ ಪಾಳಿ
2) ಮಹಿಳಾ ಹೌಸ್ ಕೀಪರ್‌ಗಳು
ಸ್ಥಳ : ಮೇಟಗಳ್ಳಿ ಹಿನಕಲ್ ಹಾಗು ಸಿಟಿ
3) ಫೀಲ್ಡ್ ಎಕ್ಸಿಕ್ಯೂಟಿವ್ (ಸೆಕ್ಯೂರಿಟಿ ಫೀಲ್ಡ್ ಅನುಭವವಿರಬೇಕು)
ಸುರಕ್ಷವೆಲ್ 9686422400 9242406261

ಮೈಸೂರಿನ ಸಸ್ಯಾಹಾರಿ ಹೋಟೆಲ್ ಒಂದಕ್ಕೆ
- ಕೌಂಟರ್ ಬಾಯ್ – 4
- ಕಾಫೀ & ಟೀ ಭಟ್ಟರು –2
- ನಾರ್ತ್ ಇಂಡಿಯನ್ ಭಟ್ಟರು –1
- ದೋಸೆ ಭಟ್ಟರು – 2
- ಹೆಲ್ಪರ್‌ಗಳು – 2
- ಸರ್ವಿಸ್ ಬಾಯ್ –4 ಬೇಕಾಗಿದ್ದಾರೆ

9449646645

ಬೇಕಾಗಿದ್ದಾರೆ
ಸೆಕ್ಯೂರಿಟಿ ಸೂಪರ್‌ವೈಸರ್ ಮತ್ತು ಸೆಕ್ಯೂರಿಟಿ ಗಾರ್ಡ್ ಬೇಕಾಗಿದ್ದಾರೆ. ಉತ್ತಮ ವೇತನ, ಪಿಎಫ್ ಮತ್ತು ಇಎಸ್‌ಐ ಸೌಲಭ್ಯವಿರುತ್ತದೆ.
ಸ್ಥಳ: ನಂಜನಗೂಡು, ಮೈಸೂರು ಮತ್ತು ಕುಶಾಲನಗರ
7829393555
9741515239

ಕೂಡಲೇ ಬೇಕಾಗಿದ್ದಾರೆ
ನಮ್ಮ ಸಂಸ್ಥೆಗೆ ಕೆಲಸ ಮಾಡಲು ಸಮಾಜಸೇವಾ ಮನೋಭಾವದ ವಿದ್ಯಾವಂತ ಯುವತಿಯರು ಬೇಕಾಗಿದ್ದಾರೆ.
ಆಕರ್ಷಕ ಸಂಬಳ
6361740552

ಮನೆ ಬಾಡಿಗೆಗೆ/ಭೋಗ್ಯಕ್ಕೆ
#69 B Block, ಶಿಕ್ಷಕರ ಬಡಾವಣೆ ಹಳೆ ಕೆಸರೆ ಮೈಸೂರು
2 ಬೆಡ್ ರೂಂ, ಹಾಲ್ ಕಿಚನ್ ಡ್ಯೂಪ್ಲೆಕ್ಸ್ ಹಾಲ್ ಇರುವ
MIT Collageನ ಹತ್ತಿರ ವಿರುವ ಮನೆ
8762772429
9243548288

ಬೇಕಾಗಿದ್ದಾರೆ
ನಗರದ ಅಂಗಡಿಯೊಂದಕ್ಕೆ ತಿಂಡಿಗಳನ್ನು ತಯಾರಿಸಲು
- ಹೆಂಗಸರು * ಹೆಲ್ಪರ್
- ಕೌಂಟರ್ ಸೇಲ್, * ಕ್ಯಾಶಿಯರ್
- ಅಡುಗೆ ಕೆಲಸಕ್ಕೆ ಬೇಕಾಗಿದ್ದಾರೆ.

9606116663/4

AIR COOLER EXCHANGE OFFER UPTO RS 4000 OFF
SERVICE CENTER FOR AIR COOLER SYMPHONY, KENSTAR ORIENT & MICROWAVE OVEN SERVICES INDIAN/IMPORTED MICROWAVE OVEN SERVICES
9845963421, 9900237315
0821-4266495

ಮೈಸೂರು ಮಿತ್ರ ಓದುಗರ ಗಮನಕ್ಕೆ
ಪತ್ರಿಕೆಯಲ್ಲಿ ಪ್ರಕಟವಾಗುವ ಜಾಹೀರಾತುಗಳು ವಿಶ್ವಾಸಪೂರ್ಣವೇ ಆದರೂ ಅವುಗಳಲ್ಲಿನ ಮಾಹಿತಿ, ವಸ್ತು ಲೋಪ ದೋಷ, ಗುಣಮಟ್ಟ ಮುಂತಾದವುಗಳ ಕುರಿತು ಆಸಕ್ತ ಸಾರ್ವಜನಿಕರು ಜಾಹೀರಾತುದಾರರೊಡನೆಯೇ ವ್ಯವಹರಿಸಬೇಕಾಗುತ್ತದೆ. ಅದಕ್ಕೆ ಪತ್ರಿಕೆ ಜವಾಬ್ದಾರಿಯಾಗುವುದಿಲ್ಲ.
–ಜಾಹೀರಾತು ವ್ಯವಸ್ಥಾಪಕರು

ಮತ್ತಷ್ಟು ವರ್ಗೀಕೃತ ಜಾಹೀರಾತು ಪುಟ 10 ರಲ್ಲಿ

ಮೈಸೂರು ಮಿತ್ರ

ಒಂದನೇ ಪುಟದಿಂದ

ಯದುವೀರ್ ಅವಿರೋಧ ಆಯ್ಕೆಗೆ ಸಹಕರಿಸಿ

ಮೈಸೂರನ್ನು ಇಡೀ ವಿಶ್ವದಲ್ಲೇ ಅತ್ಯಂತ ಸುಂದರ ನಗರವಾಗಿ ಕಟ್ಟಿದ್ದಾರೆ. ಅನ್ನ, ಅಕ್ಷರ, ಆರೋಗ್ಯ ಕೊಟ್ಟು ಹೊಸ ಆವಿಷ್ಕಾರಗಳನ್ನು ನಮ್ಮ ನಾಡಿಗೆ ಕೊಟ್ಟಂತಹ ಕೀರ್ತಿಪುರುಷರು ಯದುವಂಶದ ಅರಸರು. ಅಂತಹ ಅರಸರ ಕುಡಿ ಇಂದು ಮೈಸೂರು–ಕೊಡಗು ಲೋಕಸಭಾ ಕ್ಷೇತ್ರದಲ್ಲಿ ಪ್ರತಿನಿಧಿಯಾಗಲು ಬಯಸಿ ಚುನಾವಣೆಗೆ ಸ್ಪರ್ಧೆ ಮಾಡಿದೆ. ಇಲ್ಲಿ ಬಿಜೆಪಿ, ಕಾಂಗ್ರೆಸ್ ಮತ್ತು ಜೆಡಿಎಸ್ ಎನ್ನುವುದಕ್ಕಿಂತಲೂ ಯದುವಂಶ ಮುಖ್ಯವಾಗಬೇಕು. ಯಾವುದೇ ರಾಜಕೀಯ ಇಲ್ಲಿ ಬೇಡವಾಗಬೇಕು ಎಂದರು.

ಉಳಿದ 27 ಕ್ಷೇತ್ರದಲ್ಲಿ ಜಿದ್ದಾಜಿದ್ದಿ ನಡೆಯಲಿ: ಅವಿರೋಧ ಆಯ್ಕೆ ಮೂಲಕ ಇಡೀ ಕರ್ನಾಟಕದಲ್ಲೇ ಮಾದರಿ ಚುನಾವಣೆ ನಮ್ಮ ಮೈಸೂರು ಕೊಡಗು ಕ್ಷೇತ್ರದಲ್ಲಿ ಆಗಲಿ. ಉಳಿದ 27 ಕ್ಷೇತ್ರಗಳಲ್ಲಿ ಜಿದ್ದಾಜಿದ್ದಿ ಸ್ಪರ್ಧೆ ನಡೆಯಲಿ. ಆದರೆ ಇಲ್ಲಿ ಅವಿರೋಧ ಆಯ್ಕೆಗೆ ಸಿಎಂ ಸಿದ್ದರಾಮಯ್ಯ, ಡಿಸಿಎಂ ಡಿ.ಕೆ.ಶಿವಕುಮಾರ್ ಸೇರಿದಂತೆ ಕಾಂಗ್ರೆಸ್‌ನವರು ಸಹಕಾರ ನೀಡಬೇಕು. ಮೈಸೂರು ರಾಜವಂಶವು ನಮ್ಮನ್ನು ಅತ್ಯಂತ ಸಹನೆಯಿಂದ ಕಾಪಾಡಿದೆ. ಹಾಗಾಗಿ ಪಕ್ಷ ರಾಜಕಾರಣ ಬದಿಗೊತ್ತಿ ಯಾವುದೇ ಚುನಾವಣೆ ಇಲ್ಲದೇ ಮೈಸೂರು ಅರಸರನ್ನು ದಿಲ್ಲಿಯ ಲೋಕಸಭೆಗೆ ಸರ್ವಾನುಮತದಿಂದ ಆಯ್ಕೆ ಮಾಡಲು ಸಹಕಾರ ನೀಡಬೇಕು ಎಂದು ಕೋರಿದರು.

ಜಾತಿ ಮುನ್ನೆಲೆಗೆ ತರಬೇಡಿ: ಮೈಸೂರು ಅಂದರೆ ಇಡೀ ವಿಶ್ವದಲ್ಲಿ ಪ್ರವಾಸೋದ್ಯಮ ಬೆರಗು. ಇದಕ್ಕೆ ಕಾರಣ ನಮ್ಮ ಮಹಾರಾಜರು. ಮೈಸೂರು–ಕೊಡಗು ಲೋಕಸಭಾ ಚುನಾವಣೆ ಸಂಬಂಧ ಒಕ್ಕಲಿಗರಿಗೆ ಓಟ್ ಕೊಡಿ, ಒಕ್ಕಲಿಗರಿಗೆ ಮೋಸ ಆಯಿತು ಎನ್ನುವ ಮಾತುಗಳು ಕೇಳಿ ಬರುತ್ತಿವೆ. ಕಾಂಗ್ರೆಸ್‌ನ ಹಿರಿಯ ನಾಯಕರಿದ್ದೀರಿ, ತಾವು ಮುಖ್ಯಮಂತ್ರಿಗಳು, ಉಪಮುಖ್ಯಮಂತ್ರಿಗಳಾಗಿದ್ದೀರಿ. ಕಾಂಗ್ರೆಸ್ ಜಾತ್ಯಾತೀತ ನಿಲುವು ಹೊಂದಿದೆ ನೀವು ಯಾವುದೇ ಜಾತಿ ವಿಚಾರ ದಯವಿಟ್ಟು ಮಾತನಾಡಬೇಡಿ ಎಂದು ಸಿದ್ದರಾಮಯ್ಯ, ಡಿ.ಕೆ.ಶಿವಕುಮಾರ್ ಅವರಲ್ಲಿ ಮನವಿ ಮಾಡಿದರು. ಜಾತಿ, ಮತ, ಧರ್ಮ, ಪಂಥದ ವಿಚಾರದಲ್ಲಿ ಚುನಾವಣೆಗಳೂ ಬೇಡ. ಮತ ಕೇಳುವುದೂ ಬೇಡ. ಭೂಮಿ ಪುತ್ರರಾದ ನಾವೆಲ್ಲರೂ ಒಕ್ಕಲಿಗರೇ. ಅನ್ನದಾತರ ಬದುಕು ಹಸನಾಗಲು ಕನ್ನಂಬಾಡಿಕಟ್ಟೆ, ವಾಣಿವಿಲಾಸ ಅಣೆಕಟ್ಟು ಕಟ್ಟಿ ನೀರು ಕೊಟ್ಟವರು ನಮ್ಮ ಅರಸರು. ನಾವು ಅನ್ನದಾತರು ಯಾವುದೇ ಜಾತಿ, ಧರ್ಮದವರಲ್ಲ. ಯಾವುದೇ ಉಪಜಾತಿಯೂ ನಮಗೆ ಇಲ್ಲ. ನಾವೆಲ್ಲರೂ ಒಂದೇ ಎಂದರು. ಅರಮನೆಯ ಅನುಕೂಲ ನಮ್ಮ ಜನರಿಗೆ ಬಹಳ ಆಗಿದೆ. ಸಿದ್ದರಾಮಯ್ಯನವರೇ ನೀವು ಮೈಸೂರಲ್ಲಿ ಓದಿದ್ದೀರಿ, ಓಡಾಡಿದ್ದೀರಿ. ವಿದ್ಯಾರ್ಥಿಯಾಗಿ, ವಕೀಲರಾಗಿ, ಶಾಸಕರಾಗಿ, ಮಂತ್ರಿಯಾಗಿಯೂ ಮೈಸೂರನ್ನು ನೋಡಿದ್ದೀರಿ. ನಿಮಗೆ ಎಲ್ಲವೂ ಗೊತ್ತಿದೆ. ಯದುವೀರರ ಅವಿರೋಧವಾಗಿ ಆಯ್ಕೆಗೆ ತಾವು ಸಹಕಾರ ನೀಡಬೇಕು. ಇದರಿಂದ ಮೈಸೂರಿನ ಗೌರವ ಹೆಚ್ಚಾಗಲಿದೆ. ಎಲ್ಲಕ್ಕಿಂತಲೂ ಕಾಂಗ್ರೆಸ್ ಗೌರವ ಕೂಡ ಜಾಸ್ತಿಯಾಗಲಿದ್ದು, ಈ ಒಂದು ಪ್ರಯೋಗ ಮಾಡುವಂತೆ ಮತದಾರರು, ಪ್ರಜೆಗಳ ಪರವಾಗಿ ವಿನಂತಿಸುವುದಾಗಿ ಹೇಳಿದರು.

ಶಾಸಕ ಟಿ.ಎಸ್.ಶ್ರೀವತ್ಸ, ಮಾಜಿ ಎಂಎಲ್‌ಸಿಗಳಾದ ಡಿ.ಮಾದೇಗೌಡ, ಸಿದ್ದರಾಜು, ಬಿಜೆಪಿ ನಗರಾಧ್ಯಕ್ಷ ಎಲ್.ನಾಗೇಂದ್ರ, ಜಿಲ್ಲಾಧ್ಯಕ್ಷ ಎಲ್.ಆರ್.ಮಹದೇವಸ್ವಾಮಿ, ಬಿಜೆಪಿ ಮುಖಂಡರಾದ ರಾಜೇಂದ್ರ, ಕವೀಶ್‌ಗೌಡ, ರಘು ಕೌಟಿಲ್ಯ, ಬಿ.ಎಂ.ರಘು, ಮೈಸೂರು ಜಿಪಂ ಮಾಜಿ ಸದಸ್ಯ ಅಮಿತ್ ದೇವರಹಟ್ಟಿ ಮತ್ತಿತರರು ಹಾಜರಿದ್ದರು.

ಚಾಮುಂಡೇಶ್ವರಿಯಲ್ಲಿ ಸ್ಪರ್ಧಿಸೋಣ ಬನ್ನಿ...

ಅಭಿವೃದ್ಧಿ ಕಾರ್ಯಗಳನ್ನು ಪ್ರಶ್ನೆ ಮಾಡುತ್ತಿದ್ದಾರೆ ಎಂದು ಆಕ್ರೋಶ ವ್ಯಕ್ತಪಡಿಸಿದರು. ಚಾಮುಂಡೇಶ್ವರಿ ಕ್ಷೇತ್ರದಲ್ಲಿ ನೀವು ಶಾಸಕರಾಗಿದ್ರಿ. ನಾನು ಕೂಡ ಈಗಲೂ ಶಾಸಕನಾಗಿದ್ದೇನೆ. ನೀವು ಮಾಡಿರುವ ಅಭಿವೃದ್ಧಿ ಕಾರ್ಯಗಳೇನು ಅಂತ ಶ್ವೇತ ಪತ್ರ ಹೊರಡಿಸಿ, ನಾನು ಏನೇನು ಅಭಿವೃದ್ಧಿ ಕಾರ್ಯ ಮಾಡಿದ್ದೇನೆ ಎಂದು ಶ್ವೇತ ಪತ್ರ ಹೊರಡಿಸುತ್ತೇನೆ. ಇದಕ್ಕೆ ನೀವು ಸಿದ್ದರಿದ್ದೀರಾ ಎಂದು ಜಿ.ಟಿ.ದೇವೇಗೌಡರು ಸಿದ್ದರಾಮಯ್ಯರಿಗೆ ಸರಣಿ ಸವಾಲು ಹಾಕಿದರು. ನೀವು ಸ್ಪರ್ಧೆ ಮಾಡಿದ್ದ ಚುನಾವಣೆಗಳಲ್ಲಿ ಪ್ರಚಾರಕ್ಕೆ ಹೋಗದಿದ್ದರೂ ಗೆಲುವು ಸಾಧಿಸಲು ನಿಮಗೆ ಸಾಧ್ಯವಾಯಿತು. ಇಲ್ಲವೆಂದರೆ ನಿಮಗೆ ಜಯ ಕಾಣಲು ಸಾಧ್ಯವಾಗುತ್ತಿತ್ತೆ ಎಂದು ಪ್ರಶ್ನಿಸಿದರು.

ಆದರೆ ನನ್ನ ಸೋಲಿಸಲು ನೀವು ಎಷ್ಟು ಬಾರಿ ಪ್ರಯತ್ನ ಪಟ್ಟಿದ್ದೀರಾ. ಆದರೆ ಅದು ಸಾಧ್ಯವಾಗಲಿಲ್ಲ. ನನ್ನ ಕಾಯಲು ದೇವರಿಲ್ಲವೆ, ಧರ್ಮವಿಲ್ಲವೆ ಎಂದು ಪ್ರಶ್ನಿಸಿದ ಜಿ.ಟಿ.ದೇವೇಗೌಡರು, ನೀವು ಚಾಮುಂಡೇಶ್ವರಿ ಕ್ಷೇತ್ರದಲ್ಲಿ ಸೋತ ನಂತರ ಆ ವಿಚಾರ ಮುಗಿದು ಹೋಯಿತು. ಆದರೆ ಪದೇ ಪದೆ ಅದೇ ವಿಷಯವಾಗಿ ಏಕೆ ಮಾತನಾಡುತ್ತೀರಾ ಎಂದು ಮರು ಪ್ರಶ್ನಿಸಿದರು.

ಯತೀಂದ್ರನ ಕಮಿಷನ್ ದಂಧೆ

ಎಷ್ಟು ದಿನ ಹೀಗೆ ನಡೆಸುತ್ತೀರಾ, ನಡೆಸಿ ನೋಡೋಣ ಎಂದು ಜಿ.ಟಿ.ದೇವೇಗೌಡರು ಸವಾಲು ಹಾಕಿದರು. ನಾನು ನಿಮ್ಮನ್ನು 35 ಸಾವಿರ ಮತಗಳ ಅಂತರದಿಂದ ಸೋಲಿಸಿದಾಗಲೂ ನಿಮ್ಮ ಬಗ್ಗೆ ಈ ತನಕ ಅಗೌರವದಿಂದ ಮಾತನಾಡಿಲ್ಲ. ಇದನ್ನು ಅರಿತು ಇನ್ನು ಮುಂದಾದರೂ ನನ್ನ ಬಗ್ಗೆ ಮೌನವಾಗಿ, ಮರ್ಯಾದೆಯಿಂದ ಇರಿ ಎಂದು ಸಲಹೆ ರೂಪದಲ್ಲಿ ಎಚ್ಚರಿಕೆ ನೀಡಿದರು. ವರುಣ ಕ್ಷೇತ್ರದಲ್ಲಿ ನೀವು ಬಿಜೆಪಿಯವರ ಬೆಂಬಲ ಪಡೆದು ಗೆದ್ದಿಲ್ವಾ ಎಂದು ಪ್ರಶ್ನಿಸಿದ ಜಿ.ಟಿ.ದೇವೇಗೌಡರು, ಸಿದ್ದರಾಮಯ್ಯ ವಿರುದ್ಧ ರೋಷಾಗ್ನಿ ಹೊರ ಹಾಕಿದರು.

ಸುಮಲತಾ ಬಿಜೆಪಿ ಸೇರ್ಪಡೆ ನಿರ್ಧಾರ


ಪಕ್ಷೇತರರಾಗಿ ಯಾವುದೇ ಸಂಸದರು ಆಯ್ಕೆಯಾಗಿರಲಿಲ್ಲ. ಆದರೆ ಮಂಡ್ಯದ ಜನತೆ ನನ್ನನ್ನು ಆಯ್ಕೆ ಮಾಡಿದ್ದೀರಿ. ನೀವು ನನ್ನನ್ನು ತಾಯಿಯಂತೆ ನೋಡಿದ್ದೀರಿ. ತಾಯಿ ಎಂದಿಗೂ ಮಕ್ಕಳನ್ನು ಬಿಟ್ಟು ಹೋಗುವುದಿಲ್ಲ. ಅದರಂತೆ ನಾನೂ ಸಹ ಮಂಡ್ಯ ಜಿಲ್ಲೆಯನ್ನು ಬಿಟ್ಟು ಹೋಗುವುದಿಲ್ಲ ಎಂದು ಭಾವುಕರಾಗಿ ನುಡಿದರು.

ಬಿಜೆಪಿಯವರು ಗೌರವಯುತವಾಗಿ ನಡೆಸಿಕೊಂಡಿದ್ದಾರೆ: ಬಿಜೆಪಿಯವರು ನನ್ನನ್ನು ಗೌರವಯುತವಾಗಿ ನಡೆಸಿಕೊಂಡಿದ್ದಾರೆ. ಪಕ್ಷೇತರ ಸಂಸದೆಯಾದ ನನಗೆ ಕ್ಷೇತ್ರದ ಅಭಿವೃದ್ಧಿಗಾಗಿ ಪ್ರಧಾನಿ ನರೇಂದ್ರ ಮೋದಿ ನೇತೃತ್ವದ ಕೇಂದ್ರ ಸರ್ಕಾರ 400 ಕೋಟಿ ರೂ. ಅನುದಾನ ನೀಡಿದೆ. ಬಿಜೆಪಿ ನೇತೃತ್ವದ ಕೇಂದ್ರ ಸರ್ಕಾರ ವಿಶ್ವವೇ ತಿರುಗಿ ನೋಡುವಂತಹ ಆಡಳಿತ ನೀಡುತ್ತಿದೆ. ಪ್ರಧಾನಿ ನರೇಂದ್ರ ಮೋದಿಯವರು ಎಂದಿಗೂ ಹಣ ಅಥವಾ ಅಧಿಕಾರಕ್ಕೆ ಬೆಲೆ ಕೊಟ್ಟವರಲ್ಲ. ಅಭಿವೃದ್ಧಿಗೆ ಒತ್ತು ನೀಡಿದವರು. ಜಿಲ್ಲೆ ಹಾಗೂ ರಾಜ್ಯ ಅಭಿವೃದ್ಧಿಯಾದರೆ ದೇಶವೇ ಅಭಿವೃದ್ಧಿಯಾಗುತ್ತದೆ ಎಂಬ ಪರಿಕಲ್ಪನೆಯನ್ನು ಹೊಂದಿರುವ ಮೋದಿಯವರ ನಿರ್ಧಾರಕ್ಕೆ ನನ್ನ ಸಹಮತ ಇದೆ. ಇದೇ ಕಾರಣಕ್ಕಾಗಿ ಬಿಜೆಪಿ ಸೇರುತ್ತಿದ್ದೇನೆ ಎಂದು ಹೇಳಿದರು.

ಸಾಧನೆ ಕೈಪಿಡಿ ಬಿಡುಗಡೆ: ಇದೇ ವೇಳೆ ತಮ್ಮ 5 ವರ್ಷಗಳ ಸಾಧನೆ ಕೈಪಿಡಿ ಬಿಡುಗಡೆ ಮಾಡಿದ ಅವರು, ಮಂಡ್ಯ ಜಿಲ್ಲೆಯ ಮಳವಳ್ಳಿ ಹುಚ್ಚೇಗೌಡರ ಸೊಸೆಯಾಗಿ ಅಂಬರೀಶ್ ಅವರ ಪತ್ನಿಯಾಗಿ ಉತ್ತಮ ಕೆಲಸ ಮಾಡಿದ್ದೇನೆ ಎಂಬ ಹೆಮ್ಮೆ ನನಗಿದೆ. ನಾನು ಸಂಸದಳಾದ ನಂತರ ಎರಡು ವರ್ಷ ಕೊರೊನಾದಿಂದಾಗಿ ಸಾಕಷ್ಟು ಅಭಿವೃದ್ಧಿ ಕಾರ್ಯಗಳಿಗೆ ಹಿನ್ನಡೆಯಾಯಿತು. ಉಳಿದ ಮೂರು ವರ್ಷದಲ್ಲಿ ಶಕ್ತಿ ಮೀರಿ ಜಿಲ್ಲೆಯ ಅಭಿವೃದ್ಧಿಗೆ ಕೆಲಸ ಮಾಡಿದ್ದೇನೆ. ಇಂದು ನರೇಗಾ ಕಾಮಗಾರಿಯಲ್ಲಿ ಮಂಡ್ಯ ಜಿಲ್ಲೆ ರಾಜ್ಯದಲ್ಲೇ ಎರಡನೇ ಸ್ಥಾನ ಪಡೆದಿದೆ ಎಂದರು. ನನಗೆ ಸಿಕ್ಕ ಅವಕಾಶದಲ್ಲಿ ಉತ್ತಮ ಕೆಲಸ ಮಾಡಿದ್ದೇನೆ. ಕೆಆರ್‌ಎಸ್ ಅಣೆಕಟ್ಟೆಗೆ ಗಣಿಗಾರಿಕೆಯಿಂದಾಗುತ್ತಿದ್ದ ಅನಾಹುತವನ್ನು ತಡೆಯುವಲ್ಲಿ ಯಶಸ್ವಿಯಾದೆ. ಹಲವಾರು ಸಮುದಾಯ ಭವನಗಳನ್ನು ನಿರ್ಮಿಸಿದ್ದೇನೆ. ಸ್ಲಂಗಳಲ್ಲಿ ಮನೆಗಳನ್ನು ನಿರ್ಮಿಸುವ ಮೂಲಕ ಅಂಬರೀಶ್ ಅವರ ಕನಸಿನ ಯೋಜನೆಯನ್ನು ಮುಂದುವರೆಸಿದ್ದೇನೆ. ಮೈಷುಗರ್ ಹಾಗೂ ಪಾಂಡವಪುರ ಸಕ್ಕರೆ ಕಾರ್ಖಾನೆಗೆ ಮರು ಚಾಲನೆ ಸಿಗುವಂತೆ ಮಾಡಿ, ಮೈಷುಗರ್‌ಗೆ 50 ಕೋಟಿ ರೂ. ಮಂಜೂರು ಮಾಡಿಸಿ ಕಬ್ಬು ಅರೆಯುವಂತೆ ಮಾಡಿದ್ದೇನೆ. ಬೆಂಗಳೂರು–ಮೈಸೂರು ಎಕ್ಸ್‌ಪ್ರೆಸ್ ಹೈವೇ ನಿರ್ಮಾಣವಾದಾಗ ಮಂಡ್ಯ ಭಾಗದ ರಸ್ತೆ ಅವೈಜ್ಞಾನಿಕ ಕಾಮಗಾರಿಯಿಂದ ಕೂಡಿತ್ತು. ರಾಷ್ಟ್ರೀಯ ಹೆದ್ದಾರಿ ಪ್ರಾಧಿಕಾರ ಹಾಗೂ ಜಿಲ್ಲಾಡಳಿತದ ನೆರವಿನೊಂದಿಗೆ ಜನರಿಗೆ ಅನುಕೂಲವಾಗುವಂತೆ ಹಲವೆಡೆ ಎಕ್ಸಿಟ್ ಹಾಗೂ ಎಂಟ್ರಿ ನಿರ್ಮಾಣ ಮಾಡಿಸಿದೆ. ಕೇಂದ್ರ ರೈಲ್ವೆ ಸಚಿವರಾಗಿದ್ದ ಪಿಯೂಷ್ ಗೋಯಲ್ ಮತ್ತು ಸುರೇಶ್ ಅಂಗಡಿಯವರನ್ನು ಭೇಟಿ ಮಾಡಿ ಬೆಂಗಳೂರು–ಮೈಸೂರು ರೈಲುಗಳಲ್ಲಿ ವಿಶೇಷ ಆಸನ ವ್ಯವಸ್ಥೆ ಕಲ್ಪಿಸಿದ್ದೇನೆ. ನಾನು ಎಲ್ಲರಂತೆ ಸಾಮಾನ್ಯ ಸಂಸದೆಯಾಗಿದ್ದಿದ್ದರೆ ಮಂಡ್ಯ ಜಿಲ್ಲೆ ಈ ಹಿಂದಿನ 10 ವರ್ಷ ಹೇಗಿತ್ತೋ ಹಾಗೇ ಇರುತ್ತಿತ್ತು ಎಂದು ಸುಮಲತಾ ಹೇಳಿದರು. ಸುಮಲತಾ ಅವರು ಈ ಚುನಾವಣೆಯಲ್ಲಿ ಮಾತ್ರ ಸ್ಪರ್ಧಿಸುವುದಿಲ್ಲ ಎಂದು ಹೇಳುವ ಮೂಲಕ ಮುಂದಿನ ಚುನಾವಣೆಗಳಲ್ಲಿ ಸ್ಪರ್ಧಿಸುವ ಮುನ್ಸೂಚನೆ ನೀಡಿದ್ದಾರೆ. ತಾವು ಬಿಜೆಪಿ ಸೇರುವುದಾಗಿ ಹೇಳಿದರಾದರೂ, ತಮ್ಮ ಇಡೀ ಭಾಷಣದಲ್ಲಿ ಮೈತ್ರಿ ಪಕ್ಷದ ಅಭ್ಯರ್ಥಿ, ಮಾಜಿ ಮುಖ್ಯಮಂತ್ರಿ ಹೆಚ್.ಡಿ.ಕುಮಾರಸ್ವಾಮಿ ಅವರನ್ನು ಬೆಂಬಲಿಸುವುದಾಗಿ ಹೇಳುವುದಿರಲಿ, ಅವರ ಹೆಸರನ್ನೂ ಕೂಡ ಪ್ರಸ್ತಾಪಿಸಿಲ್ಲ.

ವೇದಿಕೆಯಲ್ಲಿ ನಟ ದರ್ಶನ್, ಸುಮಲತಾ ಪುತ್ರ ಅಭಿಷೇಕ್, ನಿರ್ಮಾಪಕ ರಾಕ್‌ಲೈನ್ ವೆಂಕಟೇಶ್, ಬೆಂಬಲಿಗರಾದ ಬೇಲೂರು ಸೋಮಶೇಖರ್, ಹನಕೆರೆ ಶಶಿಕುಮಾರ್ ಮುಂತಾದವರಿದ್ದರು.

ಸುಮಲತಾ ಬಿಜೆಪಿ ಸೇರ್ಪಡೆ ನಿರ್ಧಾರ ನನಗೂ ಬೆಂಬಲ ಕೊಟ್ಟ ಹಾಗೆ



ಮಂಡ್ಯ: ಬಿಜೆಪಿಗೆ ನನ್ನ ಬೆಂಬಲ ಎಂದು ಘೋಷಿಸುವ ಮೂಲಕ ಮೂರು ತಿಂಗಳ ಬಳಿಕ ಎಲ್ಲಾ ಗೊಂದಲಗಳಿಗೆ ಸಂಸದೆ ಸುಮಲತಾ ತೆರೆ ಎಳೆದಿದ್ದಾರೆ. ಇಂದು ಮಂಡ್ಯದಲ್ಲಿ ತಮ್ಮ ನಿರ್ಧಾರ ಘೋಷಿಸಿದ್ದಾರೆ. ಆದರೆ ಮೈತ್ರಿ ಅಭ್ಯರ್ಥಿ ಹೆಚ್.ಡಿ. ಕುಮಾರಸ್ವಾಮಿಗೆ ಬೆಂಬಲ ನೀಡುವುದಾಗಿ ಹೇಳಿಲ್ಲ. ಆದರೆ, ಇತ್ತ ಕುಮಾರಸ್ವಾಮಿ ಮಾತ್ರ ಸುಮಲತಾ ಬಿಜೆಪಿ ಸೇರ್ಪಡೆ ನಿರ್ಧಾರ ನನಗೂ ಬೆಂಬಲ ಕೊಟ್ಟ ಹಾಗೆ ಎಂದು ಹೇಳಿದ್ದಾರೆ.

ಕೋಲ್ಕತ್ತಾ ಮಾರಕ ಬೌಲಿಂಗ್‌ಗೆ ಡೆಲ್ಲಿ ಕ್ಯಾಪಿಟಲ್ಸ್ ತತ್ತರ;

ಹ್ಯಾಟ್ರಿಕ್ ಗೆಲುವು ಸಾಧಿಸಿದ ಕೆಕೆಆರ್



ಇಂದಿನ ಪಂದ್ಯ

[ಏ.4]

ಗುಜರಾತ್ ಟೈಟನ್ಸ್/ ಪಂಜಾಬ್ ಕಿಂಗ್ಸ್

ಸ್ಥಳ: ಅಹಮದಾಬಾದ್, ನರೇಂದ್ರ ಮೋದಿ ಕ್ರೀಡಾಂಗಣ,

ಸಮಯ: ಸಂಜೆ 7.30ಕ್ಕೆ

ವಿಶಾಖಪಟ್ಟಣಂ: ಏ.3ರಂದು ವಿಶಾಖಪಟ್ಟಣದ ಡಾ. ವೈಎಸ್. ರಾಜಶೇಖರ್ ರೆಡ್ಡಿ ಕ್ರೀಡಾಂಗಣದಲ್ಲಿ ನಡೆದ 2024ರ ಇಂಡಿಯನ್ ಪ್ರೀಮಿಯರ್ ಲೀಗ್‌ನ 16ನೇ ಪಂದ್ಯದಲ್ಲಿ ಡೆಲ್ಲಿ ಕ್ಯಾಪಿಟಲ್ಸ್ ತಂಡದ ವಿರುದ್ಧ ಕೋಲ್ಕತ್ತಾ ನೈಟ್ ರೈಡರ್ಸ್ ತಂಡವು 106 ರನ್‌ಗಳ ಅಂತರದಿಂದ ಗೆಲುವು ಸಾಧಿಸಿದೆ.

ಗಮನಾರ್ಹವಾಗಿ ಇಂಡಿಯನ್ ಪ್ರೀಮಿಯರ್ ಲೀಗ್ ಇತಿಹಾಸದಲ್ಲಿ ಕೋಲ್ಕತ್ತಾ ನೈಟ್ ರೈಡರ್ಸ್ ತಂಡವು 272 ರನ್‌ಗಳ 2ನೇ ಅತ್ಯಧಿಕ ಮೊತ್ತವನ್ನು ಕಲೆಹಾಕಿತ್ತು. ಇದಕ್ಕೂ ಮುನ್ನ ಇದೇ ಐಪಿಎಲ್ 2024ರಲ್ಲಿ ಸನ್ ರೈಸರ್ಸ್ ಹೈದರಾಬಾದ್ ತಂಡವು ಮುಂಬೈ ಇಂಡಿಯನ್ಸ್ 277 ರನ್ ಗಳಿಸಿದ್ದು, ಐಪಿಎಲ್‌ನ ಅತ್ಯಧಿಕ ಮೊತ್ತವಾಗಿದೆ.

ಟಾಸ್ ಗೆದ್ದು ಮೊದಲು ಬ್ಯಾಟಿಂಗ್ ಮಾಡಿದ ಕೋಲ್ಕತ್ತಾ ನೈಟ್ ರೈಡರ್ಸ್ ತಂಡದ ಸುನಿಲ್ ನರೈನ್, ಅಂಗ್‌ಕ್ರಿಶ್ ರಘುವಂಶಿ ಮತ್ತು ಆಂಡ್ರೆ ರಸೆಲ್ ಅವರ ಸ್ಫೋಟಕ ಬ್ಯಾಟಿಂಗ್ ನೆರವಿನಿಂದ 20 ಓವರ್‌ಗಳಲ್ಲಿ 7 ವಿಕೆಟ್ ನಷ್ಟಕ್ಕೆ 272 ರನ್‌ಗನ್ನು ಗಳಿಸಿತ್ತು.

273 ರನ್‌ಗಳ ಬೃಹತ್ ಗುರಿ ಪಡೆದ ಡೆಲ್ಲಿ ಕ್ಯಾಪಿಟಲ್ಸ್ ತಂಡ ರಿಷಭ್ ಪಂತ್ ಮತ್ತು ಟ್ರಿಸ್ಟಾನ್ ಸ್ಟಬ್ಸ್ ಅವರ ಅರ್ಧ ಶತಕಗಳ ಹೊರತಾಗಿಯೂ 17.2 ಓವರ್‌ಗಳಲ್ಲಿ 166 ರನ್‌ಗಳಿಗೆ ಸರ್ವಪತನ ಕಂಡಿತು. ಈ ಮೂಲಕ ಕೆಕೆಆರ್ ತಂಡದ ವಿರುದ್ಧ 106 ರನ್‌ಗಳ ಸೋಲು ಅನುಭವಿಸಿತು.

ಬೃಹತ್ ಮೊತ್ತದ ಬೆನ್ನಟ್ಟುವಿಕೆಯಲ್ಲಿ ಡೆಲ್ಲಿ ಕ್ಯಾಪಿಟಲ್ಸ್ ಬ್ಯಾಟಿಂಗ್ ಇನ್ನಿಂಗ್ಸ್ ಆರಂಭಿಸಿದ ಡೇವಿಡ್ ವಾರ್ನರ್ ಮತ್ತು ಪೃಥ್ವಿ ಶಾ ಉತ್ತಮ ಆರಂಭ ನೀಡಲು ವಿಫಲರಾದರು. ಪೃಥ್ವಿ ಶಾ 10 ರನ್ ಗಳಿಸಿ ಔಟಾದರೆ, ಡೇವಿಡ್ ವಾರ್ನರ್ 18 ರನ್ ಗಳಿಸಿ ವಿಕೆಟ್ ಒಪ್ಪಿಸಿದರು.

ನಂತರ ಬಂದ ಮಿಚೆಲ್ ಮಾರ್ಷ್ ಮತ್ತು ಅಭಿಷೇಕ್ ಪೊರೆಲ್ ಸೊನ್ನೆಗೆ ಔಟಾಗುವ ಮೂಲಕ ನಿರಾಸೆ ಮೂಡಿಸಿದರು. ಬಳಿಕ ಕ್ರೀಸ್‌ಗೆ ಆಗಮಿಸಿದ ನಾಯಕ ರಿಷಭ್ ಪಂತ್ ಕೇವಲ 25 ಎಸೆತಗಳಲ್ಲಿ 4 ಬೌಂಡರಿ ಹಾಗೂ 5 ಸಿಕ್ಸರ್ ಸಮೇತ 55 ರನ್ ಬಾರಿಸಿದರು.

ರಿಷಭ್ ಪಂತ್‌ಗೆ ಉತ್ತಮ ಸಾಥ್ ನೀಡಿದ ಟ್ರಿಸ್ಟಾನ್ ಸ್ಟಬ್ಸ್ 32 ಎಸೆತಗಳಲ್ಲಿ 4 ಬೌಂಡರಿ ಹಾಗೂ 4 ಸಿಕ್ಸರ್ ಮೂಲಕ 54 ರನ್ ಗಳಿಸಿದರು. ಈ ಜೋಡಿ ಐದನೇ ವಿಕೆಟ್‌ಗೆ 93 ರನ್‌ಗಳ ಜೊತೆಯಾಟ ನೀಡಿತು. ಆದರೆ ಇವರಿಬ್ಬರ ವಿಕೆಟ್ ಕಳೆದುಕೊಳ್ಳುವುದರೊಂದಿಗೆ ಪಂದ್ಯವನ್ನೂ ಕಳೆದುಕೊಂಡಿತು.

ಉಳಿದಂತೆ ಅಕ್ಷರ್ ಪಟೇಲ್ 0, ಸುಮಿತ್ ಕುಮಾರ್ 7 ರನ್, ರಸಿಕ್ ದಾರ್ ಸಲಾಮ್ 1 ರನ್, ಅನ್ರಿಚ್ ನಾರ್ಟ್ಜೆ 4 ರನ್ ಮತ್ತು ಇಶಾಂತ್ ಶರ್ಮಾ 1 ರನ್ ಗಳಿಸಿದರು.

ಇನ್ನು ಬೌಲಿಂಗ್‌ನಲ್ಲಿ ಕೋಲ್ಕತ್ತಾ ನೈಟ್ ರೈಡರ್ಸ್ ತಂಡದ ಪರ ವೈಭವ್ ಅರೋರಾ 4 ಓವರ್‌ಗಳಲ್ಲಿ 27 ರನ್ ನೀಡಿ 3 ವಿಕೆಟ್ ಪಡೆದರೆ, ವರುಣ್ ಚಕ್ರವರ್ತಿ 4 ಓವರ್‌ಗಳಲ್ಲಿ 33 ರನ್ ನೀಡಿ 3 ವಿಕೆಟ್ ಕಬಳಿಸಿದರು. ಉಳಿದಂತೆ ಮಿಚೆಲ್ ಸ್ಟಾರ್ಕ್ 2 ವಿಕೆಟ್ ಮತ್ತು ಆಂಡ್ರೆ ರಸೆಲ್ ಹಾಗೂ ಸುನಿಲ್ ನರೈನ್ ತಲಾ ಒಂದೊಂದು ವಿಕೆಟ್ ಪಡೆದರು.

ಇದಕ್ಕೂ ಮುನ್ನ ಕೋಲ್ಕತ್ತಾ ನೈಟ್ ರೈಡರ್ಸ್ ಬ್ಯಾಟಿಂಗ್‌ನಲ್ಲಿ ಸುನಿಲ್ ನರೈನ್ ಮತ್ತು ಫಿಲಿಪ್ ಸಾಲ್ಟ್ ಭರ್ಜರಿ ಆರಂಭ ಒದಗಿಸಿದರು ಮತ್ತು ಈ ಜೋಡಿ ಮೊದಲ ವಿಕೆಟ್‌ಗೆ 4.3 ಓವರ್‌ಗಳಲ್ಲಿ 60 ರನ್‌ಗಳ ಜೊತೆಯಾಟ ನೀಡಿದರು. ಫಿಲಿಪ್ ಸಾಲ್ಟ್ 12 ಎಸೆತಗಳಲ್ಲಿ 4 ಬೌಂಡರಿಗಳ ನೆರವಿನಿಂದ 18 ರನ್ ಗಳಿಸಿದರು.

ನಂತರ ಕ್ರೀಸ್‌ಗೆ ಬಂದ ಅಂಗ್‌ಕ್ರಿಶ್ ರಘುವಂಶಿ ಆಕ್ರಮಣಕಾರಿ ಬ್ಯಾಟಿಂಗ್ ಮಾಡಿ ಕೇವಲ 27 ಎಸೆತಗಳಲ್ಲಿ 5 ಬೌಂಡರಿ ಮತ್ತು 3 ಸಿಕ್ಸರ್‌ಗಳ ಸಮೇತ 54 ರನ್ ಬಾರಿಸಿದರು. ಆರಂಭಿಕ ಸುನಿಲ್ ನರೈನ್ ಮತ್ತೆ ಸ್ಫೋಟಕ ಬ್ಯಾಟಿಂಗ್ ಪ್ರದರ್ಶನ ನೀಡಿ, 39 ಎಸೆತಗಳಲ್ಲಿ 7 ಬೌಂಡರಿ ಹಾಗೂ 7 ಸಿಕ್ಸರ್‌ಗಳ ಮೂಲಕ 85 ರನ್ ಸಿಡಿಸಿದರು.

ಬಳಿಕ ಆಂಡ್ರೆ ರಸೆಲ್ ತಮ್ಮ ಅಬ್ಬರದ ಬ್ಯಾಟಿಂಗ್ ಮುಂದುವರೆಸಿದರು ಮತ್ತು 19 ಎಸೆತಗಳಲ್ಲಿ 4 ಬೌಂಡರಿ ಹಾಗೂ 3 ಸಿಕ್ಸರ್‌ಗಳ ಸಮೇತ 41 ರನ್ ಗಳಿಸಿ ಕೊನೆಯ ಓವರ್‌ನಲ್ಲಿ ಔಟಾದರು. ನಾಯಕ ಶ್ರೇಯಸ್ ಅಯ್ಯರ್ 11 ಎಸೆತಗಳಲ್ಲಿ 2 ಸಿಕ್ಸರ್‌ಗಳ ಮೂಲಕ 18 ರನ್ ಗಳಿಸಿದರು. ಸ್ಫೋಟಕ ಬ್ಯಾಟರ್ ರಿಂಕು ಸಿಂಗ್ 8 ಎಸೆತಗಳಲ್ಲಿ 1 ಬೌಂಡರಿ ಹಾಗೂ 3 ಸಿಕ್ಸರ್‌ಗಳ ನೆರವಿನಿಂದ 26 ರನ್ ಗಳಿಸಿದರು. ಉಳಿದಂತೆ ವೆಂಕಟೇಶ್ ಅಯ್ಯರ್ 5 ರನ್ ಮತ್ತು ರಮಣ ದೀಪ್ ಸಿಂಗ್ 2 ರನ್ ಗಳಿಸಿದರು.

ಇನ್ನು ಬೌಲಿಂಗ್‌ನಲ್ಲಿ ಡೆಲ್ಲಿ ಕ್ಯಾಪಿಟಲ್ಸ್ ತಂಡದ ಪರ ಎಲ್ಲ ಬೌಲರ್‌ಗಳು ದುಬಾರಿಯಾದರು. ಅನ್ರಿಚ್ ನಾರ್ಟ್ಜೆ 4 ಓವರ್‌ಗಳಲ್ಲಿ 59 ರನ್ ನೀಡಿ 3 ವಿಕೆಟ್ ಪಡೆದರೆ, ಇಶಾಂತ್ ಶರ್ಮಾ 3 ಓವರ್‌ಗಳಲ್ಲಿ 43 ರನ್ ನೀಡಿ 2 ವಿಕೆಟ್ ಕಬಳಿಸಿದರು. ಉಳಿದಂತೆ ಖಲೀಲ್ ಅಹ್ಮದ್ ಮತ್ತು ಮಿಚೆಲ್ ಮಾರ್ಷ್ ತಲಾ ಒಂದೊಂದು ವಿಕೆಟ್ ಪಡೆದರು.

ಮೂವರಿಂದ 93 ಲಕ್ಷ ರೂ ವಂಚನೆ ಪ್ರಕರಣ: ನ್ಯಾಯ ಸಿಗದೆ ಹತಾಶೆಗೊಂಡು

ಮೈಸೂರು ವ್ಯಕ್ತಿ ಬೆಂಗಳೂರು ಹೈಕೋರ್ಟ್‌ನಲ್ಲಿ ಕತ್ತು ಕೊಯ್ದುಕೊಂಡು ಆತ್ಮಹತ್ಯೆ ಯತ್ನ

ಮುಖ್ಯ ನ್ಯಾಯಮೂರ್ತಿಗೆ ಮನವಿ ಸಲ್ಲಿಸಿದ ನಂತರವೇ ಘೋರ ನಿರ್ಧಾರ

ಮೈಸೂರು,ಏ.3(ಆರ್‌ಕೆ)– ಅಪಾರ್ಟ್‌ಮೆಂಟ್ ನಿರ್ಮಾಣ ಯೋಜನೆಯಲ್ಲಿ ಪಾಲುದಾರಿಕೆ ನೀಡುವುದಾಗಿ ನಂಬಿಸಿ 93 ಲಕ್ಷ ರೂ ಪಡೆದು ವಂಚಿಸಿದ ಪ್ರಕರಣದಲ್ಲಿ ತನಗೆ ನ್ಯಾಯ ಸಿಗಲಿಲ್ಲ ಎಂದು ಹತಾಶೆಗೊಂಡ ಮೈಸೂರು ವ್ಯಕ್ತಿ ಬೆಂಗಳೂರಿನ ಹೈಕೋರ್ಟ್‌ನಲ್ಲಿ ಕತ್ತು ಕೊಯ್ದುಕೊಂಡು ಆತ್ಮಹತ್ಯೆಗೆ ಯತ್ನಿಸಿರುವ ಘಟನೆ ಇಂದು ಮಧ್ಯಾಹ್ನ ಸಂಭವಿಸಿದೆ.

ಮೈಸೂರಿನ ವಿಜಯನಗರ 2ನೇ ಹಂತದ ನಿವಾಸಿ ಸುಬ್ಬರಾಯುಡು ಎಂಬುವರ ಮಗ ಚಿನ್ನಂ ಶ್ರೀನಿವಾಸ(52) ನ್ಯಾಯಾಲಯದಲ್ಲಿ ತನಗೆ ಸೋಲುಂಟಾಯಿತೆಂದು ತೀವ್ರವಾಗಿ ನೊಂದು ಹೈಕೋರ್ಟ್ ಆವರಣದಲ್ಲೇ ಆತ್ಮಹತ್ಯೆಗೆ ಯತ್ನಿಸಿದ್ದು, ಅವರನ್ನು ಬೆಂಗಳೂರಿನ ವಿಕ್ಟೋರಿಯಾ ಆಸ್ಪತ್ರೆಗೆ ದಾಖಲಿಸಲಾಗಿದೆ. ಅವರ ಸ್ಥಿತಿ ಗಂಭೀರವಾವಾಗಿದೆ ಎಂದು ಹೇಳಲಾಗಿದೆ. ಹೈದರಾಬಾದ್‌ನ ಮೂವರು ಬಿಲ್ಡರ್‌ಗಳು ಪಾಲುದಾರಿಕೆ ಸಂಸ್ಥೆ ತೆರೆದು ಹೈದರಾಬಾದ್‌ನಲ್ಲಿ ಅಪಾರ್ಟ್‌ಮೆಂಟ್ ನಿರ್ಮಿಸುವುದಾಗಿವೂ ತನಗೆ ಪಾಲುದಾರಿಕೆ ಮತ್ತು ಅಪಾರ್ಟ್‌ಮೆಂಟ್‌ನಲ್ಲಿ ಪ್ಲಾಟ್‌ಗಳನ್ನು ನೀಡುವುದಾಗಿ ನಂಬಿಸಿ 2020ರ ಫೆಬ್ರವರಿ26 ರಂದು 93 ಲಕ್ಷ ರೂ. ಹಣ ಪಡೆದು ಪಾಲು ನೀಡದೆ ಮೋಸ ಮಾಡಿದ್ದಾರೆ ಎಂದು ಚಿನ್ನಂ ಶ್ರೀನಿವಾಸ 2021ರ ಅ. 5ರಂದು ಮೈಸೂರಿನ ವಿಜಯನಗರ ಠಾಣೆಯಲ್ಲಿ ಪ್ರಕರಣ ದಾಖಲಿಸಿದ್ದರು. ವಿಜಯನಗರ ಠಾಣೆ ಪೊಲೀಸರು ಪ್ರಕರಣ ದಾಖಲಿಸಿಕೊಂಡು ತನಿಖೆ ನಡೆಸುತ್ತಿದ್ದರು. ಆ ನಡುವೆ ಆರೋಪಿಗಳು ಇದು ಸಿವಿಲ್ ಸ್ವರೂಪದ ವ್ಯಾಜ್ಯವಾಗಿರುವುದರಿಂದ ಪೊಲೀಸ್ ಠಾಣೆಯಲ್ಲಿ ವಿಚಾರಣೆ ನಡೆಸಲು ಬರುವುದಿಲ್ಲ ಎಂದು ನ್ಯಾಯಾಲಯದಲ್ಲಿ ದಾವೆ ಹೂಡಿದ್ದರು. ಪ್ರಕರಣ ಜಿಲ್ಲಾ ನ್ಯಾಯಾಲಯ, ರಾಜ್ಯ ಉಚ್ಚ ನ್ಯಾಯಾಲಯ ಹಾಗೂ ಸರ್ವೋಚ್ಚ ನ್ಯಾಯಾಲಯದಲ್ಲೂ ವಿಚಾರಣೆ ನಡೆದು ಎಲ್ಲೆಡೆ ದೂರುದಾರ ಚಿನ್ನಂ ಶ್ರೀನಿವಾಸ ವಿರುದ್ಧವೇ ತೀರ್ಪು ಬಂದಿತ್ತು. ಅವರ ಮೇಲ್ಮನವಿ ವಜಾಗೊಂಡಿತ್ತು. ಅದರಿಂದ ಮನನೊಂದು ಬೆಂಗಳೂರಿನ ಹೈಕೋರ್ಟ್ ಮುಖ್ಯ ನ್ಯಾಯಮೂರ್ತಿಗಳಿಗೆ ಮನವಿ ಸಲ್ಲಿಸಿದ ಬಳಿಕ ಕೋರ್ಟ್ ಆವರಣದಲ್ಲೇ ಅಪರೇಷನ್‌ಗೆ ಬಳಸುವ ಚಾಕುವಿನಿಂದ ಕತ್ತು ಕೊಯ್ದುಕೊಂಡು ಆತ್ಮಹತ್ಯೆಗೆ ಯತ್ನಿಸಿದ್ದಾರೆ.

ತಕ್ಷಣ ಅವರ ಕುಟುಂಬದವರು ಹಾಗೂ ಪೊಲೀಸರು ಶ್ರೀನಿವಾಸ್‌ರನ್ನು ವಿಕ್ಟೋರಿಯಾ ಆಸ್ಪತ್ರೆಗೆ ಕರೆದೊಯ್ದು ದಾಖಲಿಸಿದ್ದಾರೆ. ಬೆಂಗಳೂರು ವಿಧಾನಸೌಧ ಠಾಣೆ ಪೊಲೀಸರು ಪ್ರಕರಣ ದಾಖಲಿಸಿಕೊಂಡು ತನಿಖೆ ನಡೆಸುತ್ತಿದ್ದಾರೆ.

ಮಹಾರಾಷ್ಟ್ರದಲ್ಲಿ ಅಗ್ನಿ ಅವಘಡ: ಮಗು ಸೇರಿ ಒಂದೇ ಕುಟುಂಬದ 7 ಮಂದಿ ದುರ್ಮರಣ

ಔರಂಗಬಾದ್ (ಮಹಾರಾಷ್ಟ್ರ): 3 ಅಂತಸ್ತಿನ ಕಟ್ಟಡಕ್ಕೆ ಬೆಂಕಿ ಹೊತ್ತಿಕೊಂಡು ಒಂದೇ ಕುಟುಂಬದ 7 ಮಂದಿ ದುರ್ಮರಣವನ್ನಪ್ಪಿರುವ ದುರ್ಘಟನೆ ಛತ್ರಪತಿ ಸಂಬಾಜಿನಗರದ ಕ್ಯಾಂಪ್ ಪ್ರದೇಶದ ಜೈನ ಮಂದಿರದ ಬಳಿ ನಡೆದಿದೆ.

ಇಂದು ಬೆಳಗ್ಗೆ 4 ಗಂಟೆ ಸುಮಾರಿಗೆ ಅಗ್ನಿ ಅವಘಡ ಸಂಭವಿಸಿದೆ, ಸುದ್ದಿ ತಿಳಿದು ಸ್ಥಳಕ್ಕಾಗಮಿಸಿರುವ ಅಗ್ನಿಶಾಮಕ ಅಧಿಕಾರಿಗಳು ಮತ್ತು ಸಿಬ್ಬಂದಿ ಹಾಗೂ ಕಂಟೋನ್ಮೆಂಟ್ ಪೊಲೀಸರು ಬೆಂಕಿಯನ್ನು ನಂದಿಸಿದ್ದಾರೆ. ಘಟನೆಯಲ್ಲಿ ಇಬ್ಬರು ಮಕ್ಕಳು, ಮೂವರು ಮಹಿಳೆಯರು ಹಾಗೂ ಇಬ್ಬರು ಪುರುಷರು ಮೃತಪಟ್ಟಿದ್ದಾರೆಂದು ತಿಳಿದುಬಂದಿದೆ.

ಪ್ರಾಥಮಿಕ ಮಾಹಿತಿ ಪ್ರಕಾರ ನೆಲ ಮಹಡಿಯಲ್ಲಿದ್ದ ಬಟ್ಟೆ ಅಂಗಡಿಯಲ್ಲಿ ಬೆಂಕಿ ಕಾಣಿಸಿಕೊಂಡು ಈ ಘಟನೆ ಸಂಭವಿಸಿದೆ ಎನ್ನಲಾಗಿದೆ.

ಘಟನೆ ಕುರಿತು ಪೊಲೀಸ್ ಕಮಿಷನರ್ ಮನೋಜ್ ಲೋಹಿಯಾ ಪ್ರತಿಕ್ರಿಯಿಸಿ, ಕಂಟೋನ್ಮೆಂಟ್ ಪ್ರದೇಶದಲ್ಲಿನ ಗಾರ್ಮೆಂಟ್ಸ್ ಅಂಗಡಿಯಲ್ಲಿ ಬೆಳಗಿನ ಜಾವ 4 ಗಂಟೆಗೆ ಬೆಂಕಿ ಕಾಣಿಸಿಕೊಂಡಿದೆ. ಈ ವೇಳೆ ಗಾಢ ನಿದ್ರೆಯಲ್ಲಿದ್ದ ಒಂದೇ ಕುಟುಂಬದ 7 ಜನರು ಸಾವನ್ನಪ್ಪಿದ್ದಾರೆ. ಮೊದಲಿಗೆ ಆರು ಇದ್ದ ಸಾವಿನ ಸಂಖ್ಯೆ 7ಕ್ಕೆ ಏರಿಕೆಯಾಗಿದೆ. ಘಟನೆಗೆ ಇನ್ನೂ ಸೂಕ್ತ ಕಾರಣ ತಿಳಿದು ಬಂದಿಲ್ಲ. ಈಗಾಗಲೇ ಸ್ಥಳದಲ್ಲಿ ಪರಿಶೀಲನೆ ನಡೆಸಲಾಗಿದೆ. ಪೊಲೀಸ್ ಸಿಬ್ಬಂದಿ ಸ್ಥಳದಲ್ಲೇ ಇದ್ದು ಹೆಚ್ಚಿನ ತನಿಖೆ ನಡೆಸುತ್ತಿದ್ದಾರೆ. ಘಟನೆಯಲ್ಲಿ ಎರಡು ಮತ್ತು ಮೂರು ವರ್ಷದ ಮಗು ಕೂಡ ಸಾವನ್ನಪ್ಪಿದ್ದಾರೆ. ಎಲ್ಲ ಮೃತ ದೇಹಗಳನ್ನು ಸರ್ಕಾರಿ ಆಸ್ಪತ್ರೆಗೆ ಸಾಗಿಸಲಾಗಿದೆ ಎಂದು ತಿಳಿಸಿದ್ದಾರೆ.

ಹೆಚ್ಚಿನ ವರ್ಗೀಕೃತ ಜಾಹೀರಾತು ಪುಟ 9ರಲ್ಲಿ

ತಪಾಸಣೆಗೆ ಮುಂದಾದ ನಾಲ್ವರು ಅಬಕಾರಿ ಸಿಬ್ಬಂದಿಗಳ ಮೇಲೆ ಬೈಕ್ ಸವಾರರಿಂದ ಹಲ್ಲೆ

ಕೆ.ಆರ್.ನಗರ ಸಮೀಪ ತಿಪ್ಪೂರು ಬಳಿ ಮಂಗಳವಾರ ರಾತ್ರಿ ಘಟನೆ

ಮೈಸೂರು, ಏ. 3(ಆರ್‌ಕೆ)– ಲೋಕಸಭಾ ಚುನಾವಣಾ ಹಿನ್ನೆಲೆಯಲ್ಲಿ ತಪಾಸಣೆಗೆ ಮುಂದಾದ ನಾಲ್ವರು ಅಬಕಾರಿ ಇಲಾಖೆ ಸಿಬ್ಬಂದಿ ಮೇಲೆ ನಾಲ್ವರು ಬೈಕ್ ಸವಾರರು ಮಾರಣಾಂತಿಕ ಹಲ್ಲೆ ನಡೆಸಿರುವ ಘಟನೆ ಕೆ.ಆರ್.ನಗರ ಸಮೀಪ ತಿಪ್ಪೂರು ಗ್ರಾಮದ ಬಳಿ ಮಂಗಳವಾರ ರಾತ್ರಿ ಸಂಭವಿಸಿದೆ.

ಅಬಕಾರಿ ಇಲಾಖೆ ಹೆಡ್‌ಕಾನ್ಸ್‌ಟೇಬಲ್ ಎನ್.ಸಂತೋಷ್, ಕಾನ್ಸ್‌ಟೇಬಲ್‌ಗಳಾದ ಶಿವಪ್ಪ ಬಾಳಪ್ಪ ಮನು, ಮಲ್ಲೇಶ್ ಹಾಗೂ ಸಂದೀಪ್ ಹಲ್ಲೆಗೊಳಗಾಗಿದ್ದು, ಅವರನ್ನು ಮೈಸೂರಿನ ಅಪೊಲೋ ಬಿಜಿಎಸ್ ಆಸ್ಪತ್ರೆಗೆ ದಾಖಲಿಸಲಾಗಿದೆ.

ಕೆ.ಆರ್.ನಗರ ಬೋವಿ ಕಾಲೋನಿ ನಿವಾಸಿ ಪ್ರಶಾಂತ, ಕನುಗನಹಳ್ಳಿಯ ಪ್ರಶಾಂತ್, ತಿಪ್ಪೂರು ಗ್ರಾಮದ ಯಶವಂತ ಹಾಗೂ ರಘು, ಕರ್ತವ್ಯನಿರತ ಅಬಕಾರಿ ಸಿಬ್ಬಂದಿ ಮೇಲೆ ಹಲ್ಲೆ ನಡೆಸಿ, ಪರಾರಿಯಾಗಿದ್ದಾರೆ. ಏಪ್ರಿಲ್ 2ರಂದು ರಾತ್ರಿ ಲೋಕಸಭಾ ಚುನಾವಣೆ ಸಂಬಂಧ ಗಸ್ತಿನಲ್ಲಿದ್ದ ಅಬಕಾರಿ ಸಿಬ್ಬಂದಿ ತಮಗೆ ಬಂದ ಮಾಹಿತಿ ಮೇರೆಗೆ ದಗ್ಗನಹಳ್ಳಿ ಕಡೆಯಿಂದ ಬರುತ್ತಿದ್ದ ಬೈಕ್ ಅನ್ನು ತಿಪ್ಪೂರು ಗ್ರಾಮದ ರಾಮಮಂದಿರ ಬಳಿ ನಿಲ್ಲಿಸಿ ತಪಾಸಣೆ ಮಾಡಲು ಮುಂದಾದಾಗ ಬೈಕ್ ಸವಾರರು ಅವಾಚ್ಯ ಶಬ್ಧಗಳಿಂದ ಬೈದು ಹೊರಟು ಹೋದರು ಎಂದು ಸಂತೋಷ ದೂರಿನಲ್ಲಿ ತಿಳಿಸಿದ್ದಾರೆ.

ನಂತರ ತಾವು ಅಲ್ಲಿಂದ ಗ್ರಾಮದ ಶಾಲೆ ಬಳಿ ಬರುವಷ್ಟರಲ್ಲಿ ನಾಲ್ವರು 2 ಬೈಕ್‌ಗಳಲ್ಲಿ ಬಂದು ಗಲಾಟೆ ಮಾಡಿ ತಮ್ಮ ಮೇಲೆ ಮಾರಣಾಂತಿಕ ಹಲ್ಲೆ ಮಾಡಿ ಪರಾರಿಯಾದರು. ಸಂತೋಷ ಅವರ ತಲೆಗೆ ತೀವ್ರತರಹದ ಗಾಯಗಳಾದರೆ, ಇತರ ಮೂವರು ಸಾಧಾರಣ ಗಾಯಗೊಂಡಿದ್ದಾರೆ ಎಂದು ತಿಳಿಸಿದ್ದಾರೆ. ಪ್ರಕರಣ ದಾಖಲಿಸಿಕೊಂಡಿರುವ ಕೆ.ಆರ್.ನಗರ ಠಾಣೆ ಪೊಲೀಸರು, ತನಿಖೆ ನಡೆಸುತ್ತಿದ್ದಾರೆ.

ಕಾಂಗ್ರೆಸ್‌ನ 'ಫರ್ ಫರ್ ಗ್ಯಾರಂಟಿ' ಅಭಿಯಾನಕ್ಕೆ ಚಾಲನೆ ನೀಡಿದ ಖರ್ಗೆ



ನವದೆಹಲಿ: ಲೋಕಸಭೆ ಚುನಾವಣೆಗೂ ಮುನ್ನ ಕಾಂಗ್ರೆಸ್‌ನ 'ಘರ್ ಘರ್ ಗ್ಯಾರಂಟಿ' ಅಭಿಯಾನಕ್ಕೆ ಎಐಸಿಸಿ ಅಧ್ಯಕ್ಷ ಮಲ್ಲಿಕಾರ್ಜುನ ಖರ್ಗೆ ಬುಧವಾರ ಚಾಲನೆ ನೀಡಿದರು. ಈ ಅಭಿಯಾನದ ಅಡಿಯಲ್ಲಿ ದೇಶದಾದ್ಯಂತ ಎಂಟು ಕೋಟಿ ಮನೆಗಳಿಗೆ ತಲುಪಿ ಗ್ಯಾರಂಟಿ ಬಗ್ಗೆ ಅರಿವು ಮೂಡಿಸುವ ಗುರಿ ಹೊಂದಲಾಗಿದೆ. ಈಶಾನ್ಯ ದೆಹಲಿ ಲೋಕಸಭಾ ಕ್ಷೇತ್ರದ ಕೈಥವಾಡದ ಉಸ್ಮಾನ್‌ಪುರದಿಂದ ಈ ಅಭಿಯಾನವನ್ನು ಮಲ್ಲಿಕಾರ್ಜುನ ಖರ್ಗೆ ಪ್ರಾರಂಭಿಸಿದರು.

ನಮ್ಮ 'ಪಂಚ ನ್ಯಾಯ ಪಚ್ಚೀಸ್ ಗ್ಯಾರಂಟಿ' ಅನ್ನು ಜನರಿಗೆ ತಲುಪಿಸಲು ಈ ಗ್ಯಾರಂಟಿ ಕಾರ್ಡ್ ವಿತರಿಸುತ್ತಿದ್ದೇವೆ. ದೇಶದಾದ್ಯಂತ ಎಂಟು ಕೋಟಿ ಗ್ಯಾರಂಟಿ ಕಾರ್ಡ್‌ಗಳನ್ನು ವಿತರಿಸುವ ಯೋಜನೆ ಹೊಂದಿದ್ದೇವೆ. ನಾವು ನೀಡಿದ ಭರವಸೆಗಳನ್ನೆಲ್ಲ ಈಡೇರಿಸಲಿದ್ದೇವೆ ಎಂದು ಜನರಿಗೆ ತಿಳಿಸಲಿದ್ದೇವೆ ಎಂದು ಮಲ್ಲಿಕಾರ್ಜುನ ಖರ್ಗೆ ತಿಳಿಸಿದರು.

ನಂ.ಗೂಡು ಬೀಯರ್ ಘಟಕದ ಮೇಲೆ ದಾಳಿ: 98.52 ಕೋಟಿ ಮೌಲ್ಯದ ಮದ್ಯ ಕಚ್ಚಾವಸ್ತು ವಶ

17 ಮಂದಿ ವಿರುದ್ಧ ಪ್ರಕರಣ ದಾಖಲು, ಆರೋಪಿಗಳು ಪರಾರಿ

ಚಾಮರಾಜನಗರ, ಏ.3–ಲೋಕಸಭಾ ಚುನಾವಣೆ ಹಿನ್ನೆಲೆಯಲ್ಲಿ ಅಕ್ರಮ ಮದ್ಯ ಸಾಗಣೆ ಮತ್ತು ಸಂಗ್ರಹದ ಮೇಲೆ ಹದ್ದಿನ ಕಣ್ಣಿಟ್ಟಿರುವ ಚುನಾವಣಾ ಆಯೋಗ ಮತ್ತು ಅಬಕಾರಿ ಇಲಾಖಾಧಿಕಾರಿಗಳು ಚಾಮರಾಜನಗರ ಲೋಕಸಭಾ ಕ್ಷೇತ್ರದ ಮದ್ಯ ತಯಾರಿಕಾ ಘಟಕದ ಮೇಲೆ ದಾಳಿ ನಡೆಸಿ, ದಾಖಲೆ ಪ್ರಮಾಣದಲ್ಲಿ ಅಂದರೆ, 98.25 ಕೋಟಿ ರೂ. ಮೌಲ್ಯದ ಬೀಯರ್ ಮತ್ತು ಕಚ್ಚಾ ಸಾಮಗ್ರಿಯನ್ನು ವಶಪಡಿಸಿಕೊಂಡಿದ್ದಾರೆ.

ಚಾಮರಾಜನಗರ ಲೋಕಸಭಾ ಕ್ಷೇತ್ರದ ವ್ಯಾಪ್ತಿಗೆ ಒಳಪಡುವ ನಂಜನಗೂಡು ತಾಲೂಕಿನ ಇಮ್ಮಾವು ಗ್ರಾಮದ ತಾಂಡ್ಯ ಕೈಗಾರಿಕಾ ಪ್ರದೇಶದ ಮೆ. ಯುನೈಟೆಡ್ ಬ್ರೀವರೀಸ್ ಲಿಮಿಟೆಡ್‌ನ ಘಟಕದ ಮೇಲೆ ದಾಳಿ ನಡೆಸಿ, ಅಬಕಾರಿ ಇಲಾಖೆ ಅಧಿಕಾರಿಗಳು ಕೋಟ್ಯಾಂತರ ರೂ. ಮೌಲ್ಯದ ಪದಾರ್ಥಗಳನ್ನು ವಶಪಡಿಸಿಕೊಂಡು ಪ್ರಕರಣ ದಾಖಲಿಸಿದ್ದಾರೆ.

ಪ್ರಕರಣದ ಸಂಬಂಧ 17 ಆರೋಪಿಗಳ ವಿರುದ್ಧ ಪ್ರಕರಣ ದಾಖಲಿಸಲಾಗಿದ್ದು, ತಲೆ ಮರೆಸಿಕೊಂಡಿರುವ ಅವರ ಬಂಧನಕ್ಕೆ ಕ್ರಮ ಜರುಗಿಸಲಾಗಿದೆ ಎಂದು ಜಿಲ್ಲಾ ಚುನಾವಣಾಧಿಕಾರಿಗಳಾದ ಜಿಲ್ಲಾಧಿಕಾರಿ ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

ಜಿಲ್ಲಾ ಚುನಾವಣಾಧಿಕಾರಿ ಕಚೇರಿಗೆ ಮಂಗಳವಾರ ಬಂದ ಅನಾಮಧೇಯ ದೂರವಾಣಿ ಕರೆಯ ಮೇರೆಗೆ ಅವರ ಆದೇಶದನ್ವಯ ಬ್ರೀವರೀಸ್ ಘಟಕದ ಮೇಲೆ ದಾಳಿ ಮಾಡಿ ದಾಖಲಾತಿಗಳಾದ ಲೆಕ್ಕದ ಪುಸ್ತಕದೊಂದಿಗೆ ಭೌತಿಕ ದಾಸ್ತಾನನ್ನು ಪರಿಶೀಲಿಸಿದಾಗ ಲೆಕ್ಕದ ಪುಸ್ತಕದ ದಾಸ್ತಾನಿಗಿಂತ 7 ಸಾವಿರ ವಿವಿಧ ಬ್ರಾಂಡಿನ ರಟ್ಟಿನ ಪೆಟ್ಟಿಗೆಗಳ ಬೀಯರ್ ದಾಸ್ತಾನು ಕೊಠಡಿಯಲ್ಲಿ ಕಂಡುಬಂದಿದೆ.

ಕರ್ನಾಟಕ ಅಬಕಾರಿ ಕಾಯ್ದೆ 1965 ರನ್ವಯ ಮದ್ಯದ ಅಕ್ರಮ ದಾಸ್ತಾನು ದಂಡಾರ್ಹ ಹಾಗೂ ಶಿಕ್ಷಾರ್ಹ ಅಪರಾಧವಾಗಿರುವುದರಿಂದ ಬ್ರೀವರೀಸ್ ಘಟಕದಲ್ಲಿ ತಯಾರಿಸಿರುವ ಒಟ್ಟು 6,03,644 ರಟ್ಟಿನ ಪೆಟ್ಟಿಗೆಗಳು ಹಾಗೂ ಕೆಸ್‌ಗಳಲ್ಲಿರುವ 23,160 ಲೀಟರ್ ಮತ್ತು ಬಿಬಿಟಿ ಟ್ಯಾಂಕ್‌ನಲ್ಲಿರುವ ದಾಸ್ತಾನು 5,16,700 ಲೀ., ಯುಟಿ ಟ್ಯಾಂಕ್‌ನಲ್ಲಿರುವ 66,16,700 ಲೀ., ಸೈಲೋಸ್ ಟ್ಯಾಂಕ್‌ನಲ್ಲಿರುವ ಕಚ್ಚಾವಸ್ತು 6,50,458 ಕೆಜಿನಂತೆ ವಿವಿಧ ವಸ್ತುಗಳನ್ನು ಜಪ್ತಿ ಮಾಡಿ ಪ್ರಕರಣದಲ್ಲಿ ನಾಪತ್ತೆಯಾಗಿರುವ 17 ಆರೋಪಿಗಳನ್ನು ಪತ್ತೆಹಚ್ಚಿ ಬಂಧಿಸಬೇಕಾಗಿದೆ ಎಂದು ಅವರು ತಿಳಿಸಿದ್ದಾರೆ. ಜಪ್ತಿ ಮಾಡಿದ ಸ್ಥಳದ ಕೃತ್ಯವು ಚಾಮರಾಜನಗರ ಲೋಕಸಭಾ ಕ್ಷೇತ್ರ ವ್ಯಾಪ್ತಿಗೆ ಒಳಪಡಲಿದ್ದು, ಮಾದರಿ ನೀತಿ ಸಂಹಿತೆ ಜಾರಿಯಲ್ಲಿರುವುದರಿಂದ ಅಕ್ರಮ ದಾಸ್ತಾನು ಪ್ರಕರಣ ದಾಖಲಿಸಲಾಗಿದೆ ಜಿಲ್ಲಾ ಚುನಾವಣಾಧಿಕಾರಿ ಶಿಲ್ಪನಾಗ್ ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

ವಿಜೃಂಭಣೆಯ ಶ್ರೀ ಮರುಡೇಶ್ವರ ಸ್ವಾಮಿ ಬ್ರಹ್ಮ ರಥೋತ್ಸವ



ತಿ.ನರಸೀಪುರ, ಏ.3– ತಾಲೂಕಿನ ಮಾದಾಪುರ ಗ್ರಾಮದಲ್ಲಿ ಶ್ರೀಮರುಡೇಶ್ವರ ಸ್ವಾಮಿಯವರ ಬ್ರಹ್ಮ ರಥೋತ್ಸವ ಬುಧವಾರ ವಿಜೃಂಭಣೆಯಿಂದ ಜರುಗಿತು.

ರಥೋತ್ಸವದ ಹಿನ್ನೆಲೆಯಲ್ಲಿ ಕಳೆದ ಎರಡು ದಿನಗಳಿಂದ ದೇವಸ್ಥಾನದಲ್ಲಿ ವಿವಿಧ ಪೂಜಾ ಕೈಂಕರ್ಯಗಳು ನಡೆದವು. ಪೂಜೆ, ಹೋಮ, ಬಿಲ್ವಾಭಿಷೇಕ, ಪಂಚಾಮೃತ ಅಭಿಷೇಕ ಹಾಗೂ ವಿವಿಧ ಪೂಜಾ ಅಲಂಕಾರಗಳು ನೆರವೇರಿದವು. ನಂತರ ಗಣೇಶ, ಸುಬ್ರಹ್ಮಣ್ಯ ಹಾಗೂ ಮುರುಡೇಶ್ವರ ಸ್ವಾಮಿಯ ಉತ್ಸವ ಮೂರ್ತಿಗಳನ್ನು ಹೂವಿನ ಮಂಟಪದಲ್ಲಿ ಕೂರಿಸಿ ದೇವಸ್ಥಾನದ ಸುತ್ತ ಮೆರವಣಿಗೆ ನಡೆಸಲಾಯಿತು. ಆನಂತರ ಅಲಂಕೃತಗೊಂಡ ರಥದ ಮೇಲೆ ಉತ್ಸವ ಮೂರ್ತಿಯನ್ನು ಕೂರಿಸಿ ಮಧ್ಯಾಹ್ನ 1.15ರ ಸುಮಾರಿಗೆ ತಾಲೂಕು ದಂಡಾಧಿಕಾರಿ ಸುರೇಶ್ ಆಚಾರ್ ರಥಕ್ಕೆ ಪೂಜೆ ಸಲ್ಲಿಸುವ ಮೂಲಕ ಉತ್ಸವಕ್ಕೆ ಚಾಲನೆ ನೀಡಿದರು.

ಆನಂತರ ತಾಲೂಕಿನ ವಿವಿಧ ಗ್ರಾಮಗಳಿಂದ ಆಗಮಿಸಿದ್ದ ಸಹಸ್ರಾರು ಭಕ್ತಾದಿಗಳು ರಥವನ್ನು ಭಕ್ತಿ ಭಾವದಿಂದ ಎಳೆದರು. ದೇವಸ್ಥಾನದ ಮುಂಭಾಗದಿಂದ ಹೊರಟ ರಥೋತ್ಸವ ವೀರಗಾಸೆ ಕುಣಿತ, ವಾದ್ಯ ಮೇಳಗಳೊಂದಿಗೆ ದೇವಸ್ಥಾನದ ಸುತ್ತ ಪ್ರದಕ್ಷಿಣೆ ಹಾಕಿ ನಂತರ ಸ್ವಸ್ಥಾನ ತಲುಪಿತು. ಚಲಿಸುತ್ತಿದ್ದ ರಥಕ್ಕೆ ಭಕ್ತಾದಿಗಳು ಹಣ್ಣು–ಜವನ ಎಸೆದು ಭಕ್ತಿ ಸಮರ್ಪಿಸಿದರು. ರಥೋತ್ಸವದಲ್ಲಿ ಭಾಗವಹಿಸಿದ್ದ ಭಕ್ತರಿಗೆ ದೇವಸ್ಥಾನದ ವತಿಯಿಂದ ಪ್ರಸಾದ ವ್ಯವಸ್ಥೆ ಮಾಡಲಾಗಿತ್ತು. ಹರಕೆ ಹೊತ್ತ ಭಕ್ತಾದಿಗಳು ಬಿಸಿಲಿನ ತಾಪದಿಂದ ಬಳಲಿದ್ದ ಜನರಿಗೆ ನೀರು ಮಜ್ಜಿಗೆ, ರೈಸ್ ಬಾತ್, ಮೊಸರನ್ನ ವಿತರಿಸಿ ಹರಕೆ ತೀರಿಸಿದರು. ರಥೋತ್ಸವದ ಹಿನ್ನೆಲೆಯಲ್ಲಿ ಮಂಗಳವಾರ ಕೊಂಡೋತ್ಸವ ಕಾರ್ಯಕ್ರಮ ಜರುಗಿತು. ತಲಕಾಡು ಪಿಎಸ್‌ಐ ತಿರುಮಲ್ಲೇಶ್ ನೇತೃತ್ವದಲ್ಲಿ ರಥೋ ತ್ಸವಕ್ಕೆ ಸೂಕ್ತ ಬಂದೋಬಸ್ತ್ ವ್ಯವಸ್ಥೆ ಮಾಡಲಾಗಿತ್ತು

ನವಭಾರತ ನಿರ್ಮಾಣಕ್ಕಾಗಿ ತಪ್ಪದೇ ಎಲ್ಲರೂ ಮತದಾನ ಮಾಡಿ

ಹುಣಸೂರಲ್ಲಿ ಮೊಳಗಿದ ಮತದಾನ ಜಾಗೃತಿ ಘೋಷವಾಕ್ಯಗಳು



ಹುಣಸೂರಿನಲ್ಲಿ ತಾಲೂಕು ಸ್ವೀಪ್ ಸಮಿತಿ ವತಿಯಿಂದ ವಿಶೇಷಚೇತನರ ಕಲ್ಯಾಣ ಇಲಾಖೆ ಹಾಗೂ ನಗರಸಭೆ ಸಂಯುಕ್ತಾಶ್ರಯದಲ್ಲಿ ಜಾಗೃತಿ ಜಾಥಾ ನಡೆಸಲಾಯಿತು.

ಹುಣಸೂರು, ಏ.3– ಜಾಗೃತ ಮತದಾರ ಪ್ರಜಾಪ್ರಭುತ್ವದ ನೇತಾರ, ಪುರುಷರಿರಲಿ–ಮಹಿಳೆಯರಿರಲ್ಲಿ ಮತ ಹಾಕುವುದು ಎಲ್ಲರ ಜವಾಬ್ದಾರಿ, ಯುವ ಜನತೆಯಿಂದ ಮತದಾನ ನವಭಾರತದ ನಿರ್ಮಾಣ, ತಪ್ಪದೇ ಮತ ಚಲಾಯಿಸಿ ಉತ್ತಮ ಪ್ರಜಾಪ್ರಭುತ್ವ ನಿರ್ಮಿಸಿ, ಪ್ರಜಾತಂತ್ರವೆಂಬ ಹಬ್ಬವನ್ನು ಮತದಾನ ಮಾಡಿ ಆಚರಿಸೋಣ, ಮತದಾನ ನಮ್ಮ ಕರ್ತವ್ಯ, ನಾವು ಮತ ಚಲಾಯಿಸುತ್ತಿದ್ದೇವೆ ಮತ್ತೆ ನೀವು?? ಹೀಗೆ ಏಪ್ರಿಲ್ 26ರಂದು ಕಡ್ಡಾಯ ಮತದಾನದ ಕುರಿತು ಹಲವು ಘೋಷವಾಕ್ಯಗಳು ತಾಲೂಕಿನ ಪ್ರಮುಖ ರಸ್ತೆಯಲ್ಲಿ ಕೇಳಲ್ಪಟ್ಟಿತು.

ಮತದಾನ ಜಾಗೃತಿ ಅಂಗವಾಗಿ ತಾಲೂಕು ಸ್ವೀಪ್ ಸಮಿತಿ ವತಿಯಿಂದ ವಿಶೇಷಚೇತನರ ಕಲ್ಯಾಣ ಇಲಾಖೆ ಹಾಗೂ ನಗರಸಭೆ ಸಂಯುಕ್ತಾಶ್ರಯದಲ್ಲಿ ತಾಲೂಕು ಪಂಚಾಯಿತಿಯಲ್ಲಿ ಆಯೋಜಿಸಲಾಗಿದ್ದ ಜಾಗೃತಿ ಜಾಥಾ ಕಾರ್ಯಕ್ರಮದಲ್ಲಿ ವಿವಿಧ ನಾಮಫಲಕಗಳನ್ನು ಹಿಡಿದು ವಿಶೇಷಚೇತನರು ಬೈಕ್ ರ್ಯಾಲಿ ನಡೆಸಿದರು.

ಇದಕ್ಕೂ ಮುನ್ನ ತಾಲೂಕು ಪಂಚಾಯಿತಿ ಕಾರ್ಯನಿರ್ವಾಹಕಾಧಿಕಾರಿ ಶಿವಕುಮಾರ್ ಅವರು ಜಾಗೃತಿ ಜಾಥಾ ಕಾರ್ಯಕ್ರಮಕ್ಕೆ ಹಸಿರು ನಿಶಾನೆ ತೋರುವ ಮೂಲಕ ಚಾಲನೆ ನೀಡಿದರು. ಬಳಿಕ ಮಾತನಾಡಿದ ಅವರು, ಏಪ್ರಿಲ್ 26ರಂದು ನಡೆಯಲಿರುವ ಲೋಕಸಭಾ ಚುನಾವಣೆಯಲ್ಲಿ ಪ್ರತಿಯೊಬ್ಬರೂ ಮತಗಟ್ಟೆಗಳಿಂದ ಹೊರಗೆ ಉಳಿಯದೇ ಹಾಗೂ ಯಾವುದೇ ಆಮಿಷಗಳಿಗೆ ಬಲಿಯಾಗದೇ ನಿಷ್ಪಕ್ಷಪಾತದಿಂದ ದೇಶದ ಸುಭದ್ರ ಭವಿಷ್ಯಕ್ಕಾಗಿ ತಮ್ಮ ಮತ ಚಲಾಯಿಸುವಂತೆ ತಿಳಿಸಿದರು.

ಇದಕ್ಕೂ ಮುನ್ನ ಸಭಾಂಗಣದಲ್ಲಿ ಮತದಾನದ ಕುರಿತು ಪ್ರತಿಜ್ಞಾ ವಿಧಿಯನ್ನು ಬೋಧಿಸಲಾಯಿತು. ಜಾಗೃತಿ ಜಾಥಾವು ತಾಲೂಕು ಪಂಚಾಯಿತಿಯಿಂದ ಬಜಾರ್ ರಸ್ತೆ ಕಡೆಯಿಂದ ಕೋಟೆ ವೃತ್ತದ ಮಾರ್ಗವಾಗಿ ಸಾಗಿ ಸಂವಿಧಾನ ವೃತ್ತ ಹಾಗೂ ಬಿ.ಎಂ.ರಸ್ತೆ ಮಾರ್ಗವಾಗಿ ತಾಲೂಕು ಪಂಚಾಯಿತಿ ಕಚೇರಿಯಲ್ಲಿ ಅಂತ್ಯಗೊಂಡಿತು.

ಕಾರ್ಯಕ್ರಮದಲ್ಲಿ ಸಹಾಯಕ ನಿರ್ದೇಶಕ (ಗ್ರಾಉ) ಗಿರಿಧರ್, ತಾಲೂಕು ಯೋಜನಾಧಿಕಾರಿ ರಾಜೇಶ್, ವಿಶೇಷಚೇತನರ ಇಲಾಖೆಯ ಸಂಯೋಜಕ ದೇವರಾಜ್, ನಗರಸಭೆಯ ಅಭಿಯಂತರ ಸೋಮಸುಂದರಂ, ಸಂತೋಷ್ ಸೇರಿದಂತೆ ಸ್ವೀಪ್ ಅಧಿಕಾರಿಗಳು ಹಾಗೂ ತಾಲೂಕು ಪಂಚಾಯಿತಿ ಸಿಬ್ಬಂದಿ, ವಿಆರ್‌ಡಬ್ಲ್ಯೂರವರು ಪಾಲ್ಗೊಂಡಿದ್ದರು.

ವಿಜೃಂಭಣೆಯಿಂದ ನಡೆದ ಸಾಗರೆ ಶ್ರೀ ಮಾರಮ್ಮನವರ ಜಾತ್ರೆ

ಸಾಗರೆ, ಏ.3– ಸರಗೂರು ತಾಲೂಕಿನ ಸಾಗರೆ ಗ್ರಾಮದ ನಾಯಕ ಸಮಾಜದ



ಶ್ರೀ ಮಾರಮ್ಮನವರ ದೇವಾಲಯದಲ್ಲಿ ಮಂಗಳವಾರ ಸಾಗರೆ ಶ್ರೀ ಮಾರಮ್ಮನವರ ಜಾತ್ರೆ ಹಾಗೂ ಕೊಂಡ ಮಹೋತ್ಸವವು ವಿಜೃಂಭಣೆಯಿಂದ ನಡೆಯಿತು


ಅಮ್ಮನವರಿಗೆ ವಿಶೇಷ ಅಭಿಷೇಕ ಪೂಜೆ ನೆರವೇರಿಸಲಾಯಿತು. ಬೆಂಕಿ ಕೊಂಡ ಬೇಯಿಸಲು ಕಗ್ಗಲಿ ಸೌದೆಯನ್ನು ಎತ್ತಿನಗಾಡಿಯಲ್ಲಿ ವಾದ್ಯಗೋಷ್ಠಿ ಹಾಗೂ ಬಾಣ ಬಿರುಸುನೊಂದಿಗೆ ಗ್ರಾಮದ ಬೀದಿಗಳಲ್ಲಿ ಮೆರವಣಿಗೆಯ ಮೂಲಕ ಅಮ್ಮನವರ ದೇವಾಲಯಕ್ಕೆ ತರಲಾಯಿತು.

ಅಮ್ಮನವರ ಜ್ಯೋತಿಯನ್ನು ಬೆಳಗಿಸಲಾಯಿತು. ಅಮ್ಮನವರ ಜ್ಯೋತಿಯನ್ನು ನೂರಾರು ಭಕ್ತರು ವೀಕ್ಷಿಸಿದರು.

ಸುನೀಲ್ ಬೋಸ್ ವಿರುದ್ಧ ಅಪಪ್ರಚಾರ ನಡೆಯದು

ಬಿಜೆಪಿ ವಿರುದ್ಧ ಕಾಂಗ್ರೆಸ್ ಮುಖಂಡ ವಾಗ್ದಾಳಿ

ತಿ.ನರಸೀಪುರ,ಏ.3– ಚಾಮರಾಜನಗರ ಲೋಕಸಭಾ ಕ್ಷೇತ್ರದಿಂದ ಸ್ಪರ್ಧಿಸಿರುವ ಕಾಂಗ್ರೆಸ್ ಅಭ್ಯರ್ಥಿ ಸುನೀಲ್ ಬೋಸ್ ಅವರ ವಿರುದ್ಧ ಬಿಜೆಪಿಯವರು ಅಪಪ್ರಚಾರ ಮಾಡುತ್ತಿದ್ದು, ಅದು ಯಾವುದೇ ಪ್ರಭಾವ ಬೀರುವುದಿಲ್ಲ ಎಂದು ಯುವ ಕಾಂಗ್ರೆಸ್ ಮುಖಂಡ ಜಿ.ಅಕ್ಷಯ್ ಕುಮಾರ್ ತಿಳಿಸಿದ್ದಾರೆ.



ಸುದ್ದಿಗಾರರೊಂದಿಗೆ ಮಾತನಾಡುತ್ತಿದ್ದ ಅವರು, ಸುನೀಲ್ ಬೋಸ್‌ಗೆ ಸಿಗುತ್ತಿರುವ ಜನಬೆಂಬಲ ಮತ್ತು ಮತದಾರರ ಆಶೀರ್ವಾದ ಕಂಡು ಕಂಗಾಲಾಗಿರುವ ಬಿಜೆಪಿ ಮುಖಂಡರು ಸೋಲಿನ ಹತಾಶೆಯಿಂದ ಸುನೀಲ್ ಬೋಸ್ ಗೋ ಬ್ಯಾಕ್ ಎಂದು ಪೋಸ್ಟರ್‌ಗಳನ್ನು ಅಂಟಿಸಿ ಮಾಡುತ್ತಿರುವ ಅಪಪ್ರಚಾರವಿದು ಎಂದರು.

ಸುನೀಲ್ ಬೋಸ್ ನಾಮಪತ್ರ ಸಲ್ಲಿಸುವ ವೇಳೆ ಜಮಾಯಿಸಿದ್ದ ಜನಸಾಗರದ ಮುಂದೆ ಇಂತಹ ಆರೋಪಗಳು ನಡೆಯದು. ಇಂದು ಸೇರಿದ್ದ ಜನಸ್ತೋಮವೇ ಸುನೀಲ್ ಬೋಸ್ ಅವರ ಗೆಲುವು ಖಚಿತ ಪಡಿಸಿದ್ದು, ಬಿಜೆಪಿಯವರನ್ನು ಚಿಂತೆಗೀಡು ಮಾಡಿದೆ ಎಂದು ಅವರು ವಾಗ್ದಾಳಿ ನಡೆಸಿದರು.

ಮುಖ್ಯಮಂತ್ರಿ ಸಿದ್ದರಾಮಯ್ಯ, ಮೈಸೂರು ಜಿಲ್ಲಾ ಉಸ್ತುವಾರಿ ಸಚಿವ ಡಾ.ಹೆಚ್.ಸಿ.ಮಹದೇವಪ್ಪ ಮತ್ತು ಉಪ ಮುಖ್ಯಮಂತ್ರಿ ಡಿ.ಕೆ.ಶಿವಕುಮಾರ್ ಅವರ ನೇತೃತ್ವದ ಸರ್ಕಾರ ಜನರಿಗೆ ನೀಡುತ್ತಿರುವ ಗ್ಯಾರಂಟಿಗಳು ಸುನೀಲ್ ಬೋಸ್ ಅವರ ಗೆಲುವಿನ ಹಾದಿಯನ್ನು ಸುಗಮಗೊಳಿಸಿದೆ ಎಂದು ಇದೇ ವೇಳೆ ವಿವರಿಸಿದರು. ಚಾಮರಾಜನಗರ ಲೋಕಸಭಾ ಕ್ಷೇತ್ರದಲ್ಲಿ ಯಾವ ಬಿಜೆಪಿ ಮತ್ತು ಮೋದಿ ಅಲೆ ಇಲ್ಲ. ಅಲ್ಲಿ ಕಾಂಗ್ರೆಸ್ ಹವಾ ಇದೆ. ನಮ್ಮ ಅಭ್ಯರ್ಥಿ ಸುನೀಲ್ ಬೋಸ್ ಅವರು ಮತದಾರರ ಮನ ಗೆದ್ದಿದ್ದು, ಅವರ ಗೆಲುವು ಶತಸಿದ್ಧ ಎಂದು ಅವರು ತಿಳಿಸಿದರು.



ಬನ್ನೂರಿನ ಪುರಸಭೆ ವ್ಯಾಪ್ತಿಯಲ್ಲಿ ಮೋಂಬತ್ತಿ ಬೆಳಕಿನ ಮತದಾನ ಜಾಗೃತಿ ಮೂಡಿಸಲಾಯಿತು. ಮುಖ್ಯಾಧಿಕಾರಿ ಹೇಮಂತ್‌ಕುಮಾರ್ ಸೇರಿದಂತೆ ಸಿಬ್ಬಂದಿ ವರ್ಗದವರು ಉಪಸ್ಥಿತರಿದ್ದರು.

ಬಸ್ ಹತ್ತುವ ವೇಳೆ ಮಹಿಳೆಯರಿಬ್ಬರಿಂದ ಲಕ್ಷಾಂತರ ರೂ. ಚಿನ್ನಾಭರಣ ಕಳವು

ತಿ.ನರಸೀಪುರ, ಏ.3– ಬಸ್ ಹತ್ತುವ ವೇಳೆ ಮಹಿಳೆಯರಿಬ್ಬರ ಲಕ್ಷಾಂತರ ರೂ.ಬೆಲೆ ಬಾಳುವ ಚಿನ್ನಾಭರಣಗಳು ಕಳ್ಳತನವಾಗಿರುವ ಪ್ರತ್ಯೇಕ ಘಟನೆ ಪಟ್ಟಣದ ಕೆಎಸ್‌ಆರ್‌ಟಿಸಿ ಬಸ್ ನಿಲ್ದಾಣದಲ್ಲಿ ಸಂಭವಿಸಿದೆ.

ಕೊಳ್ಳೇಗಾಲ ತಾಲೂಕು ಪಾಳ್ಯ ಹೋಬಳಿಯ ಉಗನಿ ಗ್ರಾಮದ ಮಹಿಳೆ ಸುಂದ್ರಮ್ಮ ಹಾಗೂ ತಿ.ನರಸೀಪುರ ತಾಲೂಕು ಕೊತ್ತೇಗಾಲ ಗ್ರಾಮದ ನೇತ್ರ ಎಂಬುವರೇ ಚಿನ್ನಾಭರಣಗಳನ್ನು ಕಳೆದುಕೊಂಡ ಮಹಿಳೆಯರು. ಸುಂದ್ರಮ್ಮ ತನ್ನ ಮಗಳನ್ನು ನೋಡುವ ಸಲುವಾಗಿ ನಂಜನಗೂಡಿಗೆ ಹೋಗಿ ವಾಪಸ್ ಊರಿಗೆ ಹೋಗಲು ತಿ.ನರಸೀಪುರ ಕೆಎಸ್‌ಆರ್‌ಟಿಸಿ ಬಸ್ ನಿಲ್ದಾಣಕ್ಕೆ ಬಂದಿಳಿದಿದ್ದರು. ನೇತ್ರ ಕೊತ್ತೇಗಾಲ ಗ್ರಾಮದ ತನ್ನ ತಂದೆಯ ಮನೆಯಿಂದ ಗಂಡನ ಮನೆ ಬೆಂಗಳೂರಿಗೆ ಬಸ್ ಹತ್ತಲು ಬಸ್ ನಿಲ್ದಾಣಕ್ಕೆ ಬಂದಿಳಿದಿದ್ದರು. ಇಬ್ಬರು ಬಸ್ ಹತ್ತುವ ಸಂದರ್ಭದಲ್ಲಿ ಕಳ್ಳರು ತಮ್ಮ ಕೈಚಳಕ ತೋರಿಸಿ ಸುಂದ್ರಮ್ಮರ ಬಳಿ ಇದ್ದ 2,61,799 ರೂ.ಬೆಲೆ ಬಾಳುವ 56 ಗ್ರಾಂ. 120 ಮಿಲಿಯ 2 ಎಳೆ ಚಿನ್ನದ ಸರ ಹಾಗೂ ನೇತ್ರರವರ ವ್ಯಾನಿಟಿ ಬ್ಯಾಗ್‌ನಲ್ಲಿದ್ದ 1.90 ಲಕ್ಷ ರೂ. ಬೆಲೆ ಬಾಳುವ 20 ಗ್ರಾಂ. ಕತ್ತಿನ ಚೈನ್ ಹಾಗೂ 15 ಗ್ರಾಂ. ಕಿವಿಯೋಲೆ ಮಾಟಿಯನ್ನು ಕಳ್ಳತನ ಮಾಡಿ ಪರಾರಿಯಾಗಿದ್ದಾರೆ.

ಈ ಸಂಬಂಧ ಪಟ್ಟಣ ಪೊಲೀಸ್ ಠಾಣೆಗೆ ಸುಂದ್ರಮ್ಮ ಹಾಗೂ ನೇತ್ರ ಪ್ರತ್ಯೇಕವಾಗಿ ದೂರು ನೀಡಿದ್ದು, ಪ್ರಕರಣ ದಾಖಲಿಸಿಕೊಂಡಿರುವ ಎಎಸ್‌ಐ ಭಾನುಪ್ರಕಾಶ್ ಮುಂದಿನ ಕ್ರಮ ಕೈಗೊಂಡಿದ್ದಾರೆ.

ಹೆಚ್.ಡಿ.ಕೋಟೆ ವಕೀಲರ ಸಂಘಕ್ಕೆ ಗಂಗರಾಜು ಅಧ್ಯಕ್ಷ

ಚಿಕ್ಕನಾಯಕ ಉಪಾಧ್ಯಕ್ಷ, ಪ್ರಧಾನ ಕಾರ್ಯದರ್ಶಿ ಸಿದ್ದಪ್ಪಾಜಿ, ಜಂಟಿ ಕಾರ್ಯದರ್ಶಿ ಮಣಿರಾಜು, ಖಜಾಂಚಿ ಮಹೇಶ್

ಹೆಚ್.ಡಿ.ಕೋಟೆ, ಏ.3– ತಾಲೂಕು ವಕೀಲರ ಸಂಘದ ಕಾರ್ಯಕಾರಿಣಿ ಮಂಡಳಿ ವತಿಯಿಂದ ನಡೆದ ಚುನಾವಣೆಯಲ್ಲಿ ಅತ್ಯಂತ ಬಹುಮತದಿಂದ ನನ್ನನ್ನು ಅಧ್ಯಕ್ಷರನ್ನಾಗಿ ಆಯ್ಕೆ ಮಾಡಲಾಗಿದೆ ಎಂದು ನೂತನವಾಗಿ ಆಯ್ಕೆಯಾದ ವಕೀಲರ ಸಂಘದ ಅಧ್ಯಕ್ಷ ಗಂಗರಾಜು ತಿಳಿಸಿದರು.

ಹೆಚ್.ಡಿ.ಕೋಟೆ ಪಟ್ಟಣದ ನ್ಯಾಯಾಲಯಗಳ ಸಂಕೀರ್ಣದ ಆವರಣದಲ್ಲಿ ನಡೆದ ತಾಲೂಕು ವಕೀಲರ ಸಂಘದ ಕಾರ್ಯಕಾರಿಣಿ ಚುನಾವಣೆಯಲ್ಲಿ ಜಯಗಳಿಸಿದ ಬಳಿಕ ಮಾತನಾಡಿದರು.

ತಾಲೂಕು ವಕೀಲರ ಸಂಘವು ಸಮಾಜಮುಖಿ ಕೆಲಸಗಳನ್ನು ಮಾಡುತ್ತಾ ಬಂದಿದ್ದು, ಮುಂದಿನ ದಿನಗಳಲ್ಲೂ ಸಹ ಸಂಘದ ಅಭಿವೃದ್ಧಿಗೆ ಶ್ರಮಿಸುತ್ತಾ ಸಮಾಜಮುಖಿ ಕೆಲಸಗಳನ್ನು ಮಾಡಲಾಗುವುದು. ಅಲ್ಲದೆ ತಾಲೂಕಿನಲ್ಲಿ ಸಮಾಜದ ಕಟ್ಟ ಕಡೆಯ ವ್ಯಕ್ತಿಗೂ ಕಾನೂನಿನ ಬಗ್ಗೆ ಅರಿವು ಮೂಡಿಸುವ ಪ್ರಯತ್ನ ಮಾಡಲಾಗುವುದು ಎಂದು ತಿಳಿಸಿದರು.



ಹೆಚ್.ಡಿ.ಕೋಟೆ ತಾಲೂಕು ವಕೀಲರ ಸಂಘದ ಕಾರ್ಯಕಾರಿಣಿ ಮಂಡಳಿ ವತಿಯಿಂದ ನಡೆದ ಚುನಾವಣೆಯಲ್ಲಿ ವಕೀಲರ ಸಂಘದ ನೂತನ ಅಧ್ಯಕ್ಷರಾಗಿ ಗಂಗರಾಜು, ಉಪಾಧ್ಯಕ್ಷರಾಗಿ ಎಂ.ಸಿ.ಚಿಕ್ಕನಾಯಕ, ಪ್ರಧಾನ ಕಾರ್ಯದರ್ಶಿಯಾಗಿ ಸಿದ್ದಪ್ಪಾಜಿ, ಜಂಟಿ ಕಾರ್ಯದರ್ಶಿಯಾಗಿ ಬಿ.ಮಣಿರಾಜು, ಖಜಾಂಚಿಯಾಗಿ ಎಸ್.ಕೆ.ಮಹೇಶ್ ಆಯ್ಕೆಯಾದರು.

ಚುನಾವಣೆಯಲ್ಲಿ ಅಧ್ಯಕ್ಷರಾಗಿ ಎಸ್. ಗಂಗರಾಜು, ಉಪಾಧ್ಯಕ್ಷರಾಗಿ ಚಿಕ್ಕನಾಯಕ ಎಂ.ಸಿ. ,ಪ್ರಧಾನ ಕಾರ್ಯದರ್ಶಿಯಾಗಿ ಸಿದ್ದಪ್ಪಾಜಿ, ಜಂಟಿ ಕಾರ್ಯದರ್ಶಿಯಾಗಿ ಬಿ.ಮಣಿರಾಜು, ಖಜಾಂಚಿಯಾಗಿ ಎಸ್.ಕೆ.ಮಹೇಶ್ ಆಯ್ಕೆಯಾದರು.

ಈ ವೇಳೆ ವಕೀಲರುಗಳಾದ ಎ.ಟಿ. ಕೃಷ್ಣ, ಸೋಮಶೇಖರ್, ಬಿ.ಎಚ್ ರಮೇಶ್, ಪಿ. ನಾಗೇಂದ್ರ ಸೋಮನಾಯಕ, ಶಶಿಧರ್, ಮಹೇಶ್, ದೊರೆಸ್ವಾಮಿ, ಉಮಾಶಂಕರ್, ಹನುಮೇಶ್, ರೂಪೇಶ್ ಕುಮಾರ್, ಜೆ.ಸಿ.ಕುಮಾರ್, ಎಚ್.ಜಿ.ವೆಂಕಟೇಶ್, ಮಹೇಶ್ ಬಿ.ಎನ್.ಶ್ರೀಕಂಠ ಹಾಜರಿದ್ದರು.

ಹುಣಸೂರಲ್ಲಿ ಮತಗಟ್ಟೆ ಅಧಿಕಾರಿಗಳಿಗೆ ತರಬೇತಿ

ಹುಣಸೂರು, ಏ.3– ಲೋಕಸಭಾ ಚುನಾವಣೆ ಹಿನ್ನೆಲೆಯಲ್ಲಿ ಮತಗಟ್ಟೆ ಅಧಿಕಾರಿಗಳು ಹಾಗೂ ಸಹಾಯಕ ಅಧಿಕಾರಿಗಳಿಗೆ ಮತದಾನ ಪ್ರಕ್ರಿಯೆ ಕುರಿತು ತರಬೇತಿ ನೀಡಲಾಯಿತು.


ನಗರದ ಸಂತ ಜೋಸೆಫರ ಸಂಸ್ಥೆಯಲ್ಲಿ ನಡೆದ ಮೊದಲ ಹಂತದ ತರಬೇತಿಯಲ್ಲಿ 750 ಮಂದಿ ಮತಗಟ್ಟೆ ಅಧಿಕಾರಿಗಳು ಭಾಗವಹಿಸಿದ್ದರು. ಪ್ರತಿ ಕೊಠಡಿಗೂ ತೆರಳಿದ ಸಹಾಯಕ ಚುನಾವಣಾಧಿಕಾರಿಯಾದ ಎಸಿ ಮಹಮ್ಮದ್ ಹ್ಯಾರಿಸ್ ಸುಮೇರರವರು ತರಬೇತಿಯನ್ನು ಗಮನಿಸಿ ಅಧಿಕಾರಿಗಳಿಗೆ ಮತ ಕೇಂದ್ರ ನಿರ್ವಹಣೆ, ಮತದಾನ ಪ್ರಕ್ರಿಯೆ, ಅನುಸರಿಸಬೇಕಾದ ಕ್ರಮಗಳು, ಅಣಕು ಮತದಾನ, ಮತಯಂತ್ರ ನಿರ್ವಹಣೆ ಹೀಗೆ ಹತ್ತಾರು ಪ್ರಶ್ನೆಗಳನ್ನು ಕೇಳಿದರಲ್ಲದೆ ಅನುಸರಿಸಬೇಕಾದ ಕ್ರಮಗಳ ಬಗ್ಗೆ ಸಲಹೆ ನೀಡಿ, ಸಮಸ್ಯೆ ಬಾರದಂತೆ ಮತದಾನ ಯಶಸ್ವಿಯಾಗಿಸಿ, ಚುನಾವಣಾ ಆಯೋಗದ ನಿಯಮದಂತೆ ಕಾರ್ಯನಿರ್ವಹಿಸಿ, ಯಾವುದೇ ಅನುಮಾನವಿದ್ದಲ್ಲಿ ಮಾಹಿತಿ ಪಡೆದುಕೊಳ್ಳಿರೆಂದು ಸೂಚಿಸಿದರು. ತರಬೇತುದಾರರಿಂದಲೂ ಮಾಹಿತಿ ಪಡೆದುಕೊಂಡರು. ಏ.15ರಂದು ಎರಡನೇ ಹಂತದ ತರಬೇತಿ ನಡೆಯಲಿದೆ ಎಂದು ತಿಳಿಸಿದರು.

ಮಹಿಳಾ ಕಾಲೇಜಿನ ಪ್ರಾಚಾರ್ಯ ಪುಟ್ಟಶೆಟ್ಟಿ, ಬಿ.ಆರ್.ಸಿ. ಸಂತೋಷ್‌ಕುಮಾರ್ ಸೇರಿದಂತೆ 36ಮಂದಿ ಮಾಸ್ಟರ್ ಟ್ರೈನರ್‌ಗಳು ಮತಗಟ್ಟೆ ಅಧಿಕಾರಿಗಳು, ಸಹಾಯಕ ಮತಗಟ್ಟೆ ಅಧಿಕಾರಿಗಳಿಗೆ ಪಿ.ಪಿ.ಟಿ. ಮೂಲಕ ಮತದಾನ ನಡೆಸುವ ಬಗ್ಗೆ ಸಮಗ್ರ ಮಾಹಿತಿ ನೀಡಿದರಲ್ಲದೆ, ಮತದಾನ ಕೇಂದ್ರದ ನಿರ್ವಹಣೆ, ಇವಿಎಂ ಯಂತ್ರ ಬಳಸುವ ಬಗ್ಗೆ, ಅಣಕು ಮತದಾನ, ವಿ.ವಿ.ಪ್ಯಾಟ್ ಬಗ್ಗೆ, ದಾಖಲೆಗಳ ನಿರ್ವಹಣೆ, ಮತದಾನದ ವೇಳೆ ಮುಗಿದ ನಂತರ ಬರುವ ಮತದಾರರಿಗೆ ಮತ ಹಾಕಲು ನೀಡುವ ಅವಕಾಶ, ವಿವಿಧ ಪಕ್ಷಗಳ ಏಜೆಂಟರ ಕಾರ್ಯ ನಿರ್ವಹಣೆ, ಮಸ್ಟರಿಂಗ್, ಡಿ–ಮಸ್ಟರಿಂಗ್ ಬಗ್ಗೆ, ಲೆಕ್ಕಪತ್ರ ನಿರ್ವಹಣೆ ಹೀಗೆ ಮತದಾನದ ಎಲ್ಲಾ ಪ್ರಕ್ರಿಯೆ ಬಗ್ಗೆ ಮಾಹಿತಿ ಒದಗಿಸಿದರು. ಅಧಿಕಾರಿಗಳು ಪ್ರಶ್ನೆ ಕೇಳಿ ಅನುಮಾನ ಪರಿಹರಿಸಿಕೊಂಡರು.



ಈ ವೇಳೆ ತಹಶೀಲ್ದಾರ್ ಡಾ.ಎಂ.ನಯನ, ಜಿಲ್ಲಾ ಪೋಸ್ಟಲ್ ಬ್ಯಾಲೆಟ್ ಅಧಿಕಾರಿ ಮಂಜುನಾಥ್, ಗ್ರೇಡ್–2 ತಹಶೀಲ್ದಾರ್‌ಗಳಾದ ಯಧುಗಿರೀಶ್, ನರಸಿಂಹಯ್ಯ, ಚುನಾವಣಾ ಶಿರಸ್ತೇದಾರ್ ಕಿರಣ್‌ಕುಮಾರ್, ಬಿಇಓ ರೇವಣ್ಣ, ಉಪ ತಹಶೀಲ್ದಾರ್‌ಗಳಾದ ಅರುಣ್‌ಕುಮಾರ್, ಅರುಣ್‌ಸಾಗರ್, ಚೆಲುವರಾಜು, ರಾಜಸ್ವ ನಿರೀಕ್ಷಕರಾದ ಪ್ರಶಾಂತ್‌ರಾಜೇಅರಸ್, ನಂದೀಶ್, ಹೇಮಂತ್, ಮಂಜುನಾಥ್, ಅಂಕಿ–ಅಂಶ ವಿಭಾಗದ ಅಧಿಕಾರಿ ಚಂದ್ರಶೇಖರ್ ಸೇರಿದಂತೆ ಕಂದಾಯ ವಿಭಾಗದ ಎಲ್ಲಾ ಅಧಿಕಾರಿಗಳು ಹಾಗೂ ಸಿಬ್ಬಂದಿ ಹಾಜರಿದ್ದರು.

ಮೈಸೂರು ಚಿತ್ರಮಂದಿರಗಳಲ್ಲಿ



ಪದ್ಮ ಚಿತ್ರಮಂದಿರ	(ದೂ: 2521923)
ಟಿಲ್ಲು–2 (ತೆ)	4 ಪ್ರದರ್ಶನಗಳು,
ವುಡ್‌ಲ್ಯಾಂಡ್ಸ್ ಚಿತ್ರಮಂದಿರ	(ದೂ: 2422871)
ಯುವ (ಕ)	4 ಪ್ರದರ್ಶನಗಳು
ಬಾಲಾಜಿ ಚಿತ್ರಮಂದಿರ	(ದೂ: 2497199)
ಸೈತಾನ್ (ಹಿಂ)	4 ಪ್ರದರ್ಶನಗಳು
ಮಹದೇಶ್ವರ ಚಿತ್ರಮಂದಿರ	(ಮೊ:9900820093)
ಯುವ (ಕ)	4 ಪ್ರದರ್ಶನಗಳು
ಗಾಯಿತ್ರಿ	
ಯುವ (ಕ)	4 ಪ್ರದರ್ಶನಗಳು
ರಾಜಕಮಲ್	
ಗಾಡ್ಜಿಲ್ಲಾ ಕಾಂಗ್ (ಇಂ)	4 ಪ್ರದರ್ಶನಗಳು
ಸಂಗಂ	
ಟಿಲ್ಲು–2 (ತೆ)	4 ಪ್ರದರ್ಶನಗಳು
ಲಿಡೋ	
Mr. & Mrs. ಮನ್ಮಥ (ಕ)	4 ಪ್ರದರ್ಶನಗಳು
ತಿಬ್ಬಾದೇವಿ	
ಮಗಧೀರ (ತೆ)	4 ಪ್ರದರ್ಶನಗಳು
ಪ್ರಭಾ	
ದಿ ಗೋಟ್ ಲೈಫ್ (ಕ)	4 ಪ್ರದರ್ಶನಗಳು

ಡಿಆರ್‌ಸಿ ಸಿನಿಮಾಸ್

ದೂ : 4240422/4241800

ಸ್ಕ್ರೀನ್ 1	ಯುವ (ಕ): ಬೆ.10.30ಕ್ಕೆ, ಸಂ.4ಕ್ಕೆ, ಗಾಡ್ಜಿಲ್ಲಾ ಎಕ್ಸ್ ಕಾಂಗ್ ದಿ ನ್ಯೂ ಎಂಪೈರ್ (3ಡಿ)(ಇಂ): ಮ.1.30ಕ್ಕೆ, ರಾ.7.05ಕ್ಕೆ, ಆಡುಜೀವಿತಂ (ಮ): ರಾ.9.30ಕ್ಕೆ.
ಸ್ಕ್ರೀನ್ 2	ಯುವ (ಕ): ಬೆ.9.50ಕ್ಕೆ, ಕುಂಗ್ ಫು ಪಾಂಡ 4(3ಡಿ) (ಇಂ): ಮ.12.50ಕ್ಕೆ, ಮ.2.50ಕ್ಕೆ, ಕ್ರೂವ್ (ಹಿಂ): ಸಂ.4.50ಕ್ಕೆ, ರಾ.7.20ಕ್ಕೆ, ಟಿಲ್ಲು ಸ್ಕ್ವೇರ್ (ತೆ): ರಾ.9.55ಕ್ಕೆ.
ಸ್ಕ್ರೀನ್ 3	ಗಾಡ್ಜಿಲ್ಲಾ ಎಕ್ಸ್ ಕಾಂಗ್ ದಿ ನ್ಯೂ ಎಂಪೈರ್ (3ಡಿ)(ಇಂ): ಬೆ.10.25ಕ್ಕೆ, ರಾ.10.10ಕ್ಕೆ, ಮಂಜುಮ್ಮೆಲ್ ಬಾಯ್ಸ್ (ಮ): ಮ.12.45ಕ್ಕೆ, ಸ್ವತಂತ್ರ್ಯ ವೀರ ಸಾವರ್ಕರ್ (ಹಿಂ): ಮ.3.30ಕ್ಕೆ, ಆಡುಜೀವಿತಂ (ಮ): ಸಂ.6.50ಕ್ಕೆ.
ಸ್ಕ್ರೀನ್ 4	ಯುವ (ಕ): ಬೆ.9.50ಕ್ಕೆ, ಮ.1.10ಕ್ಕೆ, ರಾ.7ಕ್ಕೆ, ರಾ.10ಕ್ಕೆ, ಟಿಲ್ಲು ಸ್ಕ್ವೇರ್ (ತೆ): ಸಂ.4.10ಕ್ಕೆ.

ಐನಾಕ್ಸ್ ಮೂವೀಸ್

INOX LIVE THE MOVIE

ದೂ : 2533444 / 2433456

ಸ್ಕ್ರೀನ್ 1	ಟಿಲ್ಲು ಸ್ಕ್ವೇರ್ (ತೆ): ಬೆ.9.05ಕ್ಕೆ, ಗಾಡ್ಜಿಲ್ಲಾ ಎಕ್ಸ್ ಕಾಂಗ್ ದಿ ನ್ಯೂ ಎಂಪೈರ್ (3ಡಿ)(ಇಂ): ಮ.12.05ಕ್ಕೆ, ಮಂಜುಮ್ಮೆಲ್ ಬಾಯ್ಸ್ (ಮ): ಮ.2.45ಕ್ಕೆ, ಯುವ (ಕ): ಸಂ.6ಕ್ಕೆ, ಆಡುಜೀವಿತಂ (ಮ): ರಾ.9.15ಕ್ಕೆ.
ಸ್ಕ್ರೀನ್ 2	ಯುವ (ಕ): ಬೆ.9ಕ್ಕೆ, ಮ.12.15ಕ್ಕೆ, ಮ.3.30ಕ್ಕೆ, ಸಂ.6.45ಕ್ಕೆ, ರಾ.10ಕ್ಕೆ.
ಸ್ಕ್ರೀನ್ 3	ಕ್ರೂವ್ (ಹಿಂ): ಬೆ.10.55ಕ್ಕೆ, ಮ.1.40ಕ್ಕೆ, ರಾ.7.25ಕ್ಕೆ, ಟಿಲ್ಲು ಸ್ಕ್ವೇರ್ (ತೆ): ಸಂ.4.25ಕ್ಕೆ, ರಾ.10.10ಕ್ಕೆ.
ಸ್ಕ್ರೀನ್ 4	ಗಾಡ್ಜಿಲ್ಲಾ ಎಕ್ಸ್ ಕಾಂಗ್ ದಿ ನ್ಯೂ ಎಂಪೈರ್ (3ಡಿ)(ಇಂ): ಬೆ.11.25ಕ್ಕೆ, ಸಂ.5ಕ್ಕೆ, ರಾ.7.40ಕ್ಕೆ, ರಾ.10.20ಕ್ಕೆ, ಕುಂಗ್ ಫು ಪಾಂಡ 4(3ಡಿ) (ಇಂ): ಮ.2.45ಕ್ಕೆ.

ಮೈಸೂರು ವಿಷನ್ ಸಿನಿಮಾ

ದೂ : 0821–2973519

ಸ್ಕ್ರೀನ್ 1	ಪಾರ್ಕಿಂಗ್ (ಕ): ಬೆ.10.35ಕ್ಕೆ, ಸಪ್ತ ಸಾಗರದಾಚೆ ಎಲ್ಲೋ 2 (ಕ): ಮ.1.10ಕ್ಕೆ, ಬ್ಯಾಡ್ ಮ್ಯಾನರ್ಸ್ (ಕ): ಸಂ.4ಕ್ಕೆ, ಅರ್ಧಂಬರ್ಧ ಪ್ರೇಮಕಥೆ (ಕ): ಸಂ.6.35ಕ್ಕೆ, ಅನ್ನಪೂರ್ಣಿ (ತ): ರಾ.9.15ಕ್ಕೆ.
ಸ್ಕ್ರೀನ್ 2	ಅನಿಮಲ್ (ಹಿಂ): ಬೆ.10ಕ್ಕೆ, ಸಂ.6ಕ್ಕೆ, ರಾ.9.45ಕ್ಕೆ, ಸ್ಯಾಮ್ ಬಹದ್ದೂರ್ (ಹಿಂ): ಮ.1.45ಕ್ಕೆ.
ಸ್ಕ್ರೀನ್ 3	ಸ್ಯಾಮ್ ಬಹದ್ದೂರ್ (ಹಿಂ): ಬೆ.10.10ಕ್ಕೆ, ಸಂ.4.50ಕ್ಕೆ, ಅನಿಮಲ್ (ಹಿಂ): ಮ.1.05ಕ್ಕೆ, ರಾ.7.45ಕ್ಕೆ.
ಸ್ಕ್ರೀನ್ 4	ಸಪ್ತ ಸಾಗರದಾಚೆ ಎಲ್ಲೋ 2 (ಕ): ಬೆ.10.45ಕ್ಕೆ, ಅನಿಮಲ್ (ಹಿಂ): ಮ.2.40ಕ್ಕೆ, ನೆಪೋಲಿಯನ್ (ಇಂ): ಸಂ.6.25ಕ್ಕೆ, ಸ್ಯಾಮ್ ಬಹದ್ದೂರ್ (ಹಿಂ): ರಾ.9.30ಕ್ಕೆ.

ಪಿವಿಆರ್ ಸಿನಿಮಾಸ್

PVR CINEMAS

ಮೊ.ನಂ: 8951357139

ನೆಕ್ಸಸ್ ಸೆಂಟರ್‌ಸಿಟಿ ಮಾಲ್, 2ನೇ ಮಹಡಿ,

ಆರ್ಟಿಕಲ್ 370 (ಹಿಂ): ಬೆ.9ಕ್ಕೆ, ಮ.12.20ಕ್ಕೆ, ಮ.3.40ಕ್ಕೆ, ರಾ.7ಕ್ಕೆ, ರಾ.10.20ಕ್ಕೆ, ಡ್ಯೂನ್ ಪಾರ್ಟ್ 2 (ಇಂ): ಬೆ.8.30ಕ್ಕೆ, ಮ.12ಕ್ಕೆ, ಮ.3.30ಕ್ಕೆ, ರಾ.7ಕ್ಕೆ, ರಾ.10.30ಕ್ಕೆ, ಡೆಮೋನ್ ಸ್ಲೇಯರ್ (ಜ): ಸಂ.4.30ಕ್ಕೆ, ಆಪರೇಷನ್ ವ್ಯಾಲೆಂಟೈನ್ (ತೆ & ಹಿಂ): ಬೆ.9.45ಕ್ಕೆ, ಮ.3.40ಕ್ಕೆ, ಸಂ.6.35ಕ್ಕೆ, ರಾ.9.30ಕ್ಕೆ, ಲಾಪತಾ ಲೇಡಿಸ್ (ಹಿಂ): ಬೆ.10.35ಕ್ಕೆ, ಸಂ.4.10ಕ್ಕೆ, ರಾ.9.45ಕ್ಕೆ, ಮಂಜುಮ್ಮೆಲ್ ಬಾಯ್ಸ್ (ಮ): ಬೆ.10.20ಕ್ಕೆ, ಮ.1.25ಕ್ಕೆ, ರಾ.7.25ಕ್ಕೆ, ತೇರಿ ಬತೂನ್ ಮೇ ಐಸಾ ಉಲ್ಜಾ ಜಿಯಾ (ಹಿಂ): ಬೆ.11.55ಕ್ಕೆ, ಕ್ರೀಂ (ಕ): ಸಂ.6.55ಕ್ಕೆ, ಪ್ರೇಮಲು (ಮ): ರಾ.10.20ಕ್ಕೆ, ಜೋಶುವಾ (ತ): ಮ.1.20ಕ್ಕೆ, ಸಂ.6.55ಕ್ಕೆ, ಭ್ರಮಯುಗಂ (ಮ): ರಾ.9.45ಕ್ಕೆ, ವಾರನಂ ಆಯಿರಂ (ತ): ಮ.3.40ಕ್ಕೆ.

ಸೂಚನೆ : ಸಿನಿಮಾ ಮಾರ್ಗದರ್ಶಿಯಲ್ಲಿ ಮಾಹಿತಿಯನ್ನು ಪರಿಪೂರ್ಣಗೊಳಿಸಲು ನಾವು ಸಾಧ್ಯವಾದಷ್ಟೂ ಪ್ರಯತ್ನಿಸುತ್ತಿದ್ದೇವೆ. ಆದರೂ ಕೆಲವೊಮ್ಮೆ ಮಾಹಿತಿ ಅಲಭ್ಯತೆಯಿಂದ ಲೋಪಗಳು ಉಂಟಾಗುವ ಸಾಧ್ಯತೆಯಿದ್ದು, ಸಾರ್ವಜನಿಕರು ಸಹಕರಿಸಬೇಕಾಗಿ ಕಳಕಳಿ ಮನವಿ.

ಪೊಲೀಸ್ ಪೇದೆ ಮೇಲೆ ಹಲ್ಲೆ ನಡೆಸಿದ್ದ ಇಬ್ಬರ ಬಂಧನ





ನಂಜನಗೂಡು, ಏ.3– ಜಾತ್ರೆ ಸಂದರ್ಭದಲ್ಲಿ ಎರಡು ಗುಂಪಿನ ನಡುವೆ ನಡೆಯುತ್ತಿದ್ದ ಗಲಾಟೆಯನ್ನು ತಡೆಯಲು ಹೋದ ಪೇದೆ ಮೇಲೆ ಹಲ್ಲೆ ನಡೆಸಿದ್ದ ಇಬ್ಬರು ಆರೋಪಿಗಳನ್ನು ಪೊಲೀಸರು ಬಂಧಿಸಿರುವ ಘಟನೆ ತಾಲೂಕಿನ ಹಾಡ್ಯ ಗ್ರಾಮದಲ್ಲಿ ಮಂಗಳವಾರ ರಾತ್ರಿ ನಡೆದಿದೆ.

ಹುಲ್ಲಹಳ್ಳಿ ಪೊಲೀಸ್ ಠಾಣೆಯ ಎಂ.ಕುಮಾರ್ ಹಲ್ಲೆಗೆ ಒಳಗಾದ ಪೇದೆ. ಸಂತೋಷ್ ಹಾಗೂ ಆನಂದ್ ಹಲ್ಲೆ ನಡೆಸಿದವರಾಗಿದ್ದು, ಇಬ್ಬರನ್ನು ನ್ಯಾಯಾಂಗ ಬಂಧನಕ್ಕೆ ಒಪ್ಪಿಸಲಾಗಿದೆ.

ಹಾಡ್ಯ ಗ್ರಾಮದಲ್ಲಿ ಮಂಗಳವಾರ ನಡೆಯುತ್ತಿದ್ದ ಗ್ರಾಮದೇವತೆ ಜಾತ್ರೆಗೆ ಕುಮಾರ್ ಸೇರಿದಂತೆ ಇತರೆ ಪೊಲೀಸರನ್ನು ಬಂದೋಬಸ್ತ್‌ಗಾಗಿ ನಿಯೋಜಿಸಲಾಗಿತ್ತು. ಸಂಜೆ ವೇಳೆ ಎರಡು ಗುಂಪಿನ ನಡುವೆ ಕ್ಷುಲ್ಲಕ ವಿಚಾರಕ್ಕೆ ಗಲಾಟೆ ನಡೆಯುತ್ತಿತ್ತು ಎನ್ನಲಾಗಿದ್ದು, ಇದನ್ನು ತಡೆಯಲು ಹೋದ ಕುಮಾರ್ ಮೇಲೆಯೇ ಗುಂಪಿನ ಸದಸ್ಯರು ಹಲ್ಲೆ ಮಾಡಿದ್ದಾರೆ.

ಈ ವೇಳೆ ಸ್ಥಳದಲ್ಲಿದ್ದ ಇತರೆ ಪೊಲೀಸರು ಪರಿಸ್ಥಿತಿಯನ್ನು ತಿಳಿಸಿಗೊಳಿಸಿದ್ದಾರೆ. ಹಲ್ಲೆಗೊಳಗಾದ ಕುಮಾರ್ ಅವರನ್ನು ಹುಲ್ಲಹಳ್ಳಿ ಸರ್ಕಾರಿ ಆಸ್ಪತ್ರೆಗೆ ಕರೆತಂದು ಚಿಕಿತ್ಸೆ ಕೊಡಲಾಗಿದೆ. ನಂತರ ಅವರು ನೀಡಿದ ದೂರು ಆಧರಿಸಿ ಇಬ್ಬರು ಆರೋಪಿಗಳನ್ನು ಬಂಧಿಸಲಾಗಿದ್ದು, ಹುಲ್ಲಹಳ್ಳಿ ಪೊಲೀಸ್ ಠಾಣೆಯಲ್ಲಿ ಪ್ರಕರಣ ದಾಖಲಾಗಿದೆ.

ದಾಖಲೆ ಇಲ್ಲದೆ ಸಾಗಿಸುತ್ತಿದ್ದ 5 ಲಕ್ಷ ರೂ. ವಶ

ಬೆಟ್ಟದಪುರ, ಏ.3– ಯಾವುದೇ ದಾಖಲೆ ಇಲ್ಲದೆ ಸಾಗಿಸುತ್ತಿದ್ದ 5 ಲಕ್ಷ ರೂ.ಗಳನ್ನು ಪೊಲೀಸರು ಬುಧವಾರ ವಶಪಡಿಸಿಕೊಂಡಿದ್ದಾರೆ.

ಪಿರಿಯಾಪಟ್ಟಣ ತಾಲೂಕಿನ ಕೆಲ್ಲೂರು ಚೆಕ್‌ಪೋಸ್ಟ್ ಬಳಿ ಚುನಾವಣಾ ಕರ್ತವ್ಯದಲ್ಲಿದ್ದ ಅಧಿಕಾರಿಗಳು ಮತ್ತು ಪೊಲೀಸ್ ಸಿಬ್ಬಂದಿ ಮಧ್ಯಾಹ್ನ 12 ಗಂಟೆಯಲ್ಲಿ ಆವರ್ತಿ ಗ್ರಾಮದಿಂದ ಕೆಸ್ತೂರು ಕಡೆಗೆ ಬರುತ್ತಿದ್ದ ಡಸ್ಟರ್ ಕಾರ್(ಕೆಎ–09 ಎಂಜೆ–6883) ತಡೆದು ಪರಿಶೀಲಿಸಿದಾಗ ಹಣ ಪತ್ತೆಯಾಗಿದ್ದು, ಹಣವನ್ನು ಯಾವುದೇ ದಾಖಲೆ ಇಲ್ಲದೆ ಸಾಗಿಸಲಾಗುತ್ತಿತ್ತು ಎನ್ನಲಾಗಿದೆ. ಚುನಾವಣಾಧಿಕಾರಿಗಳು ಹಣವನ್ನು ವಶಕ್ಕೆ ಪಡೆದು ದಾಖಲಾತಿ ಹಾಜರುಪಡಿಸಿ ನಂತರ ಪಡೆಯುವಂತೆ ಸೂಚಿಸಿದ್ದಾರೆ.



ಮೈಸೂರು-ಕೊಡಗು ಎನ್‌ಡಿಎ ಅಭ್ಯರ್ಥಿ ಯದುವೀರ್ ಬುಧವಾರ ಜೆಡಿಎಸ್ ಕೋರ್ ಕಮಿಟಿ ಅಧ್ಯಕ್ಷರಾದ ಜಿ.ಟಿ.ದೇವೇಗೌಡರ ನೇತೃತ್ವದಲ್ಲಿ ಮತ್ತೊಂದು ಸೆಟ್ ನಾಮಪತ್ರ ಸಲ್ಲಿಸಿದರು.

ಕಾಂಗ್ರೆಸ್ ಬೆಂಬಲಿಸಲು ಮನವಿ



ನಗರದ ಖಾಸಗಿ ಹೋಟೆಲ್‌ನಲ್ಲಿ ಬುಧವಾರ ನಡೆದ ಹಿಂದುಳಿದ ಸಮುದಾಯಗಳ ಮುಖಂಡರ ಸಭೆಯಲ್ಲಿ ಕರ್ನಾಟಕ ರಾಜ್ಯ ಅತೀ ಹಿಂದುಳಿದ ವರ್ಗಗಳ ರಾಜ್ಯಾಧ್ಯಕ್ಷ ಎಂ.ಸಿ.ವೇಣುಗೋಪಾಲ್ ಮಾತನಾಡಿದರು.

ಮೈಸೂರು, ಏ.3(ಎಂಕೆ)- ಹಿಂದುಳಿದ ಹಾಗೂ ಅತೀ ಹಿಂದುಳಿದ ಸುಮಾರು 197 ಸಮುದಾಯಗಳು ಒಗ್ಗಟ್ಟಾಗಿ ಕಾಂಗ್ರೆಸ್ ಅಭ್ಯರ್ಥಿಗಳನ್ನು ಗೆಲ್ಲಿಸಲೇಬೇಕಿದೆ ಎಂದು ಕರ್ನಾಟಕ ರಾಜ್ಯ ಅತೀ ಹಿಂದುಳಿದ ವರ್ಗಗಳ ರಾಜ್ಯಾಧ್ಯಕ್ಷ ಹಾಗೂ ಎಐಸಿಸಿ ಸದಸ್ಯ ಎಂ.ಸಿ.ವೇಣುಗೋಪಾಲ್ ಹೇಳಿದರು.

ನಗರದ ಖಾಸಗಿ ಹೋಟೆಲ್‌ನಲ್ಲಿ ಮೈಸೂರು ನಗರ ಕಾಂಗ್ರೆಸ್ ಸಮಿತಿ ಹಿಂದುಳಿದ ವರ್ಗ ಹಾಗೂ ಕರ್ನಾಟಕ ರಾಜ್ಯ ಅತಿ ಹಿಂದುಳಿದ ವರ್ಗಗಳ ವತಿಯಿಂದ ಆಯೋಜಿಸಿದ್ದ ಸಭೆಯಲ್ಲಿ ಮಾತನಾಡಿದ ಅವರು, ಲೋಕಸಭಾ ಚುನಾವಣೆ ಹೋರಾಟದ ಹಿನ್ನಲೆಯಿಂದ ಬಂದಿರುವ ಮುಖ್ಯಮಂತ್ರಿ ಸಿದ್ದರಾಮಯ್ಯ ಹಾಗೂ ಹಿಂದುಳಿದ ಸಮುದಾಯದ ಸ್ವಾಭಿಮಾನದ ಪ್ರಶ್ನೆಯಾಗಿದೆ ಎಂದರು.

ರಾಜ್ಯ ಕಾಂಗ್ರೆಸ್ ಸರ್ಕಾರ ಐದು ಗ್ಯಾರಂಟಿ ಯೋಜನೆಗಳ ಮೂಲಕ ಮಹಿಳೆ ಯರಿಗೆ ಶಕ್ತಿ ನೀಡಿದೆ. ನಿರುದ್ಯೋಗಿ ಯುವಕ-ಯುವತಿಯರಿಗೆ ಆರ್ಥಿಕ ಸಹಕಾರ ನೀಡಿದೆ. ಬಡವರಿಗಂತೂ ವರದಾನವನ್ನೇ ನೀಡಿದೆ. ಹೀಗಾಗಿ ಕೇಂದ್ರದಲ್ಲಿಯೂ ಕಾಂಗ್ರೆಸ್ ಸರ್ಕಾರವೇ ಅಧಿಕಾರಕ್ಕೆ ಬರಬೇಕು. ಅದಕ್ಕಾಗಿ ಹಿಂದುಳಿದ ಹಾಗೂ ಅತೀ ಹಿಂದುಳಿದ ಸುಮಾರು 197 ಸಮುದಾಯಗಳು ಒಗ್ಗಟ್ಟಾಗಿ ಕೆಲಸ ಮಾಡಬೇಕಿದೆ ಎಂದು ಕರೆ ನೀಡಿದರು. ಮುಂದಿನ ದಿನಗಳಲ್ಲಿ ಹಿಂದುಳಿದ ಹಾಗೂ ಅತೀ ಹಿಂದುಳಿದ ಸಮುದಾಯಗಳಿಗೆ ರಾಜಕೀಯ ಕ್ಷೇತ್ರದಲ್ಲಿ ಉತ್ತಮ ಅವಕಾಶಗಳನ್ನು ನೀಡುವಂತೆ ಮುಖ್ಯಮಂತ್ರಿ ಹಾಗೂ ಉಪ ಮುಖ್ಯಮಂತ್ರಿ ಗಳಲ್ಲಿ ಮನವಿ ಮಾಡಲಾಗುವುದು. ಅದ ರಂತೆ ಅವರಿಂದಲೂ ಸಹಕಾರ ದೊರೆ ಯಲಿದೆ ಎಂಬ ವಿಶ್ವಾಸವಿದೆ. ಈ ನಿಟ್ಟಿನಲ್ಲಿ ಪ್ರತಿಯೊಬ್ಬ ಮತದಾರರು ತಮ್ಮ ಹಕ್ಕನ್ನು ಕಳೆದುಕೊಳ್ಳದೆ ಕಾಂಗ್ರೆಸ್ ಅಭ್ಯರ್ಥಿಗಳಿಗೆ ಮತ ನೀಡುವ ಮೂಲಕ ಅವರನ್ನು ಬೆಂಬಲಿಸಿ ಎಂದು ಸೂಚಿಸಿದರು.

ಮೈಸೂರು ನಗರ ಕಾಂಗ್ರೆಸ್ ಸಮಿತಿ ಹಿಂದುಳಿದ ವರ್ಗದ ಅಧ್ಯಕ್ಷ ಎನ್.ಆರ್. ನಾಗೇಶ್ ಮಾತನಾಡಿ, ಮೈಸೂರು-ಕೊಡಗು ಲೋಕಸಭಾ ಅಭ್ಯರ್ಥಿ ಎಂ.ಲಕ್ಷ್ಮಣ್ ಅವರನ್ನು ಗೆಲ್ಲಿಸುವುದು ನಮ್ಮೆಲ್ಲರ ಜವಾಬ್ದಾರಿಯಾಗಿದೆ. ಈ ನಿಟ್ಟಿನಲ್ಲಿ ಮತದಾರರ ಮನೆ ಮನೆಗೂ ತೆರಳಿ ಗ್ಯಾರಂಟಿ ಯೋಜನೆಗಳ ಬಗ್ಗೆ ಮಾಹಿತಿ ನೀಡುವುದಲ್ಲದೆ ಕಾಂಗ್ರೆಸ್‌ಗೆ ಮತ ನೀಡುವಂತೆ ಮನವೊಲಿಸಿ. ಈಗಾಗಲೇ ಮೈಸೂರು ನಗರದಲ್ಲಿ ಹಿಂದುಳಿದ ವರ್ಗ ವಿಭಾಗದಿಂದ ಮನೆ ಮನೆಗೆ ಭೇಟಿ ನೀಡಿ ಮತಯಾಚನೆ ಮಾಡಲಾಗುತ್ತಿದೆ ಎಂದು ತಿಳಿಸಿದರು.







